# ಜನಶಕ್ತಿ

ದುಡಿಯುವ ಜನರ ಪ್ರಾಣ ಮಿತ್ರ

ಕನ್ನಡ ವಾರಪತ್ರಿಕೆ

ಸಂಪುಟ 12 | ಸಂಚಿಕೆ 40 | ಅಕ್ಟೋಬರ್ 1-7, 2018 | ಪುಟ 16 | ರೂ. 10/-

web: www.janashakthi.co.in e-mail : js_weekly@yahoo.com




ಬಂಗಾಳದಲ್ಲಿ
ಮುಂದುವರೆದ
ಕೊಲೆ ರಾಜಕೀಯ

**ಕಾಂ. ಲುತ್‌ಫುರ್ ಹಕ್ ಲಾಲ್ ಸಲಾಂ!**

## 11 YEAR DIES OF STARVATION AS FAMILY DIDN'T LINK AADHAR




# ಆಧಾರವಿಲ್ಲದ ಆಶ್ವಾಸನೆ ನಂಬಿದ ತೀರ್ಪು



# ರಫೇಲ್ : ಕಟಕಟೆಯಲ್ಲಿ ಮೋದಿ

## ಕರ್ನಾಟಕದಲ್ಲಿ ಆಧುನಿಕ ಜೀತ ಪದ್ಧತಿ?






## ಬಿಜೆಪಿ 'ಆಪರೇಷನ್' ಮುಖಭಂಗ




## ಇನ್ನೊಂದು 'ಲೂಟೋ-ಭಾಗೋ'

## 8-9 ಜನವರಿ 2019




## ಸಾರ್ವತ್ರಿಕ ದೇಶವ್ಯಾಪಿ ಮುಷ್ಕರ

# ಕಲ್ಯಾಣ ಯೋಜನೆಗಳಿಗೆ ಆಧಾರ್ ಕಡ್ಡಾಯದ ಸುಪ್ರಿಂ ಕೋರ್ಟ್ ತೀರ್ಪು ದುರದೃಷ್ಟಕರ

## ಕೋಟ್ಯಂತರ ಬಡಜನರ ಸಾರ್ವತ್ರಿಕ ಹಕ್ಕುಗಳ ನಿರಾಕರಣೆ: ಸಿಪಿಐ(ಎಂ) ಪೊಲಿಟ್‌ಬ್ಯುರೊ

ಆಧಾರ್ ಯಾವುದೇ ಕಲ್ಯಾಣ ಯೋಜನೆಗೆ ಕಡ್ಡಾಯವಾಗಬಾರದು ಎಂಬುದು ಸದಾ ಸಿಪಿಐ(ಎಂ) ತಳೆದಿರುವ ನಿಲುವು. ವಾಸ್ತವ ಸಂಗತಿಯೆಂದರೆ, ಲಕ್ಷಾಂತರ ಬಡಜನರಿಗೆ ಆಧಾರ್–ಪ್ರಮಾಣೀಕರಣ ಇಲ್ಲ ಎಂಬ ಹೆಸರಿನಲ್ಲಿ ಸಾರ್ವತ್ರಿಕ ಹಕ್ಕುಗಳನ್ನು ನಿರಾಕರಿಸಲಾಗುತ್ತಿದೆ. ಇದು ತಮ್ಮ ಅಸ್ತಿತ್ವವೇ ಕಲ್ಯಾಣ ಯೋಜನೆಗಳ ಲಭ್ಯತೆಯ ಮೇಲೆ ಅವಲಂಬಿಸಿರುವ ಕೋಟ್ಯಂತರ ಬಡಜನರನ್ನು ಅಪಾಯಕ್ಕೀಡು ಮಾಡುತ್ತದೆ. ದುರದೃಷ್ಟವಶಾತ್ ಸುಪ್ರಿಂ ಕೋರ್ಟಿನ ಬಹುಮತದ ತೀರ್ಪು ಆಧಾರ್‌ಅನ್ನು ಕಡ್ಡಾಯವಾಗಿ ಉಳಿಸಿದೆ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಖೇದ ವ್ಯಕ್ತಪಡಿಸಿದೆ.

ಸುಪ್ರಿಂ ಕೋರ್ಟ್ ರಕ್ಷಣಾ ಕ್ರಮಗಳು ಎಂದು ಹೇಳಿರುವಂತವುಗಳು ಪರಿಣಾಮಕಾರಿಯಲ್ಲ ಎಂಬುದು ಸಾಬೀತಾಗುತ್ತದೆ ಎಂದಿರುವ ಪೊಲಿಟ್‌ಬ್ಯುರೊ ಆಧಾರ್ ಕಡ್ಡಾಯವಲ್ಲ ಎಂದು ಸ್ಪಷ್ಟಗೊಳಿಸಿದರೆ ಮಾತ್ರವೇ ಬಡ ಮತ್ತು ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳಿಗೆ ಸೌಲಭ್ಯಗಳು ತಲುಪಲು ಸಾಧ್ಯ ಎನ್ನುತ್ತ ಸಿಪಿಐ(ಎಂ) ಈ ನಿಟ್ಟಿನಲ್ಲಿ ತನ್ನ ಹೋರಾಟವನ್ನು ಮುಂದುವರೆಸುತ್ತದೆ ಎಂದಿದೆ.

ಸರ್ವೋಚ್ಚ ನ್ಯಾಯಾಲಯವು ಖಾಸಗಿ ಕಂಪನಿಗಳು ಆಧಾರ್ ಮಾಹಿತಿಗಳನ್ನು ಪಡೆಯುವಂತಿಲ್ಲ, ಮತ್ತು ಬ್ಯಾಂಕ್ ಖಾತೆಗಳು, ಮೊಬೈಲ್ ಸಂಪರ್ಕಗಳು, ಶೈಕ್ಷಣಿಕ ಸಂಸ್ಥೆಗಳಿಗೆ, ಪರೀಕ್ಷೆಗಳಿಗೆ ಪ್ರವೇಶಕ್ಕೆ ಆಧಾರ್ ಬೇಕಾಗಿಲ್ಲ ಎಂದೂ ತೀರ್ಪಿನಲ್ಲಿ ಹೇಳಿದೆ. ಇದು ಖಾಸಗಿತ್ವದ ಹಕ್ಕಿಗೆ ಸ್ವಲ್ಪ ಮಟ್ಟಿನ ರಕ್ಷಣೆ ನೀಡಿದರೂ, ಒಂದು ದೊಡ್ಡ ಸಮಸ್ಯೆಯೆಂದರೆ, ಈ ಕೇಂದ್ರ ಸರಕಾರ ಹಲವು ಸರಕಾರೀ ಜವಾಬ್ದಾರಿಗಳನ್ನು ಖಾಸಗೀಕರಿಸಿದೆ ಮತ್ತು ಖಾಸಗಿ ಕಂಪನಿಗಳಿಗೆ ಹೊರಗುತ್ತಿಗೆ ನೀಡಿದೆ. ಇಂತಹ ಕಂಪನಿಗಳಿಗೆ ಆಧಾರ್ ಮಾಹಿತಿಗಳು ಲಭ್ಯವಿರುತ್ತವೆ. ಇದು ಸರ್ವೋಚ್ಚ ನ್ಯಾಯಾಲಯವೇ ಒಂದು ಮೂಲಭೂತ ಹಕ್ಕು ಎಂದಿರುವ ಖಾಸಗಿತ್ವದ ಹಕ್ಕಿನ ಉಲ್ಲಂಘನೆಯಾಗುತ್ತದೆ ಎಂಬ ಸಂಗತಿಯತ್ತ ಸಿಪಿಐ(ಎಂ) ಪೊಲಿಟ್‌ಬ್ಯುರೊ ಗಮನ ಸೆಳೆದಿದೆ.

ನ್ಯಾಯಮೂರ್ತಿ ಚಂದ್ರಚೂಡ್ ತನ್ನ ಅಲ್ಪಮತದ ತೀರ್ಪಿನಲ್ಲಿ ಆಧಾರ್ ಶಾಸನವನ್ನು ಒಂದು ಹಣದ ಮಸೂದೆಯಾಗಿ ಪಾಸು ಮಾಡಿಸಿರುವುದು ಸಂವಿಧಾನಕ್ಕೆ ಮಾಡಿರುವ ಒಂದು ಮೋಸ ಎಂದು ಹೇಳಿರುವುದನ್ನು ಸಿಪಿಐ(ಎಂ) ಪೊಲಿಟ್‌ಬ್ಯುರೊ ಸ್ವಾಗತಿಸಿದೆ.

**ಸಪ್ಟಂಬರ್ 26 ರಂದು ದಿಲ್ಲಿಯಲ್ಲಿ ಸಭೆ ಸೇರಿದ ಪೊಲಿಟ್‌ಬ್ಯುರೊ ರಫೇಲ್ ಹಗರಣ, ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ವಿಪರೀತ ಏರಿಕೆ ಮತ್ತಿತರ ಬೆಳವಣಿಗೆಗಳನ್ನೂ ಚರ್ಚಿಸಿ ಪಕ್ಷದ ಅಭಿಪ್ರಾಯವನ್ನು ತಿಳಿಸುವ ಹೇಳಿಕೆಯನ್ನು ಪ್ರಕಟಿಸಿದೆ. ಅವುಗಳನ್ನು ಈ ಮುಂದೆ ಕೊಡಲಾಗಿದೆ:**

## ರಫೇಲ್ ಬಹುಕೋಟಿ ರೂಪಾಯಿ ಹಗರಣ: ತಕ್ಷಣವೇ ಜೆಪಿಸಿ ರಚಿಸಬೇಕು

36 ರಫೆಲ್ ಯುದ್ಧವಿಮಾನಗಳ ವ್ಯವಹಾರದಲ್ಲಿ ದಸ್ಸಾಲ್ಟ್ ಅವಿಯೇಶನ್ ಕಂಪನಿಯು ಅನಿಲ್ ಅಂಬಾನಿಯ ರಿಲಯಂಸ್ ಡಿಫೆನ್ಸ್ ಕಂಪನಿಯನ್ನು ತನ್ನ ಈಡು(ಆಫ್‌ಸೆಟ್) ಭಾಗೀದಾರನಾಗಿ ಆರಿಸಿದ್ದು ಭಾರತ ಸರಕಾರ ಅವರ ಹೆಸರನ್ನು ಸೂಚಿಸಿದ್ದರಿಂದಾಗಿ ಎಂದು ಈ ವ್ಯವಹಾರಕ್ಕೆ ಸಹಿ ಹಾಕಿದಾಗ ಫ್ರಾನ್ಸ್ ನ ಅಧ್ಯಕ್ಷರಾಗಿದ್ದ ಫ್ರಾಂಕೋಯ್ ಹೊಲ್ಲಾಂದೆ ಹೇಳಿಕೆ ನೀಡಿದ್ದಾರೆ. ಇದು ಅನಿಲ್ ಅಂಬಾನಿಯ ಕಂಪನಿಯ ಆಯ್ಕೆಯಲ್ಲಿ ಭಾರತ ಸರಕಾರದ ಪಾತ್ರವೇನೂ ಇಲ್ಲ ಎಂಬ ಪ್ರಧಾನ ಮಂತ್ರಿ ನರೇಂದ್ರ ಮೋದಿ ಮತ್ತು ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರ ದಾವೆ ಒಂದು ನಾಚಿಕೆಗೆಟ್ಟ ಸುಳ್ಳು ಎಂಬುದನ್ನು ಬಯಲಿಗೆಳೆದಿದೆ ಎಂದು ಸಪ್ಟಂಬರ್ 22ರಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ನೀಡಿದ ಹೇಳಿಕೆಯಲ್ಲಿ ಟೀಕಿಸಿತ್ತು.

ರಫೇಲ್ ವ್ಯವಹಾರ ಒಂದು ಮೊದಲ ದರ್ಜೆಯ ಹಗರಣ, ಅದನ್ನು ಮುಚ್ಚಿ ಹಾಕಲು ಮೋದಿ ಸರಕಾರ ಹೆಣಗಾಡುತ್ತಿದೆ ಎಂದು ಸಾಬೀತಾಗುತ್ತಿದೆ ಎನ್ನುತ್ತ ಒಂದು ಜಂಟಿ ಸಂಸದೀಯ ಸಮಿತಿಯನ್ನು ರಚಿಸಲೇ ಬೇಕು, ಈ ಮೂಲಕ ಸತ್ಯಸಂಗತಿ ಏನು ಎಂಬುದನ್ನು ತಿಳಿಯಲು ಪ್ರಧಾನ ಮಂತ್ರಿಗಳ ಪಾತ್ರದ ತನಿಖೆಯಾಗಬೇಕು ಎಂದು ಸಿಪಿಐ(ಎಂ) ಆಗ್ರಹಿಸಿತ್ತು.

ಇದನ್ನು ಸಪ್ಟಂಬರ್ 26ರಂದು ಸಭೆ ಸೇರಿದ ಪೊಲಿಟ್‌ಬ್ಯುರೊ ಪುನರುಚ್ಚರಿಸಿದೆ.

ಪ್ರಧಾನ ಮಂತ್ರಿ ಮೋದಿ ಯಾರೊಂದಿಗೆ ಈ ವ್ಯವಹಾರವನ್ನು ಅಂತಿಮಗೊಳಿಸಿದರೋ ಅವರು, ಆಗಿನ ಅಧ್ಯಕ್ಷ ಹೊಲ್ಲಾಂದೆ ಮತ್ತು ಪ್ರಸಕ್ತ ಅಧ್ಯಕ್ಷ ಮಕ್ರೋನ್ ಹೊರಗೆಡಹಿರುವ ಸಂಗತಿಗಳು ಇದರಲ್ಲಿ ಪ್ರಧಾನ ಮಂತ್ರಿಗಳೇ ಉತ್ತರಿಸಬೇಕಾದ ಹಲವಾರು ಪ್ರಶ್ನೆಗಳಿವೆ ಎಂಬುದನ್ನು ಸೂಚಿಸಿವೆ. ಈ ವ್ಯವಹಾರದ ಮರು ಚೌಕಾಸಿ ಏಕೆ ನಡೆಸಲಾಯಿತು? ಸಾರ್ವಜನಿಕ ವಲಯದ ಹೆಚ್‌ಎಎಲ್ ಜಾಗದಲ್ಲಿ ಅನಿಲ್ ಅಂಬಾನಿಯವರ ರಿಲಯಂಸ್ ಡಿಫೆನ್ಸ್ ಹೇಗೆ ಬಂತು? ಇದು ಒಂದು ಸ್ಪಷ್ಟ ಚಮಚಾ ಬಂಡವಾಳಶಾಹಿ ಪ್ರಕರಣವಲ್ಲವೇ? ಎಂದು ಪೊಲಿಟ್‌ಬ್ಯುರೊ ಪ್ರಶ್ನಿಸಿದೆ.

ಈ ಪ್ರಮಾಣದ ಒಂದು ಹಗರಣದಲ್ಲಿ ಯಾರ ಜವಾಬುದಾರಿಕೆ ಎಷ್ಟು ಎಂದು ಪರಿಶೀಲಿಸದೆ ಇರಲು ಸಾಧ್ಯವಿಲ್ಲ. ಅದನ್ನು ಜಂಟಿ ಸಂಸದೀಯ ಸಮಿತಿ(ಜೆಪಿಸಿ) ಗುರುತಿಸಬೇಕು ಮತ್ತು ಯಾರ ಹೊಣೆಗಾರಿಕೆ ಎಷ್ಟು ಎಂದು ಪಟ್ಟಿ ಮಾಡಬೇಕು. ಬಿಜೆಪಿ ಒಂದೆಡೆಯಲ್ಲಿ, ರಫೆಲ್ ವ್ಯವಹಾರ ಪೂರ್ಣವಾಗಿ ಪಾರದರ್ಶಕವಾಗಿದ್ಯೆದರಲ್ಲಿ ನೀಚತನವನ್ನು ಸೂಚಿಸುವ ಯಾವುದೇ ಸಂಗತಿಯಿಲ್ಲ ಇಲ್ಲ ಎಂದು ಹೇಳಿಕೊಳ್ಳುತ್ತಿದೆ. ಆದರೆ ಇನ್ನೊಂದೆಡೆಯಲ್ಲಿ ಜೆಪಿಸಿ ರಚಿಸುವುದನ್ನು ವಿರೋಧಿಸುತ್ತಿದೆ. ಇದು ಅಸಮರ್ಥನೀಯ. ಜೆಪಿಸಿ ವಾಣಿಜ್ಯ ವ್ಯವಹಾರವನ್ನಷ್ಟೇ ತನಿಖೆ ಮಾಡುತ್ತದೆ. ಈ ವಿಮಾನ ಖರೀದಿಯ ರಕ್ಷಣಾ ಸಂಬಂಧಿ ವಿಷಯಗಳ ತನಿಖೆಯನ್ನೇನೂ ಮಾಡುವುದಿಲ್ಲ. ಆದ್ದರಿಂದ ಜೆಪಿಸಿ ಭಾರತದ ಭದ್ರತೆಯ ಅಂಶಗಳಿಗೆ ತೊಂದರೆ ಉಂಟುಮಾಡುತ್ತದೆ ಎಂಬ ದಾರಿ ತಪ್ಪಿಸುವ ಸುಳ್ಳು ಮಾಹಿತಿ ಪ್ರಚಾರ ಒಂದು ಮೋಸ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಹಿಂದೆ ಬೊಫೋರ್ಸ್ ಹಗರಣದ ತನಿಖೆಗೆ ಜೆಪಿಸಿ ರಚನೆಗೆ ಸಂಬಂಧಪಟ್ಟಂತೆ ಬಿಜೆಪಿಯ ನಿಲುವನ್ನು ನೆನಪಿಸಬೇಕಾಗಿದೆ ಎಂದು ಹೇಳಿದೆ.

### ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಆತಂಕಕಾರಿ ಏರಿಕೆ

ಪೆಟ್ರೋಲ್ ಮತ್ತು ಡೀಸೆಲ್ ಬೆಲೆಗಳು, ಅದೇ ರೀತಿಯಲ್ಲಿ ಅಡುಗೆ ಅನಿಲ ಮತ್ತು ಸೀಮೆ ಎಣ್ಣೆ ಬೆಲೆಗಳು ವಿಪರೀತವಾಗಿ ಏರುತ್ತಲೇ ಇವೆ, ನಮ್ಮ ದೇಶದ ಕೋಟ್ಯಂತರ ಜನಗಳ ಮೇಲೆ ಅಭೂತಪೂರ್ವ ಹೊರೆಗಳನ್ನು ಹಾಕುತ್ತಿವೆ. ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳಲ್ಲಿ ಏರಿಕೆಗಳು ಉಂಟು ಮಾಡುವ ಪ್ರಭಾವಗಳಿಂದಾಗಿ ಒಟ್ಟಾರೆ ಹಣದುಬ್ಬರ ಮಟ್ಟವನ್ನು ಅದು ತಟ್ಟುತ್ತದೆ, ಆಮೂಲಕ ನಮ್ಮ ಜನಗಳ ಬಹು ದೊಡ್ಡ ವಿಭಾಗದ ಜೀವನ ಮಟ್ಟ ತೀವ್ರವಾಗಿ ಹದಗೆಡುತ್ತಿದೆ ಎಂದು ಪೊಲಿಟ್‌ಬ್ಯುರೊ ಅಭಿಪ್ರಾಯ ಪಟ್ಟಿದೆ.

### ಕೇರಳ: ಕೇಂದ್ರ ತಕ್ಷಣ ಅನುದಾನ ಒದಗಿಸಬೇಕು

ಕೇರಳದಲ್ಲಿ ಇತ್ತೀಚಿನ ಅಭೂತಪೂರ್ವ ಪ್ರವಾಹದಿಂದ ಪೀಡಿತರಾದ ಜನಗಳ ಪರಿಹಾರ ಮತ್ತು ಮರು ವಸತಿಗೆ ಎಲ್‌ಡಿಎಫ್ ರಾಜ್ಯಸರಕಾರ ನಡೆಸುತ್ತಿರುವ ಪ್ರಯತ್ನಗಳ ಬಗ್ಗೆ ಪೊಲಿಟ್‌ಬ್ಯುರೊ ಸಭೆ ಮೆಚ್ಚುಗೆ ವ್ಯಕ್ತಪಡಿಸಿತು.

ಈ ಕಾರ್ಯಗಳ ವೆಚ್ಚಕ್ಕೆ ತಕ್ಷಣವೇ 5000 ಕೋಟಿ ರೂ.ಗಳ ವಿಶೇಷ ಅನುದಾನ ಸೇರಿದಂತೆ ಮುಖ್ಯಮಂತ್ರಿಗಳ ಆಗ್ರಹಗಳನ್ನು ಒಪ್ಪಿಕೊಳ್ಳಬೇಕು ಪೊಲಿಟ್‌ಬ್ಯರೊ ಕೇಂದ್ರ ಸರಕಾರಕ್ಕೆ ಕರೆ ನೀಡಿದೆ.

ಒಟ್ಟು ಹಾನಿ 30,000 ಕೋಟಿ ರೂ.ಗಳು ಎಂದು ಅಂದಾಜು ಮಾಡಲಾಗಿದೆ. ಸಿಪಿಐ(ಎಂ) ತಾನೇ ದೇಶಾದ್ಯಂತ ಹತ್ತಾರು ಕೋಟಿ ರೂ.ಗಳನ್ನು ಸಂಗ್ರಹಿಸಿ ಮುಖ್ಯಮಂತ್ರಿಗಳು ಪರಿಹಾರ ನಿಧಿಗೆ ಕಳಿಸಿದೆ ಎಂದೂ ಪೊಲಿಟ್‌ಬ್ಯುರೊ ಗಮನಿಸಿತು.

### ತ್ರಿಪುರಾ: ಹಲ್ಲೆಗಳು ಮುಂದುವರೆಯುತ್ತಿವೆ

ತ್ರಿಪುರಾದಲ್ಲಿ ಬಿಜೆಪಿ–ಐಪಿಎಫ್‌ಟಿ ರಾಜ್ಯ ಸರಕಾರ ಜನತೆಯ ಮೇಲೆ ಮುಂದುವರೆಸುತ್ತಿರುವ ದಾಳಿಗಳನ್ನು ಪೊಲಿಟ್‌ಬ್ಯುರೊ ಖಂಡಿಸಿದೆ. ಇತ್ತೀಚಿನ ಸ್ಥಳೀಯ ಸಂಸ್ಥೆಗಳ ಉಪಚುನಾವಣೆ ಒಂದು ಪೂರ್ಣ ಪ್ರಹಸನವಾಗಿದೆ, ಪ್ರತಿಪಕ್ಷಗಳ ಅಭ್ಯರ್ಥಿಗಳಿಗೆ ನಾಮಪತ್ರ ಸಲ್ಲಿಸಲು ಕೂಡ ಬಿಟ್ಟಿಲ್ಲ, ಅಲ್ಲಿ ಪ್ರಜಾಪ್ರಭುತ್ವದ ನಗ್ನ ಕೊಲೆ ನಡೆಯುತ್ತಿದೆ ಎಂದು ಪೊಲಿಟ್‌ಬ್ಯುರೊ ಹೇಳಿದೆ.

### ಬೃಹತ್ ಮಜ್ದೂರ್–ಕಿಸಾನ್ ರ‍್ಯಾಲಿ

ರಾಷ್ಟ್ರವ್ಯಾಪಿ ಪ್ರತಿಭಟನಾ ಕಾರ್ಯಕ್ರಮಗಳಾದ ಆಗಸ್ಟ್ 9ರ ಜೈಲ್ ಭರೋ ಮತ್ತು ಸಪ್ಟಂಬರ್ 5ರ ಸಂಸತ್ ಮುಂದೆ ನಡೆದ ರ‍್ಯಾಲಿಯಲ್ಲಿ ಕಾರ್ಮಿಕರು, ರೈತರು ಮತ್ತು ಕೃಷಿ ಕೂಲಿಕಾರರು ದೊಡ್ಡ ಪ್ರಮಾಣದಲ್ಲಿ ಭಾಗವಹಿಸಿರುವುದನ್ನು ಪೊಲಿಟ್‌ಬ್ಯುರೊ ಪ್ರಶಂಸಿಸಿದೆ.

### ಪ್ರತಿಭಟನೆ ಬೆಂಬಲಿಸುವವರಿಗೆ ಕಿರುಕುಳ

ದಲಿತ ಪ್ರತಿಭಟನಾಕಾರರೊಂದಿಗೆ ಸೌಹಾರ್ದ ವ್ಯಕ್ತಪಡಿಸಿರುವ, ಎಪ್ರಿಲ್2 ರ ಅಖಿಲ ಭಾರತ ಬಂದ್ ಮತ್ತು ನಂತರ ದಲಿತರ ಮೇಲೆ ನಡೆಸಿರುವ ದಮನದ ವಿರುದ್ಧ ಪ್ರತಿಭಟನೆಗಳಿಗೆ ಬೆಂಬಲವಾಗಿ ನಿಂತಿರುವ ಬುದ್ಧಿಜೀವಿಗಳು ಮತ್ತು ವಕೀಲರ ಮೇಲೆ ‘ಕಾನೂನುಬಾಹಿರ ಚಟುವಟಿಕೆಗಳ ತಡೆ ಕಾಯ್ದೆ’(ಯುಎಪಿಎ) ಅಡಿಯಲ್ಲಿ ಸುಳ್ಳು ಕೇಸುಗಳನ್ನು ಹಾಕಿರುವುದು, ಮತ್ತು ಬಂಧಿಸಿರುವುದನ್ನು ಪೊಲಿಟ್‌ಬ್ಯುರೊ ಖಂಡಿಸಿದೆ.

ನಿವೃತ್ತ ಹಿರಿಯ ಪೋಲೀಸ್ ಅಧಿಕಾರಿ ಸಂಜೀವ ಭಟ್ ವಿಷಯದಲ್ಲಿ ಸುಪ್ರಿಂ ಕೋರ್ಟ್ ಆದೇಶವನ್ನು ಗುಜರಾತ್ ಸರಕಾರ ತಕ್ಷಣವೇ ಪಾಲಿಸಬೇಕು ಎಂದೂ ಪೊಲಿಟ್‌ಬ್ಯುರೊ ಆಗ್ರಹಿಸಿದೆ.

### ಚುನಾವಣಾ ಕಾರ್ಯತಂತ್ರಗಳು

ಮುಂಬರುವ ರಾಜಸ್ಥಾನ, ಮಧ್ಯಪ್ರದೇಶ, ಛತ್ತೀಸ್‌ಗಡ ಮತ್ತು ತೆಲಂಗಾಣದಲ್ಲಿ ನಡೆಯಲಿರುವ ವಿಧಾನಸಭಾ ಚುನಾವಣೆಗಳಲ್ಲಿ ಅನುಸರಿಸಬೇಕಾದ ಕಾರ್ಯಕತಂತ್ರಗಳನ್ನು ಚರ್ಚಿಸಿತು. ಇದನ್ನು ಅಕ್ಟೋಬರ್ 6ರಿಂದ 8ರ ವರೆಗೆ ನಡೆಯಲಿರುವ ಸಿಪಿಐ(ಎಂ) ಕೇಂದ್ರ ಸಮಿತಿಯ ಮುಂದಿಡಲಾಗುವುದು. ಆ ಕೇಂದ್ರ ಸಮಿತಿ ಸಭೆಯಲ್ಲಿ 2019ರ ಸಾರ್ವತ್ರಿಕ ಚುನಾವಣೆಗಳ ಕಾರ್ಯತಂತ್ರಗಳನ್ನು ಕೂಡ ಚರ್ಚಿಸಲಾಗುವುದು ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿಕೆ ತಿಳಿಸಿದೆ.

## ವ್ಯಭಿಚಾರ ಕುರಿತ ಸೆಕ್ಷನ್ 497 –ಸುಪ್ರಿಂ ಕೋರ್ಟ್ ತೀರ್ಪಿಗೆ ಎಐಡಿಡಬ್ಲ್ಯುಎ ಸ್ವಾಗತ

ಭಾರತೀಯ ದಂಡ ಸಂಹಿತ(ಐಪಿಸಿ)ಯ ಸೆಕ್ಷನ್ 497 ಸಂವಿಧಾನ ಬಾಹಿರ ಎಂದು ಹೇಳಿ ಅದನ್ನು ಅಸಿಂಧುಗೊಳಿಸಿರುವ ಸರ್ವೋಚ್ಚ ನ್ಯಾಯಾಲಯದ ತೀರ್ಪನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ (ಎಐಡಿಡಬ್ಲ್ಯುಎ) ಸ್ವಾಗತಿಸಿದೆ.

ಈ ಸೆಕ್ಷನ್ 158 ವರ್ಷಗಳ ಹಿಂದೆ ಬ್ರಿಟಿಷ್ ಆಡಳಿತದಲ್ಲಿ ಜಾರಿಗೆ ಬಂದ ಓಬೀರಾಯನ ಕಾಲದ ಸೆಕ್ಷನ್. ಇದರ ಪ್ರಕಾರ ಪರಸತಿಯ ಜೊತೆ ಆಕೆಯ ಪತಿಯ ಒಪ್ಪಿಗೆ ಅಥವಾ ಸಹಕಾರವಿಲ್ಲದೇ ಪರ ಪುರುಷರು ಸಂಭೋಗ ನಡೆಸುವುದು ಕ್ರಿಮಿನಲ್ ಅಪರಾಧ. ಇದರ ಅನ್ವಯ ಗಂಡ ಆ ಪುರುಷನ ಮೇಲೆ ಮಾತ್ರ ದೂರು ದಾಖಲಿಸಬಹುದೇ ಹೊರತು ಮಹಿಳೆಯ ವಿರುದ್ಧ ದಾಖಲಿಸಲು ಅವಕಾಶವಿರಲಿಲ್ಲ. ಮತ್ತು ಈ ಅಪರಾಧಕ್ಕೆ ಐದು ವರ್ಷಗಳ ಸೆರೆವಾಸದ ಶಿಕ್ಷೆ ವಿಧಿಸಬಹುದು.

ಬಹಳಷ್ಟು ಪ್ರಕರಣಗಳಲ್ಲಿ ತನ್ನ ಹೆಂಡತಿ ಬೇರೊಬ್ಬರ ಜೊತೆ ಸಂಬಂಧ ಹೊಂದಿದ್ದರೆ ಅವರ ಮೇಲೆ ಸೇಡು ತೀರಿಸಿಕೊಳ್ಳಲು ಇದನ್ನು ಬಳಸಲಾಗುತ್ತಿದೆ. ಹೀಗೆ ಹೆಂಡತಿಯೆಂದರೆ ಗಂಡನ ಸೊತ್ತೆಂದೇ ಈ ಸೆಕ್ಷನ್ ಪರಿಗಣಿಸಿತ್ತು.

ಹೆಚ್ಚಿನ ದೇಶಗಳಲ್ಲಿ, ಈ ಹಿಂದೆ ವ್ಯಭಿಚಾರವನ್ನು ಒಂದು ಅಪರಾಧ ಎಂದು ಪರಿಗಣಿಸಿದ್ದ ಯ.ಕೆ.(ಇಂಗ್ಲೆಂಡ್)ಯಲ್ಲೂ ಇದನ್ನು ಅಪರಾಧ ಎಂದು ಪರಿಗಣಿಸುವುದನ್ನು ಕೈ ಬಿಡಲಾಗಿದೆ. ಇದು ಹಳೆಯ ಕಾಲದ್ದು, ಪ್ರತಿಗಾಮಿ ಎಂದು ಸರಿಯಾಗಿ ಅರ್ಥೈಸಿರುವ ಸರ್ವೋಚ್ಚ ನ್ಯಾಯಾಲಯ ಇದನ್ನು ಸಿವಿಲ್ ತಪ್ಪು ಎಂದು ಪರಿಗಣಿಸಬೇಕೇ ಹೊರತು ಕ್ರಿಮಿನಲ್ ಅಪರಾಧವೆಂದು ಅಲ್ಲ ಎಂದು ಹೇಳಿರುವುದು ಸರಿಯಾಗಿಯೇ ಇದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

ದಂಪತಿಗಳಲ್ಲಿ ಯಾರೇ ವಿವಾಹೇತರ ಲೈಂಗಿಕ ಸಂಬಂಧ ಹೊಂದಿದ್ದರೆ, ಮತ್ತೊಬ್ಬರಿಗೆ ವಿವಾಹ ವಿಚ್ಛೇದನ ಕೋರಲು; ವೈವಾಹಿಕ ಪರಿಹಾರ ಪಡೆಯಲು ಬೇರೆ ಅವಕಾಶಗಳಿವೆ. ಮಹಿಳೆಯರು ಮಾನಸಿಕ, ದೈಹಿಕ ಹಿಂಸೆ, ಕಿರುಕುಳಗಳನ್ನು ಎದುರಿಸಿದ್ದರೆ ಕೌಟುಂಬಿಕ ಹಿಂಸಾಚಾರ ನಿಷೇಧ ಕಾಯ್ದೆಯಡಿ ಹಣಕಾಸಿನ ನೆರವು, ಪ್ರತ್ಯೇಕ ವಸತಿ ಮತ್ತು ಪರಿಹಾರ ಪಡೆಯುವ ಅವಕಾಶವಿದೆ. ಅಲ್ಲದೆ ವ್ಯಭಿಚಾರದೊಂದಿಗೆ ಆಕೆ ಕ್ರೌರ್ಯ ಮತ್ತು ದೌರ್ಜನ್ಯವನ್ನು ಎದುರಿಸಿದ್ದರೆ ಐ.ಪಿ.ಸಿ. 498ಎ ಅಡಿಯಲ್ಲಿ ದೂರು ದಾಖಲಿಸಲೂ ಅವಕಾಶವಿದೆ ಎಂದು ಎಐಡಿಡಬ್ಲ್ಯುಎ ಹೇಳಿದೆ.

## “‘ಸರ್ಜಿಕಲ್ ಸ್ಟ್ರೈಕ್’ ಸುತ್ತೋಲೆಯನ್ನು ಹಿಂತೆಗೆದುಕೊಳ್ಳಿ”

ಸೆಪ್ಟಂಬರ್ 28 ನ್ನು ‘ಮಿಂಚಿನ ಪ್ರಹಾರ ದಿನ’(ಸರ್ಜಿಕಲ್ ಸ್ಟ್ರೈಕ್ ಡೇ)ವಾಗಿ ಆಚರಿಸಬೇಕು ಎಂದು ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯದ ನಿರ್ದೇಶನದ ಮೇರೆಗೆ ಯುಜಿಸಿ ಸುತ್ತೋಲೆ ಹೊರಡಿಸಿರುವುದು ಆಕ್ರೋಶಕಾರಿ ಮತ್ತು ಆಕ್ಷೇಪಕಾರಿ, ಏಕೆಂದರೆ ಇದು ಆಳುವ ಪಕ್ಷದ ರಾಜಕೀಯ ಅಜೆಂಡಾವನ್ನು ಮುಂದೊಯ್ಯಲು ದೇಶದಲ್ಲಿ ಒಂದು ಸಂಕುಚಿತ ಸ್ವರೂಪದ ದೇಶಭಕ್ತಿಯ ವಾತಾವರಣವನ್ನು ನಿರ್ಮಿಸುವ ಪ್ರಯತ್ನ ಎಂದು ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿದೆ. **ಈ ಸರಕಾರ ತನ್ನ ಸಂಕುಚಿತ ಅಜೆಂಡಾವನ್ನು ಮುಂದೊತ್ತಲು ಪ್ರಜಾಪ್ರಭುತ್ವದ ಕನಿಷ್ಟ ವಿಧಿವಿಧಾನಗಳ ಬಗ್ಗೆ ಮತ್ತು ಸ್ವಾಯತ್ತ ಸಂಸ್ಥೆಗಳ ಗೌರವದ ಬಗ್ಗೆ ಎಂತಹ ತುಚ್ಛೀಕಾರದ ನಿಲುವು ಹೊಂದಿದೆ ಎಂಬುದಕ್ಕೆ ಇದು ಮತ್ತೊಂದು ಉದಾಹರಣೆ.**

ಒಂದು ಸ್ವಾಯತ್ತ ಸಂಸ್ಥೆಯೆನಿಸಿರುವ ಯು.ಜಿ.ಸಿ. ಶೈಕ್ಷಣಿಕ ಸಂಸ್ಥೆಗಳಿಗೆ ನಿರ್ದೇಶನಗಳನ್ನು ಹೊರಡಿಸಲು ಚಿತಾವಣೆ ಮಾಡಿರುವುದಷ್ಟೇ ಅಲ್ಲ, ಮಾಧ್ಯಮಗಳಿಗೂ ಈ ‘ಮಿಂಚಿನ ಪ್ರಹಾರ’ಗಳ ಬಗ್ಗೆ ಕಾರ್ಯಕ್ರಮಗಳನ್ನು ನಡೆಸುವಂತೆ ಹೇಳಲಾಗಿದೆ. ಇದು ಪತ್ರಿಕಾ ಸ್ವಾತಂತ್ರ್ಯದಲ್ಲಿ ಒಂದು ನೇರ ಹಸ್ತಕ್ಷೇಪವಾಗಿದೆ. ನಂತರ, ಮಂತ್ರಿಗಳಾದ ಪ್ರಕಾಶ ಜಾವಡೇಕರ್ ಇದು ಕಡ್ಡಾಯವೇನಲ್ಲ ಎಂದು ಹೇಳಿಕೆ ನೀಡಿರುವುದು ಈ ಸುತ್ತೋಲೆಗೆ ಬಲವಾದ ವಿರೋಧ ಬಂದಾಗ ಕೊಟ್ಟಿರುವ ದುರ್ಬಲ ಸಮರ್ಥನೆಯಲ್ಲದೇ ಬೇರೇನೂ ಅಲ್ಲ ಎಂದಿರುವ ಸಿಪಿಐ(ಎಂ) ಪೊಲಿಟ್‌ಬ್ಯುರೊ ಈ ಸುತ್ತೋಲೆಯನ್ನು ತಕ್ಷಣ ಹಿಂತೆದುಕೊಳ್ಳಬೇಕು ಎಂದು ಆಗ್ರಹಿಸಿದೆ.

# ಕರ್ನಾಟಕದಲ್ಲಿ ಜೀತಪದ್ಧತಿ ಆಧುನಿಕ ರೂಪ ತಳೆಯುತ್ತಿದೆಯೇ?

ಸಂಪಾದಕೀಯ



ರಾಜ್ಯದಲ್ಲಿ ಕಳೆದ ಕೆಲವು ದಿನಗಳಲ್ಲಿ ಜೀತ ಪದ್ಧತಿ ಸುದ್ದಿಯಲ್ಲಿತ್ತು. ನಾಗೇಶ್ ಎಂಬ ಮಾಲಿಕನ ಬಳಿ ಜೀತ ಬಿಟ್ಟು ಬಂದು ಮನೆಗೆಲಸ ಮಾಡಿಕೊಂಡು ಬದುಕುತ್ತಿದ್ದ ಜಾನಕಮ್ಮ ಎಂಬ ಮಹಿಳೆಯನ್ನು ಗೂಂಡಾಗಳು ಹೊತ್ತೊಯ್ದು ಜೀತಕ್ಕೆ ದುಡಿಯುವಂತೆ ಬಲವಂತ ಮಾಡಿದ ಪ್ರಕರಣ ವರದಿಯಾಗಿತ್ತು. ಮಹಿಳೆ ನಾಗೇಶ್ ರವರ ಹೊಲ, ಕಟ್ಟಡಗಳ ಕೆಲಸ ಮಾಡುತ್ತಿದ್ದವಳು. ಗಂಡ ಅದೇ ವ್ಯಕ್ತಿಯ ಬಳಿ ಜೀತ ಮಾಡುತ್ತ ಹಂದಿ ಸಾಕಾಣಿಕೆಯ ಸ್ವಚ್ಛತಾ ಕೆಲಸ ಮಾಡುತ್ತ ಸತ್ತಿದ್ದಾನೆ. ಗಂಡ ಸತ್ತ ನಂತರ ಜೀತ ಮಾಡಲಾಗುವುದಿಲ್ಲ ಎಂದು ಹೊರಬಂದಿದ್ದಳು. ಇದು ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಬಸವನಪುರ(ಗೆಜ್ಜಲಗೆ)ಯಲ್ಲಿ ನಡೆದ ಪ್ರಕರಣ. ಈ ಪ್ರಕರಣ ಸಾಮಾಜಿಕ ಮಾಧ್ಯಮಗಳಲ್ಲಿ ಸುದ್ದಿಯಾಗಿ, ಸಾಮಾಜಿಕ ಚಳುವಳಿ ಸಂಘಟನೆಗಳ ಒತ್ತಡದಿಂದ ಪೋಲಿಸರು ಮತ್ತು ಸರಕಾರ ಕ್ರಮ ವಹಿಸಬೇಕಾಗಿ ಬಂದಿತ್ತು. ಆದರೆ ಎಷ್ಟೋ ಇಂತಹ ಪ್ರಕರಣಗಳು ಬೆಳಕಿಗೆ ಬರದಿರುವ ಸಾಧ್ಯತೆ ಹೆಚ್ಚು.

ಕಾಕತಾಳೀಯವೋ ಎಂಬಂತೆ, ರಾಜ್ಯದ ಮೂರು ಜಿಲ್ಲೆಗಳಲ್ಲಿ ಮಾಡಿದ ಸಮೀಕ್ಷೆಯ ಪ್ರಕಾರ 'ಅನೌಪಚಾರಿಕ ಕ್ಷೇತ್ರ' ಎಂದು ಕರೆಯಲಾಗುವ ಉದ್ಯಮಗಳಲ್ಲಿ ಮೂವರಲ್ಲಿ ಒಬ್ಬರು ಜೀತ ಪದ್ಧತಿಯಂತೆ ದುಡಿಯುತ್ತಿದ್ದಾರೆ ಎನ್ನುವ ದಂಗು ಬಡಿಸುವ ವಿಷಯ, ಕಳೆದ ವಾರ ಬೆಂಗಳೂರಿನಲ್ಲಿ ಜೀತ ಪದ್ಧತಿ ಬಗ್ಗೆ ನಡೆದ ವಿಚಾರ ಸಂಕಿರಣವೊಂದರಲಿ ಬೆಳಕಿಗೆ ಬಂದಿದೆ. 'ಇಂಟರ್-ನ್ಯಾಶನಲ್ ಜಸ್ಟೀಸ್ ಮಿಶನ್' (ಐಜೆಎಂ)ಎನ್ನುವ ಸರ್ಕಾರೇತರ ಸಂಸ್ಥೆ ನಡೆಸಿದ ಈ ಸಮೀಕ್ಷೆಯ ವರದಿಯನ್ನು ಸೆಪ್ಟೆಂಬರ್ 20ರಂದು ಬೆಂಗಳೂರಿನಲ್ಲಿ ಜೀತದ ದುಡಿಮೆ ಬಗ್ಗೆ ನಡೆದ ವಿಚಾರ ಸಂಕಿರಣದಲ್ಲಿ ಬಿಡುಗಡೆ ಮಾಡಲಾಗಿತ್ತು. ಇದರಲ್ಲಿ ರಾಜ್ಯ ಸರಕಾರದ ಅಧಿಕಾರಿಗಳು, ಈ ಕ್ಷೇತ್ರದಲ್ಲಿ ಅಧ್ಯಯನ ಸಂಶೋಧನೆ ಮಾಡುವವರು ಭಾಗವಹಿಸಿದ್ದರು.

ಈ ವರದಿ 2015ರಲ್ಲಿ ಬೆಂಗಳೂರು ನಗರ, ಬೆಂಗಳೂರು ಗ್ರಾಮೀಣ ಮತ್ತು ರಾಮನಗರ ಜಿಲ್ಲೆಯ 17 ಮಾರುಕಟ್ಟೆಗಳಲ್ಲಿ 4306 ವ್ಯಕ್ತಿಗಳ 10 ನಿಮಿಷಗಳ ಸಂದರ್ಶನದ ಮೇಲೆ ಆಧಾರಿತ ಅಧ್ಯಯನದ ಫಲವಾಗಿತ್ತು. ಜೀತದಾಳುಗಳನ್ನು ವಾರಕ್ಕೊಮ್ಮೆ ತಮ್ಮ ಆಹಾರ ಇತ್ಯಾದಿ ಅಗತ್ಯ ವಸ್ತುಗಳನ್ನು ಖರೀದಿ ಮಾಡಿ ತರಲು ತಾಲೂಕಿನ ಮಾರುಕಟ್ಟೆಗೆ ಕಳಿಸುತ್ತಾರೆ ಎಂಬ ಊಹೆಯ ಮೇಲೆ ಅಧ್ಯಯನ ಆಧಾರಿತವಾಗಿದೆ. ಸಂದರ್ಶನಗಳ ಆಧಾರದ ಮೇಲೆ 1439 (ಅಥವಾ ಶೇ. 33.4 ಅಥವಾ ಮೂವರಲ್ಲಿ ಒಬ್ಬರು) "ಜೀತದ ಪರಿಸ್ಥಿತಿ"ಯಲ್ಲಿ ಕೆಲಸ ಮಾಡುತ್ತಿದ್ದಾರೆ ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಇಲ್ಲಿ "ಜೀತದ ಪರಿಸ್ಥಿತಿ" ಎಂದು ನಿರ್ಧರಿಸಲು – ಕಾರ್ಮಿಕರ ಚಲನವಲದ ಮೇಲೆ ತೀವ್ರ ನಿರ್ಬಂಧ, ಸಾಲ ಅಥವಾ ಮುಂಗಡ ಮೂಲಕ ಕಾರ್ಮಿಕನ ಮೇಲೆ ಹಿಡಿತ, ಕನಿಷ್ಟ ವೇತನಕ್ಕಿಂತ ಕಡಿಮೆ ವೇತನ ಇತ್ಯಾದಿ – ಅಂಶಗಳನ್ನು ಪರಿಗಣಿಸಲಾಗಿದೆ. ಈ ಮೂರು ಜಿಲ್ಲೆಗಳಲ್ಲಿ ಸುಮಾರು 5.6 ಲಕ್ಷ ಜೀತದಾಳುಗಳು ಇದ್ದಾರೆ ಎಂದು ಅಧ್ಯಯನ ಅಂದಾಜು ಮಾಡಿದೆ.

ಇಟ್ಟಿಗೆ ಗೂಡುಗಳು (45%), ಕಲ್ಲಿನ ಗಣಿಗಳು (44%) ಕಟ್ಟಡ ನಿರ್ಮಾಣ (31%), ಸಣ್ಣ ಕಾರ್ಖಾನೆಗಳು (31%) ಹೆಚ್ಚಿನ ಪ್ರಮಾಣದಲ್ಲಿ ಜೀತದಾಳುಗಳನ್ನು ಬಳಸುತ್ತವೆ. ಕಬ್ಬು ಮತ್ತು ಇತರ ಕೃಷಿ ಕೆಲಸಗಳಲ್ಲೂ ಗಮನಾರ್ಹ ಪ್ರಮಾಣದಲ್ಲಿ ಜೀತದಾಳುಗಳು ಇದ್ದಾರೆ. ಸುಮಾರು ಶೇ. 60ರಷ್ಟು ಕಾರ್ಮಿಕರು ಹೊರರಾಜ್ಯಗಳಿಂದ ವಲಸೆ ಬಂದವರು. ಶೇ. 30 ರಷ್ಟು ಕಾರ್ಮಿಕರನ್ನು ರಾಜ್ಯದ ಒಳಗಿಂದ ಮತ್ತು ಹೊರ ರಾಜ್ಯಗಳಿಂದ ಮೋಸದಿಂದ, ಅಥವಾ ಬಲಾತ್ಕಾರವಾಗಿ ಕರೆತಂದು ಜೀತದ ದುಡಿತಕ್ಕೆ ಹಚ್ಚಲಾಗಿದೆ. ಅರ್ಧಕ್ಕೂ ಹೆಚ್ಚು ಜೀತದಾಳುಗಳು ಕೆಲಸದ ಸ್ಥಳದಲ್ಲೇ ವಾಸಿಸುತ್ತಿದ್ದು ಹೊರಗೆ ಹೋಗುವ ಅವಕಾಶವೇ ಇರುವುದಿಲ್ಲ ಎಂದು ವರದಿ ಹೇಳಿದೆ.

ರಾಜ್ಯ ಸರಕಾರದ ಪ್ರತಿನಿಧಿಗಳು ಈ ವರದಿಯನ್ನು "ಊಹಾಪೋಹ ಮತ್ತು ತಪ್ಪು" ಎಂದು ನಿರಾಕರಿಸಿದ್ದಾರೆ. ರೆವಿನ್ಯೂ ಇಲಾಖೆ ಪ್ರಮಾಣೀಕರಣ ಮಾಡದೆ ಯಾರನ್ನೂ ಜೀತದಾಳುಗಳು ಎನ್ನುವಂತಿಲ್ಲ. ಅವರ ಪ್ರಕಾರ ಜಿಲ್ಲಾ ಆಡಳಿತದ ಸಮೀಕ್ಷೆಗಳ ಪ್ರಕಾರ ಕೇವಲ 4500 ಜೀತದಾಳುಗಳು ರಾಜ್ಯದಲ್ಲಿದ್ದಾರೆ. ಅವರಲ್ಲಿ 1780 ಜೀತದಾಳುಗಳ ಪುನರ್ವಸತಿ ಮಾಡಲಾಗಿದೆ ಎನ್ನುತ್ತಾರೆ. ಆದರೆ ಅವರು ಐಜೆಎಂ ಅಧ್ಯಯನದ ವಿಧಾನದಲ್ಲಿ ತಪ್ಪೇನಿದೆ ಎಂದು ತೋರಿಸುವ ಗೋಜಿಗೆ ಹೋಗಿಲ್ಲ.

ಕೆಲಕಾಲ ಹಿಂದೆ ಸರಕಾರ ಹಿರಿಯ ಪತ್ರಕರ್ತ ಶಿವಾಜಿ ಗಣೇಶನ್ ನೇತೃತ್ವದಲ್ಲಿ ನೇಮಿಸಿದ ಸಮಿತಿ 7500 ಜೀತದಾಳುಗಳನ್ನು 2012-13ರಲ್ಲಿ ಪುನರ್ವಸತಿ ಮಾಡಲಾಗಿದೆ ಎಂದು ಗುರುತಿಸಿತ್ತು. ಜೀತದ ರಾಷ್ಟ್ರೀಯ ಮಾನವ ಹಕ್ಕುಗಳ ಕಮಿಶನ್ ನಿರ್ವಚನೆಯನ್ನು ಅನ್ವಯಿಸಿದರೆ ಲಕ್ಷಾಂತರ ಜೀತದಾಳುಗಳನ್ನು ಗುರುತಿಸಬಹುದು. ಆದರೆ ಜಿಲ್ಲಾಡಳಿತಗಳು ಜೀತದಾಳುಗಳು ಇಲ್ಲವೇ ಇಲ್ಲ ಎನ್ನುತ್ತವೆ. ಜೀತ ಪದ್ಧತಿ ಹೊಸ ಆಧುನಿಕ ರೂಪಗಳನ್ನು ಪಡೆದಿದೆ. ಅದು ಹೊರಗೆ ಕೂಲಿ ಕೆಲಸದಂತೆ ಕಂಡು ಬಂದರೂ ಜೀತದ ಹಲವು ಬದಲಾಯಿಸಿದ ಅಂಶಗಳನ್ನು ಹೊಂದಿದೆ, ಎಂದು ಈ ವರದಿಯ ಬಗ್ಗೆ ಪ್ರತಿಕ್ರಿಯಿಸುತ್ತಾ ಶಿವಾಜಿ ಗಣೇಶನ್ ಹೇಳಿದ್ದಾರೆಂದು ವರದಿಯಾಗಿದೆ.

ಹಿಂದೆ ಸಣ್ಣ ರೈತನಿಗೋ ಕೃಷಿ ಕೂಲಿಕಾರನಿಗೋ ಸಾಲ ಕೊಟ್ಟು ಆತ ತೀರಿಸದೆ ಹೋದಾಗ ಅದನ್ನು ತೀರಿಸಲು ಹೆಚ್ಚಾಗಿ (ಯಾವುದೇ ಕೂಲಿ ಕೊಡದೆ ಅಥವಾ ಊಟ ತಿಂಡಿ ಮಾತ್ರ ಕೊಟ್ಟು) ಸಾಲ ತೀರುವ ವರೆಗೆ ಬಿಟ್ಟಿಯಾಗಿ ದುಡಿಸುವುದು ಜೀತಪದ್ಧತಿಯ ಮುಖ್ಯ ರೂಪವಾಗಿತ್ತು. ಕ್ರೂರ ಪಾಳೆಯಗಾರಿ ಪದ್ಧತಿ ಜಾರಿಯಲ್ಲಿದ್ದ ಪ್ರದೇಶದಲ್ಲಿ ಕೊಟ್ಟ ಸಾಲ, ಬಡ್ಡಿಯ ದರ, ಅಸಲು-ಬಡ್ಡಿ ತೀರಲು ಬೇಕಾದ ಅವಧಿ ಎಲ್ಲವೂ ಮಾಲಿಕನ ಮರ್ಜಿಯಂತೆ. ಆತನ ಸಾಲ ತೀರದಿದ್ದರೆ ಆತ ಸತ್ತಾಗ ಅಥವಾ ಸಾಲ ದೊಡ್ಡದಿದ್ದರೆ ಜೀವಿತಾವಧಿಯಲ್ಲೇ ಆತನ ಹೆಂಡತಿ ಮತ್ತು ಮಕ್ಕಳನ್ನು ಜೀತದಾಳುಗಳಾಗಿ ದುಡಿಸಿಕೊಳ್ಳುತ್ತಿದ್ದರು. ಇದು ಹಿಂದಿನ ಜೀತಪದ್ಧತಿಯ ಮುಖ್ಯ ರೂಪವಾಗಿದ್ದು, ಹೆಚ್ಚಾಗಿ ಕೃಷಿಯಲ್ಲೇ ಜಾರಿಯಲ್ಲಿತ್ತು. ಈ ಪಾಳೆಯಗಾರಿ ಜೀತ ಪದ್ಧತಿಯನ್ನು ಕೊನೆಗೊಳಿಸಲು 1976 ರಲ್ಲಿ ಕಾನೂನು ಬಂದಿದೆ. ಈ ಕಾನೂನು – ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿ, ಕೊಡಲಾದ ಸಾಲ ಅಥವಾ ಹಣದ ಬಗ್ಗೆ ಯಾವುದೇ ದಾಖಲೆಗಳಿಲ್ಲದಿರುವುದು, ದುಡಿಮೆಗೆ ತೊಡಗಿಸುವುದರಲ್ಲಿ ಬಲಾತ್ಕಾರದ ಅಂಶ, ಆಳುಗಳ ಚಲನವಲನದ ಮೇಲೆ ತೀವ್ರ ನಿರ್ಬಂಧ – ಮುಂತಾದ ಜೀತದ ದುಡಿತದ ಸಾಕಷ್ಟು ಗುಣಲಕ್ಷಣಗಳನ್ನು ಗುರುತಿಸಿದೆ. ಅದನ್ನು ಅನ್ವಯಿಸಿದರೆ ಇಂದು ಕೂಲಿಗೆಲಸ ಎಂಬಂತೆ ಕಾಣುವ ಹಲವು ಕಾರ್ಮಿಕರನ್ನು ಜೀತದಾಳುಗಳು ಎಂದು ಪರಿಗಣಿಸಬಹುದು. ಅಸಲಿಗೆ ಭಾರೀ ಬಡ್ಡಿ ಸೇರಿ ಜೀವಪರ್ಯಂತ ಜೀತದಾಳುಗಳಾಗಿರುವ ಜೀತ ಪದ್ಧತಿ ಕಡಿಮೆಯಾಗಿರಬಹುದು. ಆದರೆ ಇತರೇ ಅಂಶಗಳು ಹೊಸ ರೂಪ ತಳೆದಂತೆ ಕಾಣುತ್ತವೆ.

ಇಂದು ನಗರ ಮತ್ತು ಗ್ರಾಮೀಣ ಪ್ರದೇಶಗಳ ದೊಡ್ಡ ವಿಭಾಗ ಕನಿಷ್ಟ ಕೂಲಿಗಿಂತ ಕಡಿಮೆ ಕೂಲಿ ಪಡೆಯುತ್ತಿರುವುದು ಎಲ್ಲರಿಗೂ ಗೊತ್ತಿರುವ ಸಂಗತಿ. ಕೆಲಸದ ಜಾಗಕ್ಕೆ ಕಾರ್ಮಿಕರನ್ನು ಸೀಮಿತಗೊಳಿಸಿ ಅವರ ಚಲನವಲನದ ಮೇಲೆ ಮಾಲಿಕ ನೇರವಾಗಿ ಅಥವಾ ಏಜೆಂಟುಗಳ ಮೂಲಕ ತೀವ್ರ ನಿರ್ಬಂಧಗಳನ್ನು ಹಾಕಿರುವುದು ವ್ಯಾಪಕವಾಗಿದೆ. ಕೆಲವೊಮ್ಮೆ ನಿರ್ಬಂಧ ಇಲ್ಲದಿದ್ದಾಗೂ ವಸತಿ ಸಾರಿಗೆ ದುಬಾರಿಯಾಗಿರುವುದರಿಂದ ಮತ್ತು ದೀರ್ಘ ಕೆಲಸದ ಅವಧಿಯಿಂದಾಗಿ ಕಾರ್ಮಿಕರು ಕೆಲಸದ ಸ್ಥಳದಲ್ಲೇ ಉಳಿದುಕೊಳ್ಳುವುದು ಸಾಮಾನ್ಯವಾಗಿದೆ, ಇಂತಹ ಹೋಟೆಲು, ಗೊಡೌನು, ವರ್ಕ್‌ಶಾಪುಗಳಲ್ಲಿ ಬೆಂಕಿ ಅಫಘಾತಗಳಾದಾಗ ಸುಟ್ಟು ಕರಕಲಾಗಿರುವ ಹಲವು ಪ್ರಕರಣಗಳು ವರದಿಯಾಗಿವೆ. ಅದೇ ರೀತಿ ಮೋಸ ಮತ್ತು ಬಲಾತ್ಕಾರದಿಂದ ದೂರದ ದುಡಿಮೆಗಳಿಗೆ ಕರೆ ತರುವುದು, ಬಲಾತ್ಕಾರದ ದುಡಿಮೆಯ ಪರಿಸ್ಥಿತಿಗಳ ಹೇರಿಕೆ ಸಹ ವ್ಯಾಪಕವಾಗಿದೆ. ಹಲವು ಉದ್ಯಮಗಳಲ್ಲಿ ಹೆಚ್ಚಾಗಿ ದೂರದ ರಾಜ್ಯಗಳ ವಲಸೆ ಕಾರ್ಮಿಕರಿಗೆ ವ್ಯಾಪಕವಾಗುತ್ತಿರುವ – ಊಟ ತಿಂಡಿ ವಸತಿ ಬಿಟ್ಟರೆ ಕೂಲಿಯನ್ನು ವರ್ಷದ ಕೊನೆಗೆ ಕೊಡುವ ಪದ್ಧತಿ ಸಹ – ಕಾರ್ಮಿಕನ ಚಲನವಲನ ಜೀವನದ ಮೇಲೆ ತೀವ್ರ ನಿರ್ಬಂಧ ಹೇರುವ ಪದ್ಧತಿಯೇ.

ರಾಜ್ಯ ಸರಕಾರ ಬರಿಯ ಅಧಿಕಾರಶಾಹಿ ವಿಧಾನಗಳಿಂದ ಜೀತಪದ್ಧತಿಯನ್ನು ಅಂದಾಜು ಮಾಡಿವುದಾಗಲಿ ಕೊನೆಗೊಳಿಸುವುದಾಗಲಿ ಸಾಧ್ಯವಿಲ್ಲ. ವಾಸ್ತವಕ್ಕೆ ಕುರುಡಾಗಿರುವುದೂ ಸಾಧ್ಯವಿಲ್ಲ. ಆಧುನಿಕ ಜೀತಪದ್ಧತಿ ವ್ಯಾಪಕವಾಗಿ ಹರಡುತ್ತಿದೆಯೇ ಎಂದು ಹೊಸ ವಿಧಾನಗಳ ಸಮೀಕ್ಷೆ ಅಧ್ಯಯನ ಮೂಲಕ ಅಂದಾಜು ಮಾಡಿ ತಕ್ಕ ಕ್ರಮಗಳನ್ನು ಕೈಗೊಳ್ಳಬೇಕು. ಕಾರ್ಮಿಕರ ಚಳುವಳಿ ಸಂಘಟನೆಗಳು, ಎಡ-ಪ್ರಜಾಸತ್ತಾತ್ಮಕ ಶಕ್ತಿಗಳು ಈ ಬಗ್ಗೆ ಪ್ರಚಾರ-ಪ್ರಕ್ಷೋಭೆಗಳ ಮೂಲಕ ಒತ್ತಡ ಹೇರಬೇಕಾಗಿದೆ. ಕಾರ್ಮಿಕರ ದೊಡ್ಡ ವಿಭಾಗ ಹೆಚ್ಚು ಕಡಿಮೆ ಜೀತ ಪದ್ಧತಿಯ ಹೊಸ ರೂಪಗಳ ಪರಿಸ್ಥಿತಿಗಳಲ್ಲಿ ಕೆಲಸ ಮಾಡುತ್ತಿರುವಾಗ ಇದು ಅಗತ್ಯ ತುರ್ತು ಕ್ರಮ.

## ತಿದ್ದುಪಡಿ

ಜನಶಕ್ತಿ ಸಂಚಿಕೆ 38 ಪುಟ 9 ರಲ್ಲಿ ಪ್ರಕಟವಾದ ಎಸ್ ವರಲಕ್ಷ್ಮಿ ಅವರ ಅಂಗನವಾಡಿ ನೌಕರರ ಗೌರವಧನದ ಹೆಚ್ಚಳದ ಕುರಿತಾದ ಲೇಖನದಲ್ಲಿ ಇರುವ ಕೋಷ್ಟಕದಲ್ಲಿ ಅಂಗನವಾಡಿ ನೌಕರ ಗೌರವಧನದಲ್ಲಿ ರಾಜ್ಯ-ಕೇಂದ್ರ ಸರಕಾರಗಳ ಭಾಗದ ಅಂಕೆ-ಸಂಖ್ಯೆ ತಿರುವು ಮುರುವಾಗಿದೆ. ಸರಿಯಾದ ಅಂಕೆ-ಸಂಖ್ಯೆ ಈ ಕೆಳಗಿನಂತಿದೆ.

ಅಂಗನವಾಡಿ ನೌಕರ ಗೌರವಧನದಲ್ಲಿ ರಾಜ್ಯ-ಕೇಂದ್ರ ಸರಕಾರಗಳ ಭಾಗ

| | ಕೇಂದ್ರ ಸರ್ಕಾರ | ರಾಜ್ಯ ಸರ್ಕಾರ | ಕೇಂದ್ರ ಸರ್ಕಾರದ ಈಗಿನ ಹೆಚ್ಚಳ | ಒಟ್ಟು |
|---|---|---|---|---|
| ಕಾರ್ಯಕರ್ತೆಗೆ | 1800 | 6200 | 1500 | 9500 |
| ಸಹಾಯಕಿಗೆ | 900 | 3100 | 750 | 4750 |



## ಸಂಗಾತಿ ಕೆ.ಸಿ. ನಾಗರಾಜ ಅವರಿಂದ ಜನಶಕ್ತಿಗೆ ದೇಣಿಗೆ

ವಿಮಾ ನೌಕರರ ಸಂಘ, ಬೆಳಗಾವಿ ವಿಭಾಗದ ಮುಂದಾಳು ಸಂಗಾತಿ ಕೆ.ಸಿ.ನಾಗರಾಜ ತಮ್ಮ 35 ವರ್ಷಗಳ ಸುದೀರ್ಘ ಸೇವೆಯ ನಂತರ ಭಾರತೀಯ ಜೀವ ವಿಮಾ ನಿಗಮದಿಂದ ಇತ್ತೀಚೆಗೆ ನಿವೃತ್ತಿಯಾಗಿದ್ದಾರೆ. ಈ ಸಂದರ್ಭದಲ್ಲಿ ಅವರು ಜನಶಕ್ತಿ ಪತ್ರಿಕೆಗೆ ರೂಪಾಯಿ ಎರಡು ಸಾವಿರ ದೇಣಿಗೆ ನೀಡಿದ್ದಾರೆ. ಸಂಗಾತಿ ನಾಗರಾಜ ಜನಶಕ್ತಿ ಪತ್ರಿಕೆ ಅಭಿಮಾನಿಯಾಗಿದ್ದು ಹಲವಾರು ವರ್ಷಗಳಿಂದ ಚಂದಾದಾರ ಮಾತ್ರವಲ್ಲದೆ ಅದರ ವಾಚಕರಾಗಿರುತ್ತಾರೆ. ಅವರು ಪಕ್ಷಕ್ಕೆ ಮತ್ತು ಸಿ.ಐ.ಟಿ.ಯು. ಜಿಲ್ಲಾ ಘಟಕಕ್ಕೂ ಉದಾರ ದೇಣಿಗೆ ನೀಡಿದ್ದಾರೆ. ಜನಶಕ್ತಿ ಅವರ ಉದಾರ ದೇಣಿಗೆಗೆ ಕೃತಜ್ಞತೆ ಸಲ್ಲಿಸುವದರ ಜೊತೆಗೆ ಅವರ ನಿವೃತ್ತಿ ಜೀವನ ಕ್ರಿಯಾಶೀಲವಾಗಿರಲಿ ಎಂದು ಹಾರೈಸುತ್ತದೆ.

# ಸುರತ್ಕಲ್ ಟೋಲ್‌ಗೇಟ್ ವಿರುದ್ಧ ಕೂಳೂರಿನಿಂದ ಪಾದಯಾತ್ರೆ




ಮಂಗಳೂರು–ಮುಂಬೈ ರಾಷ್ಟ್ರೀಯ ಹೆದ್ದಾರಿಯಲ್ಲಿ ಸುರತ್ಕಲ್ ಎನ್‌ಐಟಿಕೆ ಬಳಿ ಅನಗತ್ಯವಾಗಿ ರಚಿಸಲಾದ ಟೋಲ್‌ಗೇಟ್ ಮುಚ್ಚಬೇಕು. ಅನ್ಯಾಯಯುತ ಟೋಲ್ ಸಂಗ್ರಹವನ್ನು ನಿಲ್ಲಿಸಬೇಕು ಮಂಗಳೂರಿನ ನಂತೂರಿನಿಂದ ಸುರತ್ಕಲ್ ಹೆದ್ದಾರಿಯನ್ನು ದುರಸ್ತಿಗೊಳಿಸಬೇಕು ಎಂಬುದಾಗಿ ಆಗ್ರಹಿಸಿ ಸುರತ್ಕಲ್‌ನ ಟೋಲ್‌ಗೇಟ್ ವಿರೋಧಿ ಹೋರಾಟ ಸಮಿತಿಯ ನೇತೃತ್ವದಲ್ಲಿ ಸೆಪ್ಟೆಂಬರ್ 26 ರಂದು ಕೂಳೂರಿನಿಂದ ಸುರತ್ಕಲ್ ವರೆಗೆ ಯಶಸ್ವಿ ಪಾದಯಾತ್ರೆ ನಡೆಯಿತು.

ಉಡುಪಿ–ಮಂಗಳೂರು ಮಧ್ಯೆ ಹೆಜಮಾಡಿ ಎಂಬಲ್ಲಿ ಈಗಾಗಲೇ ಒಂದು ಟೋಲ್‌ಗೇಟ್ ಇದ್ದು, ಅದಕ್ಕೂ ಮಂಗಳೂರಿನ ಮಧ್ಯೆ ಮತ್ತೊಂದು ಟೋಲ್‌ಗೇಟ್ ಇರಿಸುವಷ್ಟು ದೂರ ಇರುವುದಿಲ್ಲ. ಆದಾಗ್ಯೂ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಹೆದ್ದಾರಿ ಗುತ್ತಿಗೆದಾರರಿಗೆ ಎನ್‌ಐಟಿಕೆ ಬಳಿ ಟೋಲ್‌ಗೇಟ್ ರಚಿಸಲು ಅವಕಾಶ ನೀಡಿ, ಈಗ ಮೂರ್‍ನಾಕು ವರ್ಷಗಳಿಂದ ಟೋಲ್ ವಸೂಲಿಗೆ ಅವಕಾಶ ಮಾಡಿಕೊಟ್ಟಿದೆ. ಕಾನೂನುಬಾಹಿರವಾಗಿ ಖಾಸಗಿ ಗುತ್ತಿಗೆದಾರರು ಟೋಲ್ ವಸೂಲಿ ಮಾಡುತ್ತಿದ್ದಾರೆ. ಸುರತ್ಕಲ್ ಟೋಲ್‌ಗಳನ್ನು ರದ್ದುಪಡಿಸಬೇಕೆಂದು ಪ್ರದೇಶದ ನಾಗರಿಕರು ಹಲವು ಬಾರಿ ಹೆದ್ದಾರಿ ಪ್ರಾಧಿಕಾರಕ್ಕೂ, ಜಿಲ್ಲಾಡಳಿತಕ್ಕೂ ಮನವಿ ಮಾಡಿದ್ದಾರೆ. ರಾಷ್ಟ್ರೀಯ ಹೆದ್ದಾರಿ ಕೇಂದ್ರ ಸರಕಾರದ ವ್ಯಾಪ್ತಿಗೆ ಬಂದಿದ್ದು, ಸ್ಥಳೀಯ ಸಂಸದರಾದ ನಳಿನ್ ಕುಮಾರ್ ಕಟೀಲ್‌ರವರು ಹೆದ್ದಾರಿ ಹಾಗೂ ಹೆದ್ದಾರಿಯ ಮೇಲುಸೇತುವೆ ಹಾಗೂ ಸರ್ವಿಸ್ ರಸ್ತೆಗಳನ್ನು ಶೀಘ್ರಗೊಳಿಸಲು ಯಾವ ಪ್ರಯತ್ನವನ್ನೂ ಮಾಡಿಲ್ಲ. ಸುರತ್ಕಲ್ ಟೋಲ್‌ಗೇಟ್ ರದ್ದತಿಗೂ ಪ್ರಯತ್ನಿಸಿಲ್ಲ. ಈ ಹಿನ್ನೆಲೆಯಲ್ಲಿ ಸುರತ್ಕಲ್ ಪ್ರದೇಶದ ನಾಗರಿಕರು ಹೋರಾಟ ಸಮಿತಿ ರಚಿಸಿ ಈ ಪಾದಯಾತ್ರೆಯನ್ನು ಹಮ್ಮಿಕೊಳ್ಳಲಾಗಿತ್ತು.

ಕೂಳೂರಿನಿಂದ ಎನ್‌ಐಟಿಕೆ ವರೆಗಿನ ಹನ್ನೆರಡು ಕಿ.ಮೀ.ದೂರದ ಪಾದಯಾತ್ರೆಯಲ್ಲಿ ಇನ್ನೂರಕ್ಕೂ ಮಿಕ್ಕಿ ನಾಗರಿಕರು ಭಾಗವಹಿಸಿದ್ದರು. 83 ವರ್ಷ ವಯಸ್ಸಿನ ಮುದುಕಿಯೊಬ್ಬರು ಅಷ್ಟು ದೂರ ನಡೆದುದು ವಿಶೇಷವಾಗಿತ್ತು. ಮಂಗಳೂರಿನಿಂದ ಸುರತ್ಕಲ್ ವರೆಗಿನ ವಿವಿಧ ಸಂಘ ಸಂಸ್ಥೆಗಳು ಇದರಲ್ಲಿ ಭಾಗಿಯಾಗಿದ್ದವು. ಡಿವೈಎಫ್ಐ ದ.ಕ. ಜಿಲ್ಲಾ ಸಮಿತಿ ಕಾರ್ಯಕರ್ತರು ಪಾದಯಾತ್ರೆಯನ್ನು ಸಂಘಟಿಸಿದ್ದರು. ಸುರತ್ಕಲ್ ಪ್ರದೇಶದ ಗೂಡ್ಸ್ ಟೆಂಪೋ, ಆಟೋ, ಟ್ರಾನ್ಸ್‌ಪೋರ್ಟ್ ವರ್ಕರ್ಸ್ ಯೂನಿಯನ್ನ್‌ಗಳು ಕೂಡಾ ಕಾರ್ಯಕ್ರಮಕ್ಕೆ ಬೆಂಬಲ ನೀಡಿದ್ದುವು.

ಸುರತ್ಕಲ್‌ನ ಮಾಜಿ ಶಾಸಕ ವಿಜಯ ಕುಮಾರ್ ಶೆಟ್ಟಿ, ಮಂಗಳೂರು ಮಾಜಿ ಮೇಯರ್ ಹಿಲ್ಡಾ ಆಳ್ವಾ, ಮಾಜಿ ಉಪಮೇಯರ್ ಪುರುಷೋತ್ತಮ ಚಿತ್ರಾಪುರ, ಸಿಪಿಐ(ಎಂ) ದ.ಕ.ಜಿಲ್ಲಾ ಮುಖಂಡರಾದ ಕೆ.ಯಾದವ ಶೆಟ್ಟಿ, ಸುನಿಲ್ ಕುಮಾರ್ ಬಜಾಲ್, ಸಿಪಿಐ(ಎಂ) ಕಾರ್ಪರೇಟರ್ ದಯಾನಂದ ಶೆಟ್ಟಿ, ಡಿವೈಎಫ್ಐ ದ.ಕ.ಜಿಲ್ಲಾ ಅಧ್ಯಕ್ಷ ಬಿ.ಕೆ.ಇಮ್ತಿಯಾಜ್, ಕಾರ್ಯದರ್ಶಿ ಸಂತೋಷ್ ಬಜಾಲ್ ಈ ಪ್ರತಿಭಟನೆಯಲ್ಲಿ ಭಾಗವಹಿಸಿದ್ದರು.

ಸುರತ್ಕಲ್ ಎನ್‌ಐಟಿಕೆಯಲ್ಲಿ ನಡೆದ ಜಾಥಾ ಸಮಾರೋಪವನ್ನು ಉದ್ದೇಶಿಸಿ ಡಿವೈಎಫ್ಐ ರಾಜ್ಯಾಧ್ಯಕ್ಷ ಮುನೀರ್ ಕಾಟಿಪಳ್ಳ ಮಾತನಾಡಿದರು. ಅವರು ಸಂಸದ ನಳಿನ್ ಕುಮಾರ್ ಅವರ ನಿಷ್ಕ್ರಿಯತೆಯನ್ನು ಖಂಡಿಸಿದರು. ಅಲ್ಲದೆ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಮೇಲೆ ತನ್ನ ಪ್ರಭಾವವನ್ನು ಒತ್ತಡವನ್ನು ಬೀರುವಲ್ಲಿ ವಿಫಲರಾಗಿದ್ದಾರೆ ಎಂದು ಅವರು ಹೇಳಿದರು.

ಈ ಪಾದಯಾತ್ರೆಗೆ ಅಲ್ಲಲ್ಲಿ ಸ್ಥಳೀಯ ನಾಗರಿಕರು ಪಾನೀಯ, ಗಂಜಿ ಊಟ ನೀಡಿ ಸ್ವಾಗತಿಸಿದ್ದು ವಿಶೇಷವಾಗಿತ್ತು.

– ವಾಸುದೇವ ಉಚ್ಚಿಲ್

# ಗದಗ: ದಂಪತಿಗಳ ಮಾರ್ಯಾದೆಗೇಡು ಕೊಲೆ ಜನವಾದಿ ಖಂಡನೆ



ಗದಗ ಜಿಲ್ಲೆಶಿರಹಟ್ಟಿ ತಾಲ್ಲೂಕಿನ ಬಸಾಪುರದಲ್ಲಿ ಅಂತರ್ ಧರ್ಮೀಯ ವಿವಾಹವಾಗಿ ಸ್ವತಂತ್ರವಾಗಿ ಜೀವನ ಸಾಗಿಸುತ್ತಿದ್ದ ಆಶ್ರಫ್ ಅಲಿ (45) ಮತ್ತು ಸೋಮವ್ವ (38) ರವರನ್ನು ಬರ್ಬರವಾಗಿ ಕೊಲೆ ಮಾಡಿರುವುದನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆ ಉಗ್ರವಾಗಿ ಖಂಡಿಸುತ್ತದೆ.

13 ವರ್ಷಗಳ ಹಿಂದೆ ಪ್ರೀತಿಸಿ ಮದುವೆಯಾದ ದಂಪತಿ ಗಳನ್ನು ಸೋಮವ್ವನ ಸಹೋದರ ದೇವಪ್ಪಹೊಟ್ಟಿ ಮಾರ್ಯಾದೆಯ ಹೆಸರಿನಲ್ಲಿ ಕೊಲೆ ಮಾಡಿರುವುದು ಹೇಯ ಕೃತ್ಯ. ಈ ಹಿಂದೆಯೂ ರಾಜ್ಯದ ರಾಮನಗರ, ಮಂಡ್ಯ ಜಿಲ್ಲೆಗಳಲ್ಲಿ ಮರ್ಯಾದೆಯ ಹೆಸರಿನಲ್ಲಿ ನಡೆದ ಹತ್ಯೆಗಳ ಸಂದರ್ಭಗಳಲ್ಲಿ ಪರಸ್ಪರ ಕಡು ವೈರಿಗಳಂತೆ ಒಬ್ಬರ ಮೇಲೊಬ್ಬರು ಬೀಳುವ ರಾಜ್ಯದ ಪ್ರಮುಖ ಮೂರೂ ಪಕ್ಷಗಳ ನಾಯಕರು ಸ್ವಜಾತಿ ಪ್ರೇಮದಿಂದ, ಅನ್ಯಾಯವಾಗಿ ಬಲಿಯಾದ ಮುಗ್ಧ ಪ್ರೇಮಿಗಳ ಸಾವಿಗೆ ಕುರುಡಾಗಿ ಕುಳಿತಿದ್ದೇ ಇಂಥಹ ಪ್ರಕರಣಗಳು ಮತ್ತೆ ಮತ್ತೆ ನಡೆಯಲು ಕಾರಣ.

ದೇಶದ ಸಂವಿಧಾನ ವು ವಯಸ್ಕರಿಗೆ ಆಯ್ಕೆ ಸ್ವಾತಂತ್ರ್ಯ ನೀಡಿದ್ದು, ತಮ್ಮ ಆಯ್ಕೆಯ ಜೀವನ ಸಂಗಾತಿಯೊಡನೆ 13 ವರ್ಷಗಳಿಂದ ಬದುಕು ತ್ತಿದ್ದ ತಂಗಿಯನ್ನು ಕೊಂದವನನ್ನು ಕಠಿಣ ಶಿಕ್ಷೆಗೆ ಒಳಪಡಿಸ ಬೇಕು ಎಂದು ಸಂಘಟನೆ ಆಗ್ರಹಿಸುತ್ತದೆ.

ಇತ್ತೀಚಿನ ದಿನಗಳಲ್ಲಿ ದೇಶದಲ್ಲಿ ಮಾರ್ಯಾದೆ ಹೆಸರಿನ ಹತ್ಯೆಗಳು ಹೆಚ್ಚುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ. ಇದು ನಾಗರೀಕ ಸಮಾಜಕ್ಕೆ ತಕ್ಕುದಾದ ನಡೆ ಅಲ್ಲ.ಇಂದಿಗೂ ಇರುವ ಅಸಮಾನ ವ್ಯವಸ್ಥೆ, ಹುಸಿ ಪ್ರತಿಷ್ಠೆಗಳಿಗೆ ಇಡೀ ಸಮಾಜ ನಾಚಿ ತಲೆ ತಗ್ಗಿಸ ಬೇಕು. ಈ ಬೆಳವಣಿಗೆ ಕುರಿತು ಚಿಂತಿಸುವುದು ಮತ್ತು ತಡೆಗಟ್ಟುವ ನಿಟ್ಟಿನಲ್ಲಿ ಕ್ರಮಗಳಾಗಬೇಕೆಂದು ಒತ್ತಾಯಿಸುತ್ತೇವೆ.

ಈ ಹಿಂದೆ ಹರ್ಯಾಣ,ಮಹಾರಾಷ್ಟ್ರರಾಜ್ಯಗಳಿಂದ ಇಂಥಹ ಘಟನೆಗಳು ವರದಿಯಾಗುವಾಗಲೇ, ಯುವ ಜನರ ಆಯ್ಕೆ ಹಕ್ಕುಗಳನ್ನು ಗೌರವಿಸುವ ಮತ್ತು ಅದಕ್ಕೆ ಚ್ಯುತಿ ಬಂದಾಗ ಜೊತೆ ನಿಂತು ಅವರ ಪರವಾಗಿ ಹೋರಾಟ ಮಾಡಿದ ಜನವಾದಿ ಮಹಿಳಾ ಸಂಘಟನೆ ಮರ್ಯಾದೆಗೇಡು ಹತ್ಯೆ ಯ ವಿರುದ್ಧ ಕಾನೂನು ತರುವಂತೆ ಒತ್ತಾಯಿಸುತ್ತಲೇ ಇದೆ. ಆದರೆ ನಮ್ಮ ಕೇಂದ್ರ ಸರ್ಕಾರಕ್ಕೆ , ಮುಸ್ಲಿಂ ಮಹಿಳೆಯರನ್ನು ಬಾಣಲೆಯಿಂದ ಬೆಂಕಿಗೆ ನೂಕುವ ಕಾನೂನು ತಂದು ಟ್ರಿಪಲ್ ತಲಾಖ್ ನಿಷೇಧಿಸುವ ಬಗ್ಗೆ ಸುಗ್ರೀವಾಜ್ಞೆ ತರುವಲ್ಲಿ ಇರುವ ತರಾತುರಿ ಈ ವಿಷಯಗಳಲ್ಲಿ ಇಲ್ಲ. ಯಾಕೆಂದರೆ ಇದಕ್ಕೆ ಮೌನ ಮತ್ತು ಅದಕ್ಕೆ ಆದೇಶ ಎರಡರಲ್ಲಿಯೂ ಓಟ್ ಬ್ಯಾಂಕ್ ರಾಜಕಾರಣ ವಿದೆ. ಇತ್ತೀಚಿನ ದಿನಗಳಲ್ಲಿಯೇ ದಕ್ಷಿಣ ಭಾರತ ದಲ್ಲಿಯೇ ವರದಿಯಾದ ಘೋರ ಪ್ರಕರಣಗಳನ್ನೂ ಗಮನಿಸಿ ಕಾನೂನು ತರಲು ಕೇಂದ್ರ ಸರಕಾರ ಮುಂದಾಗಬೇಕು. ಮತ್ತು ಕರ್ನಾಟಕ ರಾಜ್ಯ ಸರ್ಕಾರವೂ ಅತ್ತ ಗಮನ ಹರಿಸಬೇಕೆಂದು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯು ಒತ್ತಾಯ ಮಾಡುತ್ತದೆ.




# MPS Ltd ಐಟಿ ಉದ್ಯೋಗಿಗಳ ವಿಜಯ

MPS Ltd ಎಂಬ ಐಟಿ ಕಂಪನಿಯ 11 ಉದ್ಯೋಗಿಗಳನ್ನು ವಜಾ ಮಾಡಿದ್ದು, ಇದರ ವಿರುದ್ಧ ಕಂಪನಿಯ 200ಕ್ಕೂ ಹೆಚ್ಚು ಉದ್ಯೋಗಿಗಳು ಸೆ.18ರಿಂದ ಪ್ರತಿಭಟನೆ ಮುಂತಾದ ಹೋರಾಟ ನಡೆಸಿದ್ದರು. ಈ ಕಾನೂನು–ಬಾಹಿರ ವಜಾದ ವಿರುದ್ಧ Karnataka State IT/ITeS Employees Union (KITU) MPS ಘಟಕ ಲೇಬರ್ ಕಮಿಶನರ್ ಗೆ ದೂರು ಕೊಟ್ಟಿತ್ತು. ಲೇಬರ್ ಕಮಿಶನರ್ ಸಮ್ಮುಖದಲ್ಲಿ KITU ನಾಯಕತ್ವ ಮತ್ತು MPS Ltd ಮ್ಯಾನೇಜುಮೆಂಟ್ ನಡುವೆ ಮಾತುಕತೆ ನಡೆದು ವಜಾ ಮಮಾಡಿದ ಎಲ್ಲಾ 11 ಉದ್ಯೋಗಿಗಳನ್ನು ಪುನಃ ಕೆಲಸಕ್ಕೆ ತೆಗೆದುಕೊಳ್ಳಲು ಒಪ್ಪಲಾಗಿದೆ. MPS Ltd ಉದ್ಯೋಗಿಗಳ ಈ ಐಕ್ಯ ಹೋರಾಟಕ್ಕೆ ಸಿಕ್ಕಿದ ಜಯಕ್ಕೆ KITU ಅವರನ್ನು ಹಾರ್ದಿಕವಾಗಿ ಅಭಿನಂದಿಸಿದೆ.

## ರೈತ ಕುಟುಂಬದ ಆತ್ಮಹತ್ಯೆ ನೋಟ್: ವ್ಯವಸಾಯವೇ ಕಾರಣ

ಮಂಡ್ಯ ಜಿಲ್ಲೆಯ ಪಾಂಡವಪುರ ತಾಲೂಕಿನ ಸುಂಕತೊಣ್ಣೂರು ಗ್ರಾಮದಲ್ಲಿ ಸಾಲದ ಕೂಪದಿಂದ ಹೊರಬರಲಾರದೇ ಭವಿಷ್ಯದ ಎರಡುಕುಡಿಗಳು ಸೇರಿದಂತೆ ನಾಲ್ಕು ಜನರ ರೈತ ಕುಟುಂಬವೊಂದು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಹೃದಯವಿದ್ರಾವಕ ಘಟನೆ ನಡೆದಿದೆ. ಆತ್ಮಹತ್ಯೆಗೊಳಗಾದ ಕುಟುಂಬವು ಮುಖ್ಯಮಂತ್ರಿ ಕುಮಾರಸ್ವಾಮಿಯವರಿಗೆ "ಈ ಹಿಂದೆ ನನ್ನ ಸಮಸ್ಯೆಯನ್ನು ತಮಗೆ ತಿಳಿಸಿದ್ದೆ. ಹಾಗಂತ ನಾವು ಹೇಡಿತರ ಸಾಯುತ್ತಿಲ್ಲ, ಸತತ ಪ್ರಯತ್ನ ಮಾಡಿಯೂ ಬಗೆಹರಿಸಿಕೊಳ್ಳಲಾಗದ ಸಮಸ್ಯೆಯಿಂದ ಇಂದು ಈ ನಿರ್ಧಾರ ತೆಗೆದುಕೊಂಡಿದ್ದೇವೆ. ನಮ್ಮೆಲ್ಲರ ಕೊನೆ ಆಸೆ ನಮ್ಮೆಲ್ಲರ ಶವಗಳನ್ನು ಯಾರೂ ಮುಟ್ಟದ ಹಾಗೆ ಕಾರ್ಪೋರೇಷನ್ ಗೆ ಒಪ್ಪಿಸಿಬಿಡಿ ಪ್ಲೀಸ್. ನಮ್ಮ ಸಾವಿಗೆ ಈ ವ್ಯವಸಾಯವೇ ಕಾರಣ ಬೇರೆ ಯಾರೂ ಅಲ್ಲ" ಎಂದು ಬರೆದ ಪತ್ರ ಸಿಕ್ಕಿದೆ.

### ಹಾಸನದಲ್ಲಿ ಮಾರ್ಕ್ಸ್ 200–ಕ್ಯಾಪಿಟಲ್ 150 ಆಚರಣೆ

# ಶೋಷಣಾಮುಕ್ತ ಸಮಾಜ ನಿರ್ಮಾಣಕ್ಕೆ ಮಾರ್ಕ್ಸ್‌ವಾದವೇ ಅಂತಿಮ ಪರಿಹಾರ : ಜಿ.ವಿ.ಎಸ್.

ಇಡೀ ಸಮಾಜದಲ್ಲಿ ನಡೆಯುತ್ತಿರುವ ಶೋಷಣೆಯನ್ನು ನಾಶಗೊಳಿಸಿ ಶೋಷಣಾಮುಕ್ತ ಸಮಾಜ ನಿರ್ಮಾಣಕ್ಕೆ ಮಾರ್ಕ್ಸ್‌ವಾದವೇ ಅಂತಿಮ ಪರಿಹಾರ ಎಂದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಾಜ್ಯ ಕಾರ್ಯದರ್ಶಿ ಜಿ.ವಿ.ಶ್ರೀರಾಮರೆಡ್ಡಿ ಅಭಿಪ್ರಾಯಪಟ್ಟರು.

ಕಾರ್ಲ್ ಮಾರ್ಕ್ಸ್ ದ್ವಿಶತಮಾನೋತ್ಸವ ಆಚರಣಾ ಸಮಿತಿಯು ಆಯೋಜಿಸಿದ್ದ ಮಾರ್ಕ್ಸ್–200 ಮತ್ತು ಬಂಡವಾಳ–150 ಕಾರ್ಯಕ್ರಮದ ದಿಕ್ಸೂಚಿ ಭಾಷಣ ಮಾಡಿದ ಅವರು, ಮಾರ್ಕ್ಸ್‌ವಾದದ ಮೇಲೆ ಮಾಡಿರುವಷ್ಟು ಟೀಕೆ ವಿಶ್ವದ ಇತರ ಯಾವ ಸಿದ್ಧಾಂತಗಳ ಮೇಲೂ ಮಾಡಿಲ್ಲ. ಮಾರ್ಕ್ಸ್‌ವಾದ ಇನ್ನು ಅಪ್ರಸ್ತುತ, ಅದು ಭಾರತಕ್ಕಲ್ಲ ಎಂಬಿತ್ಯಾದಿ ಟೀಕೆಗಳನ್ನು ಮಾಡಲಾಗುತ್ತದೆ, ಆದರೆ ಜಗತ್ತು ಆರ್ಥಿಕ ಬಿಕ್ಕಟ್ಟಿಗೆ ಸಿಲುಕಿದಾಗ ಪರಿಹಾರಕ್ಕಾಗಿ ಹುಡುಕುವುದು ಮಾರ್ಕ್ಸ್‌ವಾದವನ್ನೇ ಎಂಬುದನ್ನು ನಾವು ಗಮನಿಸಬೇಕು. ಮಾರ್ಕ್ಸ್‌ವಾದದ ಮೇಲಿನ ಟೀಕೆ ಇಂದಿನದಲ್ಲ. 1848ರಲ್ಲಿ ಕಮ್ಯುನಿಷ್ಟ್ ಮ್ಯಾನಿಪೆಸ್ಟೋ ಪ್ರಕಟವಾದಾಗಿನಿಂದಲೂ ಈ ಟೀಕೆ ನಡೆಯುತ್ತಲೇ ಇದೆ. ಇದನ್ನು ಟೀಕೆ ಎಂದು ಕೊಳ್ಳುವ ಬದಲು ಸಂಘರ್ಷ ಎಂದೇ ಹೇಳಬೇಕು. ಜಗತ್ತಿನಲ್ಲಿರುವ ಎರಡು ವರ್ಗಗಳಲ್ಲಿ ಶೋಷಣೆಗೊಳಗಾಗಿರುವ ಕೈಯಲ್ಲಿರುವ ಆಯುಧವಾದ ಮಾರ್ಕ್ಸ್‌ವಾದವನ್ನು ಶೋಷಕ ವರ್ಗದವರು ಸಹಜವಾಗಿಯೇ ವಿರೋಧಿಸುತ್ತಾರೆ. ಸಮಾಜದಲ್ಲಿ ಶೋಷಕ ವರ್ಗ ಇರುವವರೆಗೂ ಈ ಸಂಘರ್ಷ ನಡೆಯುತ್ತಲೇ ಇರುತ್ತದೆ. ಅಲ್ಲಿಯವರೆಗೂ ಮಾರ್ಕ್ಸ್‌ವಾದದ ಪ್ರಸ್ತುತತೆ ಇರುತ್ತದೆ ಎಂದು ಜಿ.ವಿ.ಶ್ರೀರಾಮರೆಡ್ಡಿ ಹೇಳಿದರು.





ಭಾರತೀಯ ತತ್ವಶಾಸ್ತ್ರದಲ್ಲೂ ಇದೇ ರೀತಿಯ ಸಂಘರ್ಷ ನಡೆದಿರುವುದನ್ನು ಕಾಣಬಹುದು. ಈ ಸಂಘರ್ಷಗಳೆಲ್ಲೂ ಭಾರತೀಯ ಸಮಾಜವನ್ನು ಸುಧಾರಣೆ ಮಾಡಲು ಪ್ರಯತ್ನಿಸಿದ್ದಾರೆ. ಬುದ್ಧ, ಬಸವಣ್ಣ, ಅಂಬೇಡ್ಕರ್ ಅವರೆಲ್ಲರೂ ಆಯಾ ಕಾಲದಲ್ಲಿ ಲಭ್ಯವಿದ್ದ ಅವಕಾಶಗಳನ್ನು ಬಳಸಿಕೊಂಡು ಸುಧಾರಣೆ ಮಾಡಲು ಪ್ರಯತ್ನಿಸಿದ್ದಾರೆ. ಆದರೆ ಶೋಷಕ ಅಂಶಗಳು ಈ ಎಲ್ಲಾ ಸುಧಾರಣೆಯ ಮೇಲೆ ದಾಳಿ ನಡೆಸಿ ಅವುಗಳನ್ನು ಆಪೋಷನ ತೆಗೆದುಕೊಂಡವು. ಹಾಗಾಗಿ ಶೋಷಕ ವರ್ಗವನ್ನು ಬದಲಿಸಬೇಕು. ಅದಕ್ಕೆ ಮಾರ್ಕ್ಸ್‌ವಾದವೇ ಸರಿಯಾದ ವೈಜ್ಞಾನಿಕ ಮಾರ್ಗವಾಗಿದೆ ಎಂದು ಶ್ರೀರಾಮರೆಡ್ಡಿ ಹೇಳಿದರು.

ನಂತರ ನಡೆದ "ಸಮಸಮಾಜದ ನಿರ್ಮಾಣದಲ್ಲಿ ಮಾರ್ಕ್ಸ್‌ವಾದ ಮತ್ತು ಇತರ ಸಿದ್ಧಾಂತಗಳ ಪರಿಕಲ್ಪನೆಗಳು" ವಿಚಾರಸಂಕಿರಣದಲ್ಲಿ "ಬಂಡವಾಳ ವ್ಯವಸ್ಥೆಯ ಆರ್ಥಿಕ ಆಯಾಮ" ಕುರಿತು ಜನಶಕ್ತಿ ವಾರಪತ್ರಿಕೆ ಕಾರ್ಯನಿರತ ಸಂಪಾದಕ ಎನ್. ಕೆ.ವಸಂತರಾಜ ಮತ್ತು "ಬಂಡವಾಳಶಾಹಿ ವ್ಯವಸ್ಥೆಯ ರಾಜಕೀಯ ಸಾಮಾಜಿಕ ಆಯಾಮ" ಕುರಿತು ಪ್ರೊ.ವಿ.ಎನ್.ಲಕ್ಷ್ಮೀನಾರಾಯಣ ವಿಷಯ ಮಂಡನೆ ಮಾಡಿದರು.

ಬಳಿಕ ನಡೆದ ಸಂವಾದದಲ್ಲಿ ಬ್ಯಾಂಕ್ ನೌಕರರ ಸಂಘದ ಪರಮಶಿವಯ್ಯ, ದೂರಸಂಪರ್ಕ ಇಲಾಖೆಯ ಹರೀಶ್, ಉಪನ್ಯಾಸಕ ರವೀಂದ್ರಬಾಬು, ಹಿರಿಯ ದಲಿತ ಮುಖಂಡ ನಾರಾಯಣದಾಸ್, ವೆಂಕಟೇಶ್‌ಮೂರ್ತಿ ಮತ್ತಿತರರು ಭಾಗವಹಿಸಿದ್ದರು.

ಮಾರ್ಕ್ಸ್ ದ್ವಿಶತಮಾನೋತ್ಸವ ಆಚರಣಾ ಸಮಿತಿ ಅಧ್ಯಕ್ಷ ಧರ್ಮೇಶ್ ಅಧ್ಯಕ್ಷತೆ ವಹಿಸಿದ್ದರು.

ಇದಕ್ಕೂ ಮೊದಲು ಕಾರ್ಲ್‌ಮಾರ್ಕ್ಸ್ ಜೀವನಾಧಾರಿತ ಯಂಗ್ ಕಾರ್ಲ್‌ಮಾರ್ಕ್ಸ್ ಸಿನಿಮಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

# ರಾಫೆಲ್ ಹಗರಣ ತನಿಖೆಗೆ ಜೆಪಿಸಿ ರಚಿಸಿ: ಮೊಹಮ್ಮದ್ ರಿಯಾಸ್



ಕೇಂದ್ರದ ಬಿಜೆಪಿ ನೇತೃತ್ವದ ಎನ್‌ಡಿಎ ಸರಕಾರದಲ್ಲಿ ರಾಫೆಲ್ ಯುದ್ಧವಿಮಾನ ತಯಾರಿಸುವ ಗುತ್ತಿಗೆ ಒಪ್ಪಂದ ಹಗರಣವನ್ನು ಕೂಡಲೇ ಕೇಂದ್ರ ಸರಕಾರ ಜಂಟಿ ಸದನ ಸಮಿತಿ ರಚಿಸಿಯೇ ತನಿಖೆ ನಡೆಸಬೇಕೆಂದು ಡಿವೈಎಫ್‌ಐ ರಾಷ್ಟ್ರಾಧ್ಯಕ್ಷರಾದ ಮೊಹಮ್ಮದ್ ರಿಯಾಸ್ ಒತ್ತಾಯಿಸಿದರು. ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಡಿವೈಎಫ್‌ಐ ರಾಜ್ಯ ಮತ್ತು ಜಿಲ್ಲಾ ಸಮಿತಿಗಳು ರಾಫೆಲ್ ಹಗರಣ ತನಿಖೆಗೆ ಒತ್ತಾಯಿಸಿ ನಡೆಸುತ್ತಿದ್ದ ಪ್ರತಿಭಟನೆಯಲ್ಲಿ ಪಾಲ್ಗೊಂಡು ಮಾತನಾಡಿದರು.

ಏಳೂವರೆ ದಶಕಗಳ ಇತಿಹಾಸವಿರುವ ಹಾಗೂ ದೇಶ–ವಿದೇಶಗಳ ವೈಮಾನಿಕ ಯೋಜನೆ ಸಿದ್ಧಪಡಿಸಿ ಅಭಿವೃದ್ಧಿಪಡಿಸಿದ ಹೆಗ್ಗಳಿಕೆ ಇರುವ ಸರಕಾರಿ ಸ್ವಾಮ್ಯದ ಎಚ್‌ಎಎಲ್ ಗೆ ರಾಫೆಲ್ ಯುದ್ಧ ವಿಮಾನ ತಯಾರಿಸುವ ಸಾಮರ್ಥ್ಯವಿಲ್ಲವೆಂಬ ನೆಪವೊಡ್ಡಿ ಖಾಸಗಿ ಕಂಪೆನಿಯಾದ ಅಂಬಾನಿ ಒಡೆತನದ ರಿಲಯನ್ಸ್ ಡಿಫೆನ್ಸ್‌ಗೆ ಒಂದು ಲಕ್ಷ ಕೋಟಿಯ ಬೃಹತ್ ಮೌಲ್ಯದ ಗುತ್ತಿಗೆ ಒಪ್ಪಂದ ಮಾಡಿಕೊಂಡಿರುವುದರ ಹಿಂದೆ ಅತಿದೊಡ್ಡ ಭ್ರಷ್ಟಾಚಾರ ಹಗರಣ ನಡೆದಿದೆ ಎಂದು ಮಹಮ್ಮದ್ ರಿಯಾಸ್ ಆರೋಪಿಸಿದರು.

ಡಿವೈಎಫ್‌ಐ ರಾಜ್ಯ ಕಾರ್ಯದರ್ಶಿ ಬಸವರಾಜ ಪೂಜಾರ ಮಾತನಾಡಿ, ದೇಶದ ಜನತೆ ಈ ಹಗರಣದ ಕುರಿತು ಪ್ರಶ್ನಿಸಿದರೆ, ಪ್ರಧಾನಮಂತ್ರಿ ನರೇಂದ್ರ ಮೋದಿಯವರು ರಿಲಯನ್ಸ್ ಡಿಫೆನ್ಸ್ ಕಂಪೆನಿ ಪಾಲುದಾರನ್ನಾಗಿಸಿದ್ದು ನಾವಲ್ಲ, ಫ್ರಾನ್ಸ್ ನ ಡಸಾಲ್ಟ್ ಏವಿಯೇಶನ್ ಎಂದಿದ್ದರು. ಆದರೆ ಸ್ವತಃ ಫ್ರಾನ್ಸ್ ನ ಅಂದಿನ ಅಧ್ಯಕ್ಷರಾದ ಹೊಲ್ಲಾಂಡ್ ಅವರು ರಿಲಯನ್ಸ್ ಕಂಪೆನಿಯನ್ನು ರಫೆಲ್ ಒಪ್ಪಂದದ ಭಾರತೀಯ ಪಾಲುದಾರನನ್ನಾಗಿ ನಿಯೋಜಿಸುವಂತೆ ಭಾರತ ಸರಕಾರವೇ ಹೇಳಿತ್ತು ಎನ್ನುವ ಅಂಶವನ್ನು ಬಹಿರಂಗಪಡಿಸಿದ್ದು, ಒಪ್ಪಂದದ ಹೊಣೆಯನ್ನು ಫ್ರಾನ್ಸ್ ಸರಕಾರದ ಮೇಲೆ ಹಾಕಿ ಸ್ವತಃ ಪ್ರಧಾನಮಂತ್ರಿಗಳೇ ದೇಶದ ಜನರನ್ನು ದಿಕ್ಕುತಪ್ಪಿಸುತ್ತಿರುವು ನಾಚಿಕೆಗೇಡು ಎಂದರು.

ಪ್ರತಿಪಕ್ಷಗಳು ಸೇರಿದಂತೆ ಜನತೆ ಪ್ರತಿರೋಧ ತೋರುತ್ತಿದ್ದರೂ ಕೇಂದ್ರ ಸರಕಾರವು ರಾಫೆಲ್ ಯುದ್ಧ ವಿಮಾನ ವಿವಾದದ ತನಿಖೆ ಅಗತ್ಯವಿಲ್ಲವೆಂದು ಹೇಳಿ ಜನತೆಯನ್ನು ವಂಚಿಸುತ್ತಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ದೇಶದ ಪ್ರಜೆಗಳಿಗೆ ಉತ್ತರದಾಯಿಯಾಗಿರಬೇಕಾದ ಕೇಂದ್ರ ಸರಕಾರವು ಸರಕಾರಿ ಸ್ವಾಮ್ಯದ ಸಂಸ್ಥೆಗಳನ್ನು ಬಲಹೀನಗೊಳಿಸಿ, ಸ್ವ–ಲಾಭಕ್ಕಾಗಿ ಖಾಸಗೀ ಕಾರ್ಪೋರೇಟ್ ಕಂಪೆನಿಗಳ ಬಾಲಂಗೋಚಿಯಾಗುವುದು ದೇಶದ ಜನತೆಗೆಸಗುವ ಮಹಾದ್ರೋಹವಾಗಿದೆ ಎಂದರು.

ಜಿಲ್ಲಾಧ್ಯಕ್ಷ ಎಂ. ನಂಜೇಗೌಡ ಮಾತನಾಡಿ, ಕೇಂದ್ರ ಸರಕಾರ ಮಹಾನ್ ಭ್ರಷ್ಟಾಚಾರದಿಂದ ಕೂಡಿರುವ ಈ ಒಪ್ಪಂದದ ಸಮಗ್ರ ತನಿಖೆಗಾಗಿ ಕೂಡಲೇ ಸಂಸತ್ತಿನ ಜಂಟಿ ಸದನ ಸಮಿತಿಯನ್ನು ರಚಿಸಬೇಕು. ಹಾಗೂ ವಿವಾದಾತ್ಮಕ ರಾಫೆಲ್ ಯುದ್ಧವಿಮಾನ ಒಪ್ಪಂದವನ್ನು ರದ್ದುಪಡಿಸಬೇಕು. ಈ ಒಪ್ಪಂದದಲ್ಲಿ ಖಾಸಗೀ ಕಂಪೆನಿಗಳಿಗೆ ಅವಕಾಶ ನೀಡದೇ, ಸರಕಾರೀ ಸ್ವಾಮ್ಯದ ಎಚ್‌ಎಎಲ್ ಮೂಲಕವೇ ರಾಫೆಲ್ ಯುದ್ಧವಿಮಾನ ತಯಾರಿಕೆಯ ಮರು ಒಪ್ಪಂದಕ್ಕೆ ಮುಂದಾಗಬೇಕು ಎಂದು ಆಗ್ರಹಿಸದರು.

ಪ್ರತಿಭಟನೆಯ ನೇತೃತ್ವವನ್ನು ರಾಜ್ಯ ಖಜಾಂಚಿ ನಿಧಿನ್ ಪಿಕೆ, ರಾಜ್ಯ ಸಮಿತಿ ಸದಸ್ಯೆ ರೇಣುಕಾ ಕಹಾರ, ಬೆಂಗಳೂರು ದಕ್ಷಿಣ ಜಿಲ್ಲಾ ಸಂಚಾಲಕ ಕೆ. ರವಿಕುಮಾರ್, ರಿಯಾಸುದ್ದೀನ್ ಕೆಪಿಎಂ, ಮುನಿಕೃಷ್ಣ ವಹಿಸಿದ್ದರು. ಎಸ್‌ಎಫ್‌ಐ ಮುಖಂಡರಾದ ವೆಂಕಟೇಶ್.ಕೆ, ಸಾಗರ ಕೂಡಗಿ, ಜೆಎಂಎಸ್ ಮುಖಂಡರಾದ ಗೀತಾ ರವಿ, ದಲಿತ ಮಹಾಸಭಾ ರಾಜ್ಯ ಮುಖಂಡರಾದ ಅರುಣ ಸಾಗರ, ಜೈಭೀಮ್ ಸೇನೆ ರಾಜ್ಯ ಸಂಚಾಲಕರಾದ ನಂಜೇಶ್ ಸೇರಿದಂತೆ ಹಲವರು ಭಾಗವಹಿಸಿದ್ದರು.

# ಬಳ್ಳಾರಿ ವಿ.ವಿ. ಬಿ.ಇಡಿ ವಿದ್ಯಾರ್ಥಿಗಳ ಪ್ರವೇಶ ಶುಲ್ಕ ಹೆಚ್ಚಳಕ್ಕೆ SFI ವಿರೋಧ

ಕರ್ನಾಟಕ ರಾಜ್ಯದಲ್ಲಿ ಉನ್ನತ ಶಿಕ್ಷಣ ಕಲಿಯವರ ಸಂಖ್ಯೆ ಹೈದ್ರಾಬಾದ್ ಕರ್ನಾಟಕ ಭಾಗದಲ್ಲಿ ತುಂಬಾ ಕಡಿಮೆ ಇದೆ. ಅಂತಹದರಲ್ಲಿ ಹಣದ ದಾಹಕ್ಕೆ ಬಾಯಿ ತೆರೆದು ಕುಳಿತಿರುವ ವಿ.ವಿ.ಯ ಕುಲಪತಿಯು ಬಿ.ಇಡಿ ವಿದ್ಯಾರ್ಥಿಗಳ ಪ್ರವೇಶ ಫೀ ರಾಜ್ಯದ ಇತರೆ ವಿಶ್ವವಿದ್ಯಾಲಯದ ಶುಲ್ಕಕಿಂತ ಮೂರು ಪಟ್ಟು ಜಾಸ್ತಿ ಮಾಡಿದ್ದಾರೆ. ಆ ಮೂಲಕ ಉನ್ನತ ಶಿಕ್ಷಣ ಅನ್ನುವುದು ಬಡವರಿಗೆ ಅಲ್ಲ ಕೇವಲ ಹಣವಂತರಿಗೆ ಮಾತ್ರ ಎನ್ನುವ ಧೋರಣೆ ಅನುಸರಿಸುತ್ತಿದ್ದಾರೆ. ಬಿ.ಇಡಿ ಶಿಕ್ಷಣವನ್ನು ಮಾರುಕಟ್ಟೆಯಲ್ಲಿ ಮಾರುವ ತರಕಾರಿ ತರಹ ಮಾರಾಟದ ವಸ್ತುವಾಗಿ ಮಾಡುತ್ತಿರುವುದನ್ನು SFI ರಾಜ್ಯ ಸಮಿತಿ ವಿರೋದಿಸಿದೆ.

ಇತ್ತೀಚೆಗೆ ಒಂದಲ್ಲ ಒಂದು ರೀತಿಯಲ್ಲಿ ಪ್ರತಿಯೊಂದರಲ್ಲಿ ಎಡವಟ್ಟು ಮಾಡಿಕೊಂಡು ಬರುತ್ತಿರುವ ಬಳ್ಳಾರಿ ವಿಶ್ವವಿದ್ಯಾಲಯ ಮತ್ತೇ ಶಾಕ್ ನೀಡಿದೆ. ಬಡ ವಿದ್ಯಾರ್ಥಿಗಳು ಹೆಚ್ಚಾಗಿ ಕಲಿಯುವ ಬಿ.ಇಡಿ ಕೋರ್ಸ್ ಶುಲ್ಕ ಹೆಚ್ಚಳದ ಮೂಲಕ ತಣ್ಣೀರೆರಚಿದೆ.

ಬಡ ದಲಿತ ಅಲ್ಪಸಂಖ್ಯಾತ ವಿದ್ಯಾರ್ಥಿಗಳು ಬಿ.ಇಡಿ ಮಾಡುವ ಕನಸಿಗೆ ನೀರೆರಚುತ್ತಿದೆ. ರಾಜ್ಯದಲ್ಲಿರುವ ಅನೇಕ ವಿ.ವಿ.ಗಳಲ್ಲಿ (ಧಾರವಾಡ, ವಿಜಾಪುರ, ಕಲಬುರ್ಗಿ) ಬಿ.ಇಡಿ ವಿದ್ಯಾರ್ಥಿಗಳ ಶುಲ್ಕ ಕೇವಲ ರೂ. 3000 ದಷ್ಟು ಇದ್ದು ಬಳ್ಳಾರಿ ವಿ.ವಿ. 9465 ರೂ. ಮಾಡಿರುವುದು ನಾಚಿಕೆಗೇಡಿನ ಸಂಗತಿಯಾಗಿದೆ. ಕೂಡಲೇ ವಿ.ವಿ ಶುಲ್ಕ ವನ್ನು ಕಡಿತ ಮಾಡಬೇಕೆಂದು SFI ಬಳ್ಳಾರಿ ವಿ.ವಿ ವ್ಯಾಪ್ತಿಯಲ್ಲಿ ಹೋರಾಟಕ್ಕೆ ಕರೆ ನೀಡಿದೆ.

# ಮಿನಿ ಅಂಗನವಾಡಿ ಕಾರ್ಯಕರ್ತೆಯರ ರಾಜ್ಯ ಸಮಾವೇಶ

ಕರ್ನಾಟಕ ರಾಜ್ಯ ಅಂಗನವಾಡಿ ನೌಕರರ ಸಂಘ (CITU ಸಂಯೋಜಿತ) ದಿಂದ ಬೆಂಗಳೂರಿನ ಇಎಂ.ಎಸ್‌ಭವನದಲ್ಲಿ ಮಿನಿ ಅಂಗನವಾಡಿ ಕಾರ್ಯಕರ್ತೆಯರ ರಾಜ್ಯ ಸಮಾವೇಶ ನಡೆಸಲಾಯಿತು. ರಾಜ್ಯಾಧ್ಯಕ್ಷರಾದ ಕಾಮ್ರೇಡ್ ವರಲಕ್ಷ್ಮಿ ಉದ್ಘಾಟನೆ ಮಾಡಿ ಮಾತನಾಡಿದರು. ರಾಜ್ಯದ ಎಲ್ಲಾ ಜಿಲ್ಲೆಗಳಿಂದ ಕಾರ್ಯಕರ್ತೆಯರು ಭಾಗವಹಿಸಿ ತಮ್ಮ ಸಮಸ್ಯೆಗಳ ಬಗ್ಗೆ ಮಾತನಾಡಿದರು.



## ಜನಾರೋಗ್ಯ ಕಾಳಜಿಯಿಲ್ಲದ ಔಷಧಿ ನೀತಿ

# ಔಷಧಿ ನಿಷೇಧದ ಪ್ರಹಸನ

**ಡಾ॥ ಪ್ರಕಾಶ್ ಸಿ. ರಾವ್**

ಔಷಧಿಗಳನ್ನು ರೋಗ ಬಂದಾಗ ಬಳಸಲಾಗುತ್ತಿದ್ದು ಸಾವುಗಳನ್ನು ತಡೆಗಟ್ಟುವಲ್ಲಿ ಹಾಗೂ ಆರೋಗ್ಯ ಸುಧಾರಿಸುವಲ್ಲಿ ಗಣನೀಯ ಪಾತ್ರವಹಿಸಿವೆ. ಇದರ ಪರಿಣಾಮವಾಗಿ ಇಂದು ಭಾರತದಲ್ಲಿ ಸರಾಸರಿ ಆಯುಷ್ಯ ಹೆಚ್ಚುತ್ತಿರುವುದು ಒಂದು ಸಾಕ್ಷಿ. ಔಷಧಿಗಳ ಇನ್ನೊಂದು ವಿಶೇಷತೆಯನ್ನು ಕಡೆಗಣಿಸುವಂತಿಲ್ಲ. ಔಷಧಿಗಳು ಅನೇಕ ಅಡ್ಡ ಪರಿಣಾಮಗಳನ್ನುಂಟು ಮಾಡುತ್ತವೆ. ಇವುಗಳನ್ನು ವೈದ್ಯಕೀಯ ವ್ಯವಸ್ಥೆಯಿಂದಾದ (iatrogenic) ರೋಗಗಳು ಎಂದು ಕರೆಯಲಾಗಿದೆ. ಆಸ್ಪತ್ರೆಯಲ್ಲಿನ 20% ರೋಗಿಗಳು ಈ ಸಮಸ್ಯೆಯಿಂದ ಆಸ್ಪತ್ರೆಗೆ ದಾಖಲಾಗುತ್ತಾರೆಂದರೆ ಆಶ್ಚರ್ಯ ಪಡಬೇಕಿಲ್ಲ! ಜನಸಾಮಾನ್ಯರಿಗೆ ಈ ವಿಷಯ ತಿಳಿಯದಾಗಿದೆ. ಹಾಗೂ ಜನರು ನಂಬುವುದೇನೆಂದರೆ **"ಹೆಚ್ಚು ಔಷಧಿ ಉಪಯೋಗ ಖಂಡಿತ ರೋಗ ಗುಣ ಹೊಂದುವಿಕೆ"**. ಈ ನಂಬಿಕೆ ಜನರು ಮೂಡಲು ಔಷಧಿ ಕಂಪನಿಗಳೇ ಕಾರಣ ಎಂದು ಹೇಳಬಹುದು.



ಔಷಧಿ ಕಂಪನಿಗಳು ಹೆಚ್ಚೆಚ್ಚು ಔಷಧಿಗಳನ್ನು ತಯಾರಿಸಿ ಮಾರುತ್ತಿವೆ. ಔಷಧಿ ಶಾಸ್ತ್ರದ ಪ್ರಕಾರ ಕೇವಲ 300 ಔಷಧಿಗಳು ಸುಮಾರು ಎಲ್ಲ ಅನಾರೋಗ್ಯ ಸಮಸ್ಯೆಗಳನ್ನು ಸರಿಪಡಿಸಬಹುದಾದರೆ ಮಾರುಕಟ್ಟೆಯಲ್ಲಿ ಲಕ್ಷಾಂತರ ಔಷಧಿಗಳಿವೆ ಎಂದರೆ ಆಶ್ಚರ್ಯವಾಗುವುದಿಲ್ಲವೆ? ಈ ಹೆಚ್ಚು ಔಷಧಿಗಳಿಂದ ಅಡ್ಡ ಪರಿಣಾಮಗಳು ಅಪಾರ ಹಾಗೂ ಚಿಕಿತ್ಸಾ ವೆಚ್ಚ ಹೆಚ್ಚುವುದು. ಇದಕ್ಕೆ ಮುಖ್ಯ ಕಾರಣ ಸರ್ಕಾರ, ಔಷಧಿ ಕಂಪನಿಗಳು ಹಾಗೂ ವೈದ್ಯರು. ವಿಷಗಳೇ ಆದರೂ, ಅಡ್ಡ ಪರಿಣಾಮಗಳಿದ್ದರೂ ಅಂತಹ ಔಷಧಿಗಳನ್ನು ತಯಾರಿಸಲು ಔಷಧಿ ನಿಯಂತ್ರಣ ಪರವಾನಗಿ ನೀಡುತ್ತದೆ. ಇದಕ್ಕೆ ಮುಖ್ಯ ಕಾರಣ ಆ ಔಷಧಿಗಳ ಒಳ್ಳೆಯ ಗುಣಗಳು. ಸಾಮಾನ್ಯವಾಗಿ ಒಳ್ಳೆಯ ಗುಣಗಳು ಹೆಚ್ಚಾಗಿದ್ದು ಕೆಲವೇ ಅಡ್ಡ ಪರಿಣಾಮಗಳಿದ್ದ ಔಷಧಿಗೆ, ಔಷಧಿ ನಿಯಂತ್ರಣ ಪರವಾನಗಿ ನೀಡುವುದು ಸರಿಯೇ. ಈಗಿರುವ ಔಷಧಿಗಿಂತ ಕಡಿಮೆ ಅಡ್ಡ ಪರಿಣಾಮ ಮತ್ತು ಹೆಚ್ಚು ಒಳ್ಳೆಯ ಪರಿಣಾಮಗಳಿರುವ ಔಷಧಿ ಆವಿಷ್ಕಾರವಾದರೆ ಔಷಧಿ ನಿಯಂತ್ರಣ ಅದಕ್ಕೆ ಪರವಾನಗಿ ನೀಡಿ, ಮೊದಲಿದ್ದ ಔಷಧಿಯನ್ನು ನಿಷೇಧಿಸುತ್ತದೆ.

ಆದರೆ ಇಂದಿನ ನಿಷೇಧ ಬೇರೆ ರೀತಿಯದ್ದಾಗಿದೆ. ಆದರೆ ನಮ್ಮ ದೇಶದಲ್ಲಿ ಇನ್ನೊಂದು ಸಮಸ್ಯೆ ಮೊದಲಿನಿಂದಲೂ ಇದ್ದರೂ ಅದರ ಬಗ್ಗೆ ಔಷಧಿ ನಿಯಂತ್ರಣ ಹಾಗೂ ನ್ಯಾಯಾಲಯಗಳು ಗಮನವನ್ನು ಹರಿಸಿಯೇ ಇಲ್ಲ. ಅವೇ ಸಮ್ಮಿಶ್ರ ಔಷಧಿಗಳು. ಈ ಸಮ್ಮಿಶ್ರ ಔಷಧಿಗಳು ಹಾವಳಿಯೇ ಉಂಟುಮಾಡಿವೆ. ಆದರೆ ಈ ಸಮಸ್ಯೆ ಇತರೇ ದೇಶದಲ್ಲಿ ಇಲ್ಲ ಹಾಗೂ ಇದು ನಮ್ಮ ದೇಶದ ಔಷಧಿ ನಿಯಂತ್ರಣ ವ್ಯವಸ್ಥೆ ಎಷ್ಟು ಕೆಟ್ಟದಾಗಿದೆಯೆಂದು ಬೊಟ್ಟು ಮಾಡಿ ತೋರಿಸಿದಾಗಲೂ ಸರಿಯಾಗುತ್ತಿಲ್ಲ.

**ಸಮ್ಮಿಶ್ರ ಔಷಧಿ ಹಾಗೂ ಅದರ ಸಮಸ್ಯೆ :**

ಹೆಚ್ಚು ಔಷಧಿಗಳು ಹೆಚ್ಚು ಅಡ್ಡಪರಿಣಾಮ ಹಾಗೂ ಬೆಲೆ ಜಾಸ್ತಿ. ವಿಶ್ವ ಆರೋಗ್ಯ ಸಂಸ್ಥೆ, ವೈದ್ಯಕೀಯ, ಔಷಧಿ ಪಠ್ಯಪುಸ್ತಕಗಳು ಒಂದೇ ಘಟಕದ ಔಷಧಿ (Generic Medicines) ಬಳಕೆಯನ್ನು ಶಿಫಾರಸ್ಸು ಮಾಡುತ್ತವೆ. ಅದಲ್ಲದೆ ಕೆಲವು ಔಷಧಿಗಳು ಸಮಿಶ್ರ ಔಷಧಿಗಳಾಗಿವೆ. ಸಮಿಶ್ರ ಔಷಧಿಗಳೆಂದರೆ ಎರಡು ಅಥವಾ ಮೂರು ಔಷಧಿಗಳನ್ನು ನಿಗದಿತ ಪ್ರಮಾಣದಲ್ಲಿ ಸೇರಿಸಿ ಒಂದೇ ಹೆಸರಿನಲ್ಲಿ (ಬ್ರಾಂಡ್) ಮಾರುವುದು.

ಸಮಿಶ್ರ ಔಷಧಿ ತಯಾರಿಕೆ ವೈಜ್ಞಾನಿಕವಲ್ಲ ಹಾಗೂ ಅಪಾಯಕರ. ಕಾರಣ ಕೆಲವನ್ನು ಊಟಕ್ಕೆ ಮೊದಲು ತೆಗೆದುಕೊಳ್ಳಬೇಕಾಗುತ್ತದೆ. ಇನ್ನು ಕೆಲವನ್ನು ಊಟದ ನಂತರ. ಇಂಥ ಔಷಧಿಗಳೂ ಸಮಿಶ್ರ ಮಾಡಿದಾಗ ಯಾವಾಗ ಉಪಯೋಗಿಸಬೇಕು. ವೈದ್ಯರಿಗೆ ಕೇವಲ ಜನೆರಿಕ್ (ಒಂದೇ ಘಟಕದ) ಔಷಧಿಯನ್ನು ಉಪಯೋಗಿಸಲು ಪಾಠ ಮಾಡಿದ್ದರೆ ಅವರು ಔಷಧಿ ಕಂಪನಿಗಳಿಂದ ಪ್ರಭಾವಿತರಾಗಿ ಸಮ್ಮಿಶ್ರ ಔಷಧಿಗಳನ್ನೇ ಬಳಸುವವರಾಗಿದ್ದಾರೆ. ಸಮ್ಮಿಶ್ರ ಔಷಧಿಯನ್ನು ಬಳಸಿದಾಗ, ಅನೇಕ ಬಾರಿ ಅನಗತ್ಯವಾಗಿ ಇತರೇ ಔಷಧಿಗಳನ್ನು ಬಳಸಿದಂತಾಗುತ್ತದೆ ಹಾಗೂ ಅಡ್ಡಪರಿಣಾಮಗಳು ಹೆಚ್ಚು.

ವಿಶ್ವ ಆರೋಗ್ಯ ನಿಲುವು ಹಾಗೂ ಔಷಧಿ ಶಾಸ್ತ್ರದ ಪ್ರಕಾರ ಕೆಲವೇ ಔಷಧಿಗಳನ್ನು ಸಮ್ಮಿಶ್ರ ಮಾಡಿ ಬಳಸಬೇಕಾಗುತ್ತದೆ. ಅದು ಕ್ಷಯರೋಗ, ಮಲೇರಿಯಾ ಹಾಗೂ ಹೆಚ್.ಐ.ವಿ. ಗೆ ಸಂಬಂಧಿಸಿದ್ದು. ಈ ರೋಗಗಳಿಗೆ ಒಂದೇ ಘಟಕದ ಔಷಧಿ ಬಳಸಿದರೆ ಅಪಾಯವಾಗಬಹುದು ಎಂಬ ಕಾರಣಕ್ಕೆ ಸಮ್ಮಿಶ್ರಣ ಮಾಡಿ ಬಳಸಲಾಗುತ್ತದೆ.

**ಭಾರತದ ಮಾರುಕಟ್ಟೆಯಲ್ಲಿ ದೊರಕುವ ಅರ್ಧದಷ್ಟು ಔಷಧಿಗಳು ಸಮ್ಮಿಶ್ರ ಔಷಧಿಗಳು. ಈ ಔಷಧಿಗಳು ಆರೋಗ್ಯ ರಕ್ಷಣೆಯ ಬದಲು ಅನಾರೋಗ್ಯ ಉಂಟುಮಾಡುತ್ತಿವೆಯೆಂದರೂ ತಪ್ಪಿಲ್ಲ. ಈ ಹಿನ್ನೆಲೆಯಲ್ಲಿ ಇತೀಚೆಗಿನ ಸರಕಾರದ ಪ್ರಕಟಣೆಯಲ್ಲಿ 328 ಸಮ್ಮಿಶ್ರ ಔಷಧಿಗಳ ನಿಷೇಧವನ್ನು ಅರ್ಥ ಮಾಡಿಕೊಳ್ಳಬೇಕು. ಆದರೆ ಸರ್ಕಾರ ಪರಿಣಾಮಕಾರಿಯಾಗಿ ಔಷಧಿ ನಿಷೇಧ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ. ಅದು ಔಷಧಿ ಕಂಪನಿಗಳಿಗೆ ಸಹಾಯಕವಾಗಿದೆ. ಇಲ್ಲಿ ನ್ಯಾಯಾಂಗದ ದುರ್ಬಳಕೆಯಾಗಿದೆ. ನ್ಯಾಯಾಂಗಕ್ಕೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಧೀಶರು ಔಷಧಿ ಬಗ್ಗೆ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳದೇ ಒಂದು ಸಮಿತಿ ನಿರ್ಮಿಸಿ ಅವರಿಗೆ ಜವಾಬ್ದಾರಿ ನೀಡುತ್ತಾರೆ. ಅವರು ಹಲವಾರು ವರ್ಷದ ನಂತರ ತೀರ್ಮಾನ ಕೊಡುತ್ತಾರೆ. ಅದನ್ನು ನ್ಯಾಯಾಧೀಶರು ಜಾರಿಗೆ ತರುತ್ತಾರೆ. ಆದರೆ ಔಷಧಿ ಕಂಪನಿಗಳು ಅದರ ವಿರುದ್ಧ ತಡೆಯಾಜ್ಞೆ ತರುತ್ತವೆ. ಈ ನಡುವೆ ಔಷಧಿ ಕಂಪನಿಗಳು ಅನಗತ್ಯ ಔಷಧಿ ಮಾರಿ ಲಾಭ ಮಾಡುತ್ತಲೇ ಇರುತ್ತವೆ.**

ಕೆಲವೊಮ್ಮೆ ಎರಡು ಔಷಧಿ ಬಳಸಿದಾಗ ಒಂದು ಔಷಧಿ ಇನ್ನೊಂದು ಔಷಧಿಯ ಸಾಮರ್ಥ್ಯ ಹೆಚ್ಚುತ್ತದೆ. ಉದಾ. ಟ್ರೈಮೆಥೋಪ್ರಿಮ್, ಸಲ್ಫಾಮೆಥೊಕ್ಸಝೋಲ್ (TRIMETHOPRIM + SULFAMETHOXAZOL) ಕ್ಲಾವೂನಿಕ್ ಆಸಿಡ್ ಹಾಗೂ ಅಮಾಕ್ಸಿಸಿಲಿನ್ (CLAVUNIC ACID + AMOXXYCILIN) ಆದ್ದರಿಂದ ಇಂತಹ ಸಮ್ಮಿಶ್ರ ಔಷಧಿಯು ಅಗತ್ಯ. ವಿಶ್ವ ಆರೋಗ್ಯ ಸಂಸ್ಥೆಯ ಅಗತ್ಯ ಔಷಧಿ ಪಟ್ಟಿಯಲ್ಲಿ ಹಾಗೂ ಇಂಡಿಯನ್ ಎಸೆನ್ಶಿಯಲ್ ಮೆಡಿಸಿನ್ ಲಿಸ್ಟ್‌ನಲ್ಲಿ ಕೇವಲ 30 ಕ್ಕಿಂತ ಕಡಿಮೆ ಸಮ್ಮಿಶ್ರ ಔಷದಿಗಳಿವೆ. ಆದರೆ ಮಾರುಕಟ್ಟೆಯಲ್ಲಿ ದೊರಕುವ ಸಮ್ಮಿಶ್ರ ಔಷಧಿಗಳ ಸಂಖ್ಯೆ 1000. ಇದಕ್ಕೆ ಕಾರಣ ಔಷಧಿ ಕಂಪನಿಗಳ ಲಾಭ ಕೋರ ನೀತಿ ಹಾಗೂ ಸರಕಾರದ ನಿರ್ಲಕ್ಷ್ಯ. ಭಾರತದಲ್ಲಿ 30,000 ಬಳಸುವ ಸಮ್ಮಿಶ್ರ ಬ್ರಾಂಡ್ (ಔಷಧಿ ನಿಯಂತ್ರಣದ ಹತ್ತಿರವೂ ಸರಿಯಾದ ಮಾಹಿತಿ ಇಲ್ಲ) ಗಳಿವೆ ಎನ್ನಲಾಗಿದೆ.

ಭಾರತದ ಮಾರುಕಟ್ಟೆಯಲ್ಲಿ ದೊರಕುವ ಅರ್ಧದಷ್ಟು ಔಷಧಿಗಳು ಸಮ್ಮಿಶ್ರ ಔಷಧಿಗಳು. ಈ ಔಷಧಿಗಳು ಆರೋಗ್ಯ ರಕ್ಷಣೆಯ ಬದಲು ಅನಾರೋಗ್ಯ ಉಂಟುಮಾಡುತ್ತಿವೆಯೆಂದರೂ ತಪ್ಪಿಲ್ಲ.

ಈ ಹಿನ್ನೆಲೆಯಲ್ಲಿ ಇತೀಚೆಗಿನ ಸರಕಾರದ ಪ್ರಕಟಣೆಯಲ್ಲಿ 328 ಸಮ್ಮಿಶ್ರ ಔಷಧಿಗಳ ನಿಷೇಧವನ್ನು ಅರ್ಥ ಮಾಡಿಕೊಳ್ಳಬೇಕು. ಇತೀಚೆಗಿನ ಔಷಧಿ ನಿಷೇಧ ಸರಕಾರ ದಶಕಗಳಿಂದ ತೆಗೆದುಕೊಳ್ಳುತ್ತಿರುವ ತಪ್ಪು ನಿರ್ಧಾರಗಳ ಸರಣಿಯಲ್ಲೊಂದು.

ಭಾರತೀಯ ಮಾರುಕಟ್ಟೆಯಲ್ಲಿ ಅವೈಜ್ಞಾನಿಕ ಸಮ್ಮಿಶ್ರ ಔಷಧಿಗಳು ಇವೆ. ಈ ಸಮ್ಮಿಶ್ರ ಔಷಧಿಗಳನ್ನು ವೈದ್ಯರು ಬರೆದುಕೊಡುವುದು, ಔಷಧಿ ಕಂಪನಿಗಳು ಕಾನೂನನ್ನು ಉಲ್ಲಂಘಿಸಿ ಈ ಅವೈಜ್ಞಾನಿಕ ಸಮ್ಮಿಶ್ರ ಔಷಧಿಗಳನ್ನು ತಯಾರಿಸುತ್ತಿರುವುದು ಹಾಗೂ ಸರಕಾರ ಕಾನೂನನ್ನು ಉಲ್ಲಂಘಿಸಿ ಪರವಾನಗಿ ನೀಡುತ್ತಿರುವುದು ಈಗ ಸ್ಪಷ್ಟವಾಗಿದೆ.

**ಯಾಕೆ ಈ ಪರಿಸ್ಥಿತಿ ಬಂದಿದೆ?**

ಔಷಧಿ ಕಂಪನಿಗಳ ನೀತಿ, ಮಾಹಿತಿ ಇಲ್ಲದ ವೈದ್ಯರು ಹಾಗೂ ಭ್ರಷ್ಟ ಔಷಧಿ ನಿಯಂತ್ರಣಗಳ ನಡುವೆ ಇರುವ ಶಾಮೀಲು ಮತ್ತು ಹೊಂದಾಣಿಕೆಗಳು. ಆರೋಗ್ಯ ಹಾಗೂ ಕುಟುಂಬ ಕಲ್ಯಾಣದ ಸಮಿತಿಯು 2012 ರಲ್ಲಿ ಬಿಡುಗಡೆ ಮಾಡಿದ 59 ನೇ ವರದಿಯ ಪ್ರಕಾರ, ಕೇಂದ್ರ ಔಷಧಿ ಗುಣಮಟ್ಟ ಹತೋಟಿ ಸಂಸ್ಥೆ (CDSCO) ಈ ಶಾಮೀಲು ಹಾಗೂ ಹೊಂದಾಣಿಕೆಗಳ ಬಗ್ಗೆ ವಿವರ ನೀಡಿದೆ.

**ಜನಾರೋಗ್ಯ ಕಾಳಜಿಯಿಲ್ಲದ ಔಷಧಿ ನೀತಿ**

1961 ರಲ್ಲಿ ಭಾರತದಲ್ಲಿ ಯಾವ ಸಮ್ಮಿಶ್ರ ಔಷಧಿಗಳನ್ನು ವೈಜ್ಞಾನಿಕ ಮಾಹಿತಿ ಆಧಾರದ ಮೇಲೆ ತಯಾರಿಸಿ ಮಾರಬಹುದು ಎಂದು ಹೇಳುವ ಕಾನೂನು ಜಾರಿಗೆ ಬಂದಿತ್ತು. ಆದರೆ ಈ ಕಾನೂನಿನಲ್ಲಿ ಕೆಲವು ತಪ್ಪಿಸಿಕೊಳ್ಳುವ ಅಂಶಗಳನ್ನು ಬಳಸಿ (LOOP HOLES) ಔಷಧಿ ಕಂಪನಿಗಳು ಸಮ್ಮಿಶ್ರ ಔಷಧಿಗಳನ್ನು ತಯಾರಿಸಿ ಔಷಧಿ ನಿಯಂತ್ರಣದಿಂದ ಪರವಾನಗಿ ಪಡೆಯಿತು. ಆದರೆ ಈ ಕ್ರಮದಿಂದ ಜನಾರೋಗ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತದೆಂದು ಸರಕಾರವೂ ಗಮನಿಸಿಲ್ಲ ಹಾಗೂ ನ್ಯಾಯಾಲಯವೂ ಗಮನಿಸಿಲ್ಲ.

ಆದರೆ ಈ ವಿಷಯ 1988 ರ ಹೊತ್ತಿಗೆ ಕೆಲವರ ಗಮನಕ್ಕೆ ಬಂದಿದ್ದರಿಂದ ಆ ಹಿಂದಿನ ಕಾನೂನನ್ನು ಬಿಗಿಗೊಳಿಸಲಾಯಿತು. ಆದರೂ ಕೇಂದ್ರ ಔಷಧಿ ನಿಯಂತ್ರಣ ಸಂಸ್ಥೆಗೆ ಗೊತ್ತಿದ್ದಂತೆಯೇ ಕಾನೂನಿನ ಉಲ್ಲಂಘನೆ ಮುಂದುವರೆಯಿತು.

ಆಗ ವೈದ್ಯರ ಹಾಗೂ ಜನಸಾಮಾನ್ಯರ ನೀತಿಗಳ (ALL INDIA DRUG ACTION NETWORK) ಬೇಡಿಕೆಯಿಂದ 2007 ರಲ್ಲಿ ಔಷಧಿ ನಿಯಂತ್ರಣ 294 ಸಮ್ಮಿಶ್ರ ಔಷಧಿಗಳನ್ನು ನಿಷೇಧಿಸುವ ಉದ್ದೇಶವನ್ನು ವ್ಯಕ್ತಪಡಿಸಿತು. ಆದರೆ ಆ ನಿಷೇಧ ಜಾರಿಗೆ ಬರಲೇ ಇಲ್ಲ. ನಂತರ ತಜ್ಞರ ನೀತಿ (DRUG TECHNICAL ADVISORY BOARD) ಹಲವಾರು ಸಭೆಗಳನ್ನು ಮಾಡಿ 2016 ರಲ್ಲಿ 344 ಸಮ್ಮಿಶ್ರ ಔಷಧಿಗಳನ್ನು ನಿಷೇಧಿಸಿತು. ಆದರೆ, ಬಹುರಾಷ್ಟ್ರೀಯ ಔಷಧಿ ಕಂಪನಿಗಳು ನ್ಯಾಯಾಲಯದ ಮೆಟ್ಟಿಲು ಹತ್ತಿ, ಆ ನಿಷೇಧಕ್ಕೆ ತಡೆಯಾಜ್ಞೆ ತಂದವು. ಈ ತಡೆಯಾಜ್ಞೆಗೆ ಅರ್ಜಿ ಹಾಕಿದ ಕಂಪನಿಗಳು: ಫೈಝರ್, ಗ್ಲ್ಯಾಕ್ಸೋ–ಸ್ಮಿತ್–ಕ್ಲೈನ್ ಹಾಗೂ ಅಬಟ್ ತಮ್ಮ ಲಾಭಕೋರ ನೀತಿಗಾಗಿ ಜನಾರೋಗ್ಯವನ್ನು ಅಪಾಯಕ್ಕೆ ಒಡ್ಡಿದ್ದವು. ಈ ಕಂಪನಿಗಳು ಭಾರತದಲ್ಲಿ ತಯಾರಿಸುತ್ತಿರುವ ಅನಗತ್ಯ ಔಷಧಿಗಳನ್ನು ತಮ್ಮ ಮೂಲ ದೇಶದಲ್ಲಿ ತಯಾರಿಸಿ ಲಾಭ ಮಾಡಲಾಗದ್ದರಿಂದ ಈ ತಂತ್ರ ಹೂಡಿದ್ದವು. ಈ ಅನಗತ್ಯ ಔಷಧಿ ತಯಾರಿಸಿ, ಭ್ರಷ್ಟ ಅಧಿಕಾರಿಗಳಿಂದ ಪರವಾನಗಿ ಪಡೆದು, ಔಷಧಿ ಬಗ್ಗೆ ಸುಳ್ಳು ಮಾಹಿತಿ ನೀಡಿ, ಆಮಿಷ ಒಡ್ಡಿ ವೈದ್ಯರಿಂದ ಆ ಔಷಧಗಳನ್ನು ಬರೆಯುವಂತೆ ಮಾಡಿ ಲಾಭ ಗಳಿಸಲು ಮುಂದಾಗಿದ್ದವು.

ಉಚ್ಚನ್ಯಾಯಾಲಯ, ತಾಂತ್ರಿಕ ವಿಷಯಗಳಿಗೆ ಮಹತ್ವ ಕೊಡದೇ, (ಡಿಟಿಎಬಿ ಯನ್ನು ವಿಚಾರಿಸದೇ ಔಷಧಿ ನಿಷೇಧ ಮಾಡಲು ಮುಂದಾಗಿದ್ದೀರಿ ಎಂಬ ನೆಪದಲ್ಲಿ) ಕೇವಲ ಪ್ರಭಾವಿ ವಕೀಲರ ಮಾತಿಗೆ ಮಹತ್ವ ಕೊಟ್ಟು, ತಡೆಯಾಜ್ಞೆ ಕೊಟ್ಟು ನಿಷೇಧವನ್ನು ತೆರವುಗೊಳಿಸಿದೆ.

ಆದರೆ ಸರಕಾರ ಡಿಟಿಎಬಿ ಸಭೆಗೆ ಕಾದು ಅಲ್ಲಿ ನಿಷೇಧಿಸಲು ಯೋಗ್ಯವಾದ ಔಷಧಿಗಳನ್ನು ನಿಷೇಧಿಸುವಂತೆ ಆದೇಶ ಪಡೆದು, ನ್ಯಾಯಾಲಯದ ಮುಂದೆ ತಂದಾಗ ಈಗ ನಿಷೇಧವಾಗಿರುವ 308 ಸಮ್ಮಿಶ ಔಷಧಿಗಳು ಜಾರಿಗೆ ಬಂದಿವೆ. ಈಗ ನಿಷೇಧಿಸಿದ ಕೆಲವು ಔಷಧಿಗಳ ಮೇಲೆ ಪುನಃ ನಿಷೇಧ ತೆರವು ಮಾಡಲು ಔಷಧಿ ಕಂಪನಿಗಳು ಮುಂದಾಗಿವೆ.

**ತೀರ್ಮಾನ :**

* ಈಗ ಜಾರಿಗೆ ಬಂದ ಔಷಧಿಗಳು ಮಾರುಕಟ್ಟೆಯ

ಪುಟ 11 ಕ್ಕೆ



**ರಫೆಲ್ ವ್ಯವಹಾರದಲ್ಲಿ ಮೋದಿ ಸರಕಾರದ ಸುಳ್ಳುಗಳು, ಸತ್ಯವನ್ನು ಮರೆಮಾಚುವ ಪ್ರಯತ್ನಗಳು ಬಯಲಿಗೆ ಬಂದಿವೆ. ಪ್ರಧಾನ ಮಂತ್ರಿ ಮೋದಿಯವರು ಎರಡು ರೀತಿಗಳಲ್ಲಿ ದೋಷಿಯಾಗುತ್ತಾರೆ– ರಾಷ್ಟ್ರೀಯ ಭದ್ರತೆಗೆ ಅಪಾಯ ತಂದಿರುವುದು ಮತ್ತು ಭ್ರಷ್ಟಾಚಾರ ಹಾಗೂ ಚಮಚಾ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸಿರುವುದು. ಒಂದು ನಿಷ್ಪಕ್ಷಪಾತ ತನಿಖೆ ಅವರನ್ನು ಕಟಕಟೆಯಲ್ಲಿ ನಿಲ್ಲಿಸಬಲ್ಲುದು.**



**ಪ್ರಕಾಶ ಕಾರಟ್**

# ಕಟಕಟೆಯಲ್ಲಿ ಪ್ರಧಾನ ಮಂತ್ರಿ ಮೋದಿ



**ರಫೆಲ್** ವ್ಯವಹಾರ ಮೋದಿ ಸರಕಾರದ ಒಳಗಿನ ಭ್ರಷ್ಟಾಚಾರ ಮತ್ತು ಚಮಚಾ ಬಂಡವಾಳಶಾಹಿಯನ್ನು ಮುಚ್ಚಿಟ್ಟಿರುವ ಪರದೆಯನ್ನು ಹರಿದು ಹಾಕಿದೆ. ಅಷ್ಟೇ ಅಲ್ಲ, 126 ರಫೆಲ್ ಯುದ್ಧವಿಮಾನಗಳ ಈ ಹಿಂದಿನ ಕಾಂಟ್ರಾಕ್ಟನ್ನು ರದ್ದು ಮಾಡಿ ಅದರ ಜಾಗದಲ್ಲಿ ಹಾರಾಟಕ್ಕೆ ಸಿದ್ಧವಿರುವ ಸ್ಥಿತಿಯಲ್ಲಿರುವ 36 ವಿಮಾನಗಳ ಖರೀದಿಗೆ ಕಾರಣವಾದ ಘಟನೆಗಳು ಅನಾವರಣಗೊಳ್ಳುತ್ತಿದ್ದು, ಈ ಹೊಚ್ಚಹೊಸ ರಕ್ಷಣಾ ಹಗರಣದಲ್ಲಿ ಪ್ರಧಾನ ಮಂತ್ರಿಗಳ ಪಾತ್ರ ಪ್ರಕಟಗೊಳ್ಳುತ್ತಿದೆ.

ಕಳೆದ ವಾರ ಮಾಜಿ ಫ್ರೆಂಚ್ ಅಧ್ಯಕ್ಷ ಫ್ರಾಂಕೊಯ್ ಹೊಲ್ಲಾಂದೆ ಮಾಧ್ಯಮಗಳಿಗೆ ನೀಡಿದ ಹೇಳಿಕೆಗಳು ಮೋದಿ ಸರಕಾರದ ಸುಳ್ಳುಗಳನ್ನು, ಮರೆಮಾಚುವ ಪ್ರಯತ್ನಗಳನ್ನು ಬಯಲಿಗೆ ತಂದವು. ರಫೆಲ್ ವ್ಯವಹಾರಕ್ಕೆ ಸಹಿ ಹಾಕಿದಾಗ ಅಧ್ಯಕ್ಷರಾಗಿದ್ದ ಹೊಲ್ಲಾಂದೆಯವರು, ರಫೇಲ್ ವ್ಯವಹಾರದಲ್ಲಿ ಭಾರತೀಯ ಭಾಗೀದಾರರನ್ನು ಸೂಚಿಸಿದ್ದು ಭಾರತ ಸರಕಾರ, ಇದರಲ್ಲಿ ಫ್ರೆಂಚ್ ಸರಕಾರಕ್ಕೆ, ಅಥವ ಈ ವಿಮಾನದ ತಯಾರಕ ದಸ್ಸಾಲ್ಟ್‌ಗೆ ಯಾವುದೇ ಅವಕಾಶವಿರಲಿಲ್ಲ ಎಂದು ಫ್ರೆಂಚ್ ವೆಬ್‌ತಾಣವೊಂದಕ್ಕೆ ತಿಳಿಸಿದ್ದಾರೆ. "ಈ ವಿಷಯದಲ್ಲಿ ನಮಗೇನೂ ಆಯ್ಕೆಯಿರಲಿಲ್ಲ" ಎಂದು ಅವರು ಖಡಾಖಂಡಿತವಾಗಿ ಹೇಳಿದ್ದಾರೆ.

ಮರುದಿನವೇ, ಸಪ್ಟಂಬರ್ 22ರಂದು, ಫ್ರೆಂಚ್ ಸುದ್ದಿ ಸಂಸ್ಥೆ ಎಎಫ್‌ಪಿಗೆ ಗೆ ಈ ವಿಷಯದಲ್ಲಿ ಅವರು ಇನ್ನಷ್ಟು ಸ್ಪಷ್ಟೀಕರಣ ನೀಡಿದ್ದಾರೆ. "ಅಧಿಕಾರಕ್ಕೆ ಬಂದ ಮೇಲೆ ಮೋದಿ ಸರಕಾರ ರಫೆಲ್ ಮಾತುಕತೆಗಳಲ್ಲಿ ನಿರ್ಧರಿಸಿದ 'ಹೊಸ ಸೂತ್ರ'ದ ಭಾಗವಾಗಿ ರಿಲಯನ್ಸ್ ಗುಂಪಿನ ಹೆಸರು ಕಾಣಿಸಿಕೊಂಡಿತು ಎಂದು ಶ್ರೀಯುತ ಹೊಲ್ಲಾಂದ್ ಹೇಳಿದರು" ಎಂದು ಎಎಫ್‌ಪಿ ವರದಿ ಹೇಳುತ್ತದೆ.

ಇದು ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಅವರ ನಿಲುವನ್ನು ಸ್ಫೋಟಗೊಳಿಸಿತು. ಕೆಲವೇ ದಿನಗಳ ಹಿಂದೆಯಷ್ಟೇ ಅವರು ದಸ್ಸಾಲ್ಟ್ ಆರಿಸಿದ ಭಾರತೀಯ ಭಾಗೀದಾರ ಯಾರು ಎಂಬುದು ಭಾರತಕ್ಕೆ ಗೊತ್ತಿರಲಿಲ್ಲ, ಆ ನಿರ್ಧಾರದಲ್ಲಿ ಸರಕಾರಕ್ಕೆ ಯಾವ ಪಾತ್ರವೂ ಇರಲಿಲ್ಲ ಎಂದು ಹೇಳಿಕೊಂಡಿದ್ದರು.

ಈ ಹಗರಣದ ಸಾಕ್ಷ್ಯದಲ್ಲಿ ಭಾರತೀಯ ಆಫ್‌ಸೆಟ್‌ಭಾಗೀದಾರ(ಅಂದರೆ ಇದರಲ್ಲಿ ಒಂದು ನಿರ್ದಿಷ್ಟ ಮೌಲ್ಯದ ಕೆಲಸದ ಕಾಂಟ್ರಾಕ್ಟ್ ಪಡೆಯುವ ಭಾಗೀದಾರ–ಅನು) ಒಂದು ನಿರ್ಣಾಯಕ ಕೊಂಡಿ ಏಕೆ ಎಂಬುದನ್ನು ನೆನಪಿಸಿಕೊಳ್ಳುವುದು ಒಳ್ಳೆಯದು. 2012ರಲ್ಲಿ ಭಾರತೀಯ ವಾಯು ಪಡೆಗೆ 126 ಯುದ್ಧವಿಮಾನಗಳನ್ನು ಖರೀದಿಸಲು ಒಂದು ಬಹಿರಂಗ ಟೆಂಡರ್ ಮೌಲ್ಯಮಾಪನದ ಪ್ರಕ್ರಿಯೆಯಲ್ಲಿ ದಸ್ಸಾಲ್ಟ್ ತಯಾರಿಸುವ ರಫೆಲ್ ಯುದ್ಧವಿಮಾನವನ್ನು ಆಯ್ಕೆ ಮಾಡಲಾಯಿತು. ಈ ಕುರಿತ ಒಪ್ಪಂದ ಪತ್ರದಲ್ಲಿ ಸಾರ್ವಜನಿಕ ವಲಯದ ಹಿಂದುಸ್ತಾನ್ ಏರೊನಾಟಿಕ್ಸ್ ಲಿ.(ಹೆಚ್‌ಎಎಲ್) 108 ರಫೆಲ್ ಯುದ್ಧ ವಿಮಾನಗಳನ್ನು ಭಾರತದಲ್ಲಿ ತಯಾರಿಸುತ್ತದೆ ಎಂದು ಹೇಳಲಾಗಿತ್ತು.(18 ವಿಮಾನಗಳನ್ನು ಹಾರಾಟಕ್ಕೆ ಸಿದ್ಧವಾಗಿರುವ ಸ್ಥಿತಿಯಲ್ಲಿ ತರುವುದಾಗಿತ್ತು)

ಆದರೆ ಪ್ರಧಾನ ಮಂತ್ರಿಗಳು ಎಪ್ರಿಲ್ 2015ರಲ್ಲಿ ಪ್ಯಾರಿಸ್‌ಗೆ ಹೋದಾಗ, 126 ವಿಮಾನಗಳ ಆರಂಭದ ಕಾಂಟ್ರಾಕ್ಟನ್ನು ಕೈಬಿಡಲಾಯಿತು. ಮತ್ತು 36 ರಫೆಲ್ ವಿಮಾನಗಳನ್ನು ಹಾರಾಟಕ್ಕೆ ಸಿದ್ಧವಾಗಿರುವ ಸ್ಥಿತಿಯಲ್ಲಿ ದಸ್ಸಾಲ್ಟ್ ಪೂರೈಸಬೇಕು ಎಂಬ ಒಂದು ಹೊಸ ಕಾಂಟ್ರಾಕ್ಟ್‌ಗೆ ಸಹಿ ಮಾಡಲಾಯಿತು. ಅದರೊಂದಿಗೆ, 50% ದಷ್ಟು ಆಫ್‌ಸೆಟ್‌ನ ಕರಾರನ್ನು ಪೂರೈಸಲು ಅನಿಲ್ ಅಂಬಾನಿಯ ರಿಲಯನ್ಸ್ ಡಿಫೆನ್ಸ್ ಎಂಬ ಕಂಪನಿಯನ್ನು ಪ್ರಮುಖ ಭಾಗೀದಾರನಾಗಿ ಆಯ್ಕೆ ಮಾಡಲಾಯಿತು. ಅಂದರೆ ಈ ಅಂಬಾನಿ ಕಂಪನಿಗೆ ಈ ವ್ಯವಹಾರಕ್ಕೆ ಸಂಬಂಧಪಟ್ಟಂತೆ 21,000 ಕೋಟಿ ರೂ.ಗಳ ಕಾಂಟ್ರಾಕ್ಟ್‌ಗಳು ಸಿಗುತ್ತವೆ.

ಭಾರತೀಯ ವಾಯುಪಡೆಯಿಂದ ಬಿಡ್ಡಿಂಗ್ ಕರೆಯುವ ಮತ್ತು ಅವುಗಳ ಮೌಲ್ಯಮಾಪನ ಮಾಡುವ ಒಂದು ದೀರ್ಘ ಪ್ರಕ್ರಿಯೆಯನ್ನು ಪೂರೈಸಿ ಮಾಡಿಕೊಂಡ ಮೂಲ ಕಾಂಟ್ರಾಕ್ಟನ್ನು ರದ್ದು ಮಾಡಲು ಕಾರಣವೇನು ಎಂಬುದನ್ನು ಎಂದೂ ತೃಪ್ತಿಕರವಾಗಿ ವಿವರಿಸಿಲ್ಲ. ಭಾರತಕ್ಕೆ 126 ಯುದ್ಧವಿಮಾನಗಳು ಬೇಕಿದ್ದವು ಎಂಬುದರ ಬಗ್ಗೆ ವಿವಾದವೇನೂ ಇರಲಿಲ್ಲ. ಏಕೆಂದರೆ ಭಾರತೀಯ ವಾಯುಪಡೆಗೆ 42 ಸ್ಕ್ವಾಡ್ರನ್‌ಗಳ ತೀವ್ರ ಕೊರತೆಯಿತ್ತು.

ಮೋದಿ ಸರಕಾರ, ನಿರ್ದಿಷ್ಟವಾಗಿ ರಕ್ಷಣಾ ಮಂತ್ರಿ ನಿರ್ಮಲಾ ಸೀತಾರಾಮನ್ ಮತ್ತು ಹಣಕಾಸು ಮಂತ್ರಿ ಅರುಣ್ ಜೇಟ್ಲಿ ಬೆಲೆ ಮತ್ತು ಹೆಚ್‌ಎಎಲ್‌ನೊಂದಿಗೆ ಸಹ–ಉತ್ಪಾದನೆಯ ಒಪ್ಪಂದದ ಮಾತುಕತೆಗಳಲ್ಲಿ ಪ್ರಗತಿಯಾಗಿರಲಿಲ್ಲ ಎಂದು ಹೇಳಿ ವಿಷಯವನ್ನು ಗೋಜಲುಗೊಳಿಸಲು ಪ್ರಯತ್ನಿಸುತ್ತ ಬಂದಿದ್ದಾರೆ. ಹೆಚ್‌ಎಎಲ್‌ನಲ್ಲಿ ಮೂಲಸೌಕರ್ಯಗಳ ಕೊರತೆ ದಸ್ಸಾಲ್ಟ್ ಅದರೊಂದಿಗೆ ಒಂದು ಒಪ್ಪಂದಕ್ಕೆ ಬರದಿರಲು ಕಾರಣ ಎಂದು ಸಂದರ್ಶನವೊಂದರಲ್ಲಿ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ.

ಈ ಸುಳ್ಳು ಸಂಪೂರ್ಣವಾಗಿ ಬಯಲಾಗಿದೆ. ಇತ್ತೀಚೆಗೆ, ಸಪ್ಟಂಬರ್ 1, 2018ರಂದು ನಿವೃತ್ತರಾದ ಹೆಚ್‌ಎಎಲ್ ಅಧ್ಯಕ್ಷ ಟಿ. ಸುವರ್ಣರಾಜು ಹೆಚ್‌ಎಎಲ್‌ಗೆ ಸಾಮರ್ಥ್ಯದ ಕೊರತೆ ಇದೆ ಎಂಬುದನ್ನು ತಳ್ಳಿ ಹಾಕಿದ್ದಾರೆ. ಹೆಚ್‌ಎಎಲ್ ವಾಯುಪಡೆಯ ಬೆನ್ನೆಲುಬಾದ ನಾಲ್ಕನೇ ತಲೆಮಾರಿನ ಯುದ್ಧವಿಮಾನ 25 ಟನ್ ಸುಖೊಯ್–30ನ್ನು ಕಚ್ಚಾ ಸಾಮಗ್ರಿಗಳ ಹಂತದಿಂದಲೇ ತಯಾರಿಸಬಲ್ಲುದಾದರೆ, ನಾವು ಏನು ಮಾತಾಡ್ತಿದ್ದೇವೆ? ನಾವು ಅದನ್ನು (ಲೈಸೆನ್ಸ್ ಪಡೆದ ರಫೆಲ್ ಜೆಟ್‌ಗಳನ್ನು)ಖಂಡಿತವಾಗಿಯೂ ಮಾಡಬಹುದಾಗಿತ್ತು" ಎಂದು ಅವರು ಹೇಳಿದ್ದಾರೆ.

ದಸ್ಸಾಲ್ಟ್‌ನೊಂದಿಗೆ ಒಪ್ಪಂದ ಆಗಿರಲಿಲ್ಲ ಎಂಬುದೂ ಶುದ್ಧ ಸುಳ್ಳೆಂದು ಬಯಲಿಗೆ ಬಂದಿದೆ. "ದಸ್ಸಾಲ್ಟ್ ಮತ್ತು ಹೆಚ್‌ಎಎಲ್ ಪರಸ್ಪರ ಕೆಲಸದ ಹಂಚಿಕೆಯ ಕಾಂಟ್ರಾಕ್ಟ್‌ಗೆ ಸಹಿ ಹಾಕಿದ್ದವು. ಮತ್ತು ಅದನ್ನು ಸರಕಾರಕ್ಕೆ ಕೊಡಲಾಗಿತ್ತು. ಆ ಫೈಲನ್ನು ಸಾರ್ವಜನಿಕಗೊಳಿಸಿ ಎಂದು ನೀವು ಏಕೆ ಕೇಳುತ್ತಿಲ್ಲ? ಆ ಫೈಲ್‌ಗಳು ನಿಮಗೆ ಎಲ್ಲವನ್ನೂ ಹೇಳುತ್ತವೆ" ಎಂದು ಅವರು ಹೇಳಿದ್ದಾರೆ.

ಹೆಚ್‌ಎಎಲ್‌ನ ಮಾಜಿ ಅಧ್ಯಕ್ಷರು ಸತ್ಯ ಹೇಳುತ್ತಿದ್ದಾರೆ ಎಂಬುದು ದಸ್ಸಾಲ್ಟ್‌ನ ಮುಖ್ಯ ಕಾರ್ಯಕಾರಿ ಅಧಿಕಾರಿ (ಸಿಇಒ) ಎರಿಕ್ ಟ್ರೆಪಿಯರ್ ರವರ ಒಂದು ಪತ್ರಿಕಾ ಸಮ್ಮೇಳನದ ದಾಖಲೆ ಕೂಡ ದೃಢೀಕರಿಸುತ್ತದೆ. ಪ್ರಧಾನ ಮಂತ್ರಿಗಳ ಪ್ಯಾರಿಸ್ ಭೇಟಿಯ ಎರಡು ವಾರಗಳ ಮೊದಲು ಅವರು ವ್ಯವಹಾರ "95% ಪೂರ್ಣಗೊಂಡಿದೆ" ಮತ್ತು ಹೆಚ್‌ಎಎಲ್‌ನೊಂದಿಗೆ ಒಂದು ಕೆಲಸದ ಹಂಚಿಕೆಯ ಒಪ್ಪಂದಕ್ಕೆ ಸಹಿ ಹಾಕಲಾಗಿದೆ ಎಂದಿದ್ದರು.

ಚಮಚಾ ಬಂಡವಾಳಶಾಹಿ ಬರುವುದು ಇಲ್ಲಿಯೇ. ಅನಿಲ್ ಅಂಬಾನಿಯ ರಿಲಯನ್ಸ್ ಡಿಫೆನ್ಸ್‌ಗೆ ರಕ್ಷಣಾ ಉತ್ಪಾದನೆಯ ಅನುಭವವೇ ಇಲ್ಲ. ನಿಜ ಹೇಳಬೇಕೆಂದರೆ ಅವರ ಗುಂಪಿನ ಹಲವಾರು ಕಂಪನಿಗಳು ಭಾರಿ ಸಾಲದಲ್ಲಿವೆ. ಇಂತಹ ಒಂದು ಖಾಸಗಿ ಕಂಪನಿಗೆ ಒಂದು ಅತ್ಯಾಧುನಿಕ ಯುದ್ಧ ವಿಮಾನದ ಸಂಕೀರ್ಣವಾದ ಉಪಕರಣಗಳನ್ನು ಉತ್ಪಾದಿಸುವ ಕೆಲಸವನ್ನು ಕೊಟ್ಟದ್ದಾದರೂ ಹೇಗೆ?

ಇಲ್ಲಿಯೇ ಪ್ರಧಾನ ಮಂತ್ರಿಗಳ ನೇರ ಪಾತ್ರ ಬರುವುದು. ಮೋದಿ ಎಪ್ರಿಲ್ 2015ರಲ್ಲಿ ಫ್ರಾನ್ಸಿಗೆ ಅಧಿಕೃತ ಭೇಟಿಗೆ ಹೋಗಿದ್ದರು. ಅದಕ್ಕೆ ಮೊದಲು ಸರಕಾರದ ಯಾವುದೇ ಹಂತದಲ್ಲಿಯಾಗಲೀ, ಭಾರತೀಯ ವಾಯುಪಡೆಯಲ್ಲಾಗಲೀ, ದಸ್ಸಾಲ್ಟ್‌ನೊಂದಿಗೆ 126 ವಿಮಾನಗಳ ಕಾಂಟ್ರಾಕ್ಟನ್ನು ಕೈಬಿಡುವ ಮತ್ತು ಕಡಿಮೆ ವಿಮಾನಗಳಿಗೆ ಒಂದು ಹೊಸ ಒಪ್ಪಂದ ಮಾಡಿಕೊಳ್ಳುವ ಬಗ್ಗೆ ಯಾವುದೇ ಚರ್ಚೆ ಇರಲಿಲ್ಲ. ಸುರಕ್ಷತೆ ಕುರಿತ ಸಂಪುಟ ಸಮಿತಿಗೆ ಈ ಬಗ್ಗೆ ತಿಳಿಸಲಾಗಿರಲಿಲ್ಲ. ರಕ್ಷಣಾ ಮಂತ್ರಿ ಮನೋಹರ ಪರಿಕ್ಕರ್‌ಗೆ ಮೋದಿ ಪ್ಯಾರಿಸಿಗೆ ಹೊರಡುವ ಕೆಲವು ಗಂಟೆಗಳ ಮೊದಲಷ್ಟೇ ಈ ನಿರ್ಧಾರದ ಮಾಹಿತಿ ನೀಡಲಾಯಿತು.

ಹೀಗೆ ಪ್ರಧಾನ ಮಂತ್ರಿಗಳು ಫ್ರಾನ್ಸ್‌ಗೆ ಪಯಣಿಸುತ್ತಾರೆ. ಅವರ ಜೊತೆಗೆ ಇರುವ ಜನಗಳಲ್ಲಿ ಅನಿಲ್ ಅಂಬಾನಿ ಇರುತ್ತಾರೆ. ಅನಿಲ್ ಅಂಬಾನಿ ಹೊಸ ಒಪ್ಪಂದದ ಪ್ರಕಟಣೆಯ ನಂತರ ದಸ್ಸಾಲ್ಟ್ ಸಿಇಒ ರೊಂದಿಗೆ ಮಾತುಕತೆಯನ್ನು ನಡೆಸಿದರು ಎಂಬೊಂದು ವರದಿಯೂ ಇದೆ. ಆದ್ದರಿಂದ ಮೋದಿಯವರ ಸಲಹೆಯ ಮೇರೆಗೇ ಆ ಫ್ರೆಂಚ್ ಕಂಪನಿ ಅನಿಲ್ ಅಂಬಾನಿಯೊಂದಿಗೆ ಒಂದು ಒಪ್ಪಂದಕ್ಕೆ ಬಂತು ಎಂದು ನಂಬಲು ಸಕಲ ಕಾರಣಗಳೂ ಇವೆ.

ಹೆಚ್‌ಎಎಲ್ ಜಾಗದಲ್ಲಿ ಒಂದು ಖಾಸಗಿ ಕಂಪನಿಯ ಆಯ್ಕೆ ಮೋದಿ ಸರಕಾರದ ರಕ್ಷಣಾ ಉತ್ಪಾದನೆಯ ಖಾಸಗೀಕರಣದ ಓಟಕ್ಕೆ ಅನುಗುಣವಾಗಿಯೇ ಇದೆ. ಆದರೆ ಒಂದು ಅನರ್ಹ ಕಂಪನಿಯ ಆಯ್ಕೆ ಖಂಡಿತವಾಗಿಯೂ ಇದರಲ್ಲಿ ಪ್ರತಿಫಲಾಕಾಂಕ್ಷೆಯ ಅಂಶ ಇದೆ ಎಂಬುದನ್ನು ಸೂಚಿಸುತ್ತದೆ. ಅಷ್ಟೇ ಅಲ್ಲ, ಹೊಸ ಕಾಂಟ್ರಾಕ್ಟ್‌ನಲ್ಲಿ ರಫೆಲ್ ಯುದ್ಧವಿಮಾನದ ಬೆಲೆ ಈ ಹಿಂದಿನ ಒಪ್ಪಂದದಲ್ಲಿ ನಿಗದಿಯಾದುದರ ಎರಡು ಪಟ್ಟಾಗಿದೆ. ಈ ಸಂಗತಿಯನ್ನು ಮುಚ್ಚಿಡಲಿಕ್ಕಾಗಿಯೇ ಮೋದಿ ಸರಕಾರ ಸಂಸತ್ತಿಗೆ ಬೆಲೆಗಳ ವಿವರಗಳನ್ನು ಕೊಡಲು ಸತತವಾಗಿ ನಿರಾಕರಿಸಿಕೊಂಡು ಬಂದಿದೆ.

ಈ ವ್ಯವಹಾರದಲ್ಲಿ ಹಣದ ಜಾಡೇನೂ ಇದುವರೆಗೆ ಹೊರಬಂದಿಲ್ಲ ಎಂದು ಕೆಲವು ಟಿಪ್ಪಣಿಗಾರರು ಬೊಟ್ಟು ಮಾಡಿ ತೋರಿಸುತ್ತಿದ್ದಾರೆ. ಆದರೆ ಇದನ್ನು, ಹೇಗೆ ಮೋದಿಯವರ ಭಾರತದಲ್ಲಿ ಭ್ರಷ್ಟಾಚಾರ ಕಾನೂನುಬದ್ಧಗೊಂಡಿದೆ ಎಂಬ ಸಂದರ್ಭದಲ್ಲಿಟ್ಟು ನೋಡಬೇಕಾಗಿದೆ. ಈಗ ಲಂಚ ರುಷುವತ್ತುಗಳನ್ನು ಕಾನೂನು ಪ್ರಕಾರವೇ ಚುನಾವಣಾ ಬಾಂಡುಗಳ ಮೂಲಕ ತೆರಬಹುದು. ಈ ಬಗ್ಗೆ ಯಾರೂ ಯಾವುದೇ ಪ್ರಶ್ನೆ ಕೇಳುವಂತಿಲ್ಲ.


ಪ್ರಧಾನ ಮಂತ್ರಿಗಳ ಈ ಮನಸೋ ಇಚ್ಛೆಯ ಕ್ರಿಯೆಯಲ್ಲಿ ರಾಷ್ಟ್ರೀಯ ಭದ್ರತೆಗೆ ತೊಂದರೆ ಉಂಟು ಮಾಡಿರುವ ಇನ್ನೂ ದೊಡ್ಡ ಪ್ರಶ್ನೆ ಇದೆ. ವಾಯುಪಡೆಗೆ ಯುದ್ಧವಿಮಾನಗಳ ಸ್ಕ್ವಾಡ್ರನ್‌ಗಳ ತೀವ್ರ ಕೊರತೆ ಬಹಳಷ್ಟು ಬಾಧಿಸುತ್ತಿತ್ತು. ಈ ಬಗ್ಗೆ ಮೊದಲ ಪ್ರಸ್ತಾವದ ಕೋರಿಕೆ(ಆರ್‌ಎಫ್‌ಪಿ) ಯನ್ನು 2007ರಲ್ಲಿ ಯುಪಿಎ ಸರಕಾರದ ಅಡಿಯಲ್ಲಿ ಕೊಡಲಾಗಿತ್ತು. ಒಂದು ವಿಸ್ತಾರವಾದ ಪ್ರಕ್ರಿಯೆಯ ನಂತರ ಯುದ್ಧ ವಿಮಾನವನ್ನು ಗುರುತಿಸಲಾಯಿತು ಮತ್ತು 126 ಯುದ್ಧವಿಮಾನಗಳಿಗೆ 2012ರಲ್ಲಿ ಒಪ್ಪಂದ ಮಾಡಿಕೊಳ್ಳಲಾಯಿತು.

ಈ ಒಪ್ಪಂದವನ್ನು ತ್ವರಿತಗೊಳಿಸುವ ಬದಲು ಮೋದಿ ಅದಕ್ಕೆ ಅಡ್ಡಗಾಲು ಹಾಕಿದರು. ಬದಲಿಗೆ, ಕೇವಲ ಎರಡು ಸ್ಕ್ವಾಡ್ರನ್‌ಗಳು, ಅಂದರೆ 36 ರಫೆಲ್ ಯುದ್ಧವಿಮಾನಗಳು ಸಿಗುತ್ತವೆ. ಇದು ವಾಯುಪಡೆಯ ಅಗತ್ಯಗಳಿಗೆ ಏನೇನೂ ಸಾಲವು. ಅಲ್ಲದೆ ಇವನ್ನು ಸಿದ್ಧ ರೂಪದಲ್ಲಿಯೇ ಖರೀದಿಸುವುದರಿಂದಾಗಿ ತಂತ್ರಜ್ಞಾನದ ವರ್ಗಾವಣೆಯೂ ಇಲ್ಲ. ಇವೆಲ್ಲದರ ಮೇಲೆ ವಾಯುಪಡೆ 100 ಯುದ್ಧ ವಿಮಾನಗಳನ್ನು ಖರೀದಿಸುವ ಹೊಸದೊಂದು ಕೋರಿಕೆಯನ್ನು ಸರಕಾರದ ಮೂಲಕ ಇಟ್ಟಿದೆ. ಅಂದರೆ ಇಡೀ ಪ್ರಕ್ರಿಯೆಯಲ್ಲಿ ಒಂದು ದಶಕಕ್ಕೂ ಹೆಚ್ಚಿನ ವಿಳಂಬವಾಗಿದೆ.

ಆದ್ದರಿಂದ, ಪ್ರಧಾನ ಮಂತ್ರಿ ಮೋದಿಯವರು ಎರಡು ರೀತಿಗಳಲ್ಲಿ ದೋಷಿಯಾಗುತ್ತಾರೆ– ರಾಷ್ಟ್ರೀಯ ಭದ್ರತೆಗೆ ಅಪಾಯ ತಂದಿರುವುದು ಮತ್ತು ಭ್ರಷ್ಟಾಚಾರ ಹಾಗೂ ಚಮಚಾ ಬಂಡವಾಳಶಾಹಿಯನ್ನು ಪ್ರೋತ್ಸಾಹಿಸಿರುವುದು. ಒಂದು ನಿಷ್ಪಕ್ಷಪಾತ ತನಿಖೆ ಅವರನ್ನು ಕಟಕಟೆಯಲ್ಲಿ ನಿಲ್ಲಿಸಬಲ್ಲುದು.





ವ್ಯಂಗ್ಯಚಿತ್ರ: ಸತೀಶ್ ಆಚಾರ್ಯ




ವ್ಯಂಗ್ಯಚಿತ್ರ: ಪಿ.ಮಹಮ್ಮದ್

**ಬಿಜೆಪಿ-ಎನ್‌ಡಿಎ ಸರಕಾರದ ಜನ-ವಿರೋಧಿ ಕಾರ್ಮಿಕ-ವಿರೋಧಿ ದೇಶ-ವಿರೋಧಿ ನೀತಿಗಳ ವಿರುದ್ಧ**

**ಸೆಪ್ಟೆಂಬರ್ 28 ರಂದು ನವದೆಹಲಿಯಲ್ಲಿ ಕೇಂದ್ರೀಯ ಕಾರ್ಮಿಕ ಸಂಘಟನೆಗಳು ಸಂಘಟಿಸಿದ್ದ 'ರಾಷ್ಟ್ರೀಯ ಕಾರ್ಮಿಕ ಸಮಾವೇಶ'ವು ಬಿಜೆಪಿ ಹಾಗೂ ಎನ್‌ಡಿಎ ನೇತೃತ್ವದ ಕೇಂದ್ರ ಸರಕಾರದ ಜನ-ವಿರೋಧಿ, ಕಾರ್ಮಿಕ-ವಿರೋಧಿ ಹಾಗೂ ದೇಶ ವಿರೋಧಿ ನೀತಿಗಳ ವಿರುದ್ಧ 2019 ಜನವರಿ 8 ಮತ್ತು 9 ರಂದು ಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ ನೀಡಿದೆ.**




**2019 ಜನವರಿ 8-9**


# ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರಕ್ಕೆ ಕರೆ

ನವದೆಹಲಿಯ ಮಾಲ್ವಂಕರ್ ಸಭಾಂಗಣದಲ್ಲಿ ಸೆಪ್ಟೆಂಬರ್ 28, 2018 ರಂದು ನಡೆದ ಈ ಸಮಾವೇಶದಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಾದ INTUC, AITUC, HMS, CITU, AIUTUC,TUCC, AICCTU, SEWA, LPF, UTUC ಮಾತ್ರವಲ್ಲದೆ ಕೈಗಾರಿಕಾ ಮತ್ತು ಸೇವಾ ವಲಯದ ಸ್ವತಂತ್ರ ಸಂಘಟನೆಗಳು, ಕೇಂದ್ರ ಹಾಗೂ ರಾಜ್ಯ ಸರಕಾರಿ ನೌಕರರ ಸಂಘಟನೆಗಳು, ರೈಲ್ವೆ, ರಕ್ಷಣೆ, ಆರೋಗ್ಯ, ಶಿಕ್ಷಣ, ಜಲ ಹಾಗೂ ಅಂಚೆ ನೌಕರರ ಸಂಘಗಳು ಮತ್ತು ಸಾರ್ವಜನಿಕ ವಲಯದ ಬ್ಯಾಂಕ್, ವಿಮಾ, ಟೆಲಿಕಾಂ, ಇಂಧನ, ಕಲಿದ್ದಲು ಹಾಗೂ ಸಾರ್ವಜನಿಕ ಸಾರಿಗೆ ಮತ್ತು ಕೈಗಾರಿಕಾ ವಲಯದ ಸಂಘಟನೆಗಳು, ಅಸಂಘಟಿತ ವಲಯದ ಕಟ್ಟಡ, ಬೀಡಿ, ಬೀದಿಬದಿ ವ್ಯಾಪಾರಿಗಳು, ಮನೆಕೆಲಸ, ವಲಸೆ, ಸ್ಕೀಂ ನೌಕರರು, ಗೃಹಕೃತ್ಯ ಕೆಲಸಗಾರರು, ಆಟೋ, ಟ್ಯಾಕ್ಸಿ ಚಾಲಕರು ಮತ್ತು ಕೃಷಿಕೂಲಿಕಾರರ ಸಂಘಟನೆಗಳನ್ನು ಪ್ರತಿನಿಧಿಸಿ ಸಾವಿರಾರು ಜನರು ಭಾಗವಹಿಸಿ, ಸಮಾವೇಶದ ಈ ಐತಿಹಾಸಿಕ ಕರೆಯನ್ನು ಒಕ್ಕೂರಲಿನಿಂದ ಅನುಮೋದಿಸಿದರು.

ಕೇಂದ್ರದಲ್ಲಿನ ಬಿಜೆಪಿ ನೇತೃತ್ವದ ಸರಕಾರ ಮತ್ತು ಹಲವು ರಾಜ್ಯ ಸರಕಾರಗಳು ಅನುಸರಿಸುತ್ತಿರುವ ಜನವಿರೋಧಿ, ಕಾರ್ಮಿಕ-ವಿರೋಧಿ ಹಾಗೂ ದೇಶ-ವಿರೋಧಿ ನೀತಿಗಳ ಮತ್ತು ಕಾರ್ಪೋರೇಟ್ ಪರ ನೀತಿಗಳಿಂದಾಗಿ ದೇಶದ ಕೋಟ್ಯಾಂತರ ದುಡಿಯುವ ಜನರ ದೈನಂದಿನ ಬದುಕನ್ನು ಅಸಹನೀಯವಾಗಿದೆ ಎಂಬ ಆತಂಕವನ್ನು ಈ ರಾಷ್ಟ್ರೀಯ ಸಮಾವೇಶ ವ್ಯಕ್ತಪಡಿಸಿತು.

ಕೇಂದ್ರೀಯ ಕಾರ್ಮಿಕ ಸಂಘಗಳ ಪರವಾಗಿ ಅಶೋಕ್ ಸಿಂಗ್, ರಾಮೇಂಧರ ಕುಮಾರ್, ಎಸ್. ಎನ್ ಪಾಟ್ನಾಯಕ್, ಕೆ. ಹೇಮಲತಾ, ಆರ್.ಕೆ. ಶರ್ಮ, ಪ್ರಬೀರ್ ಬ್ಯಾನರ್ಜಿ, ಲತ, ಸಂತೋಷ್‌ರಾಯ್ ಮತ್ತು ಶತ್ರುಜೀತ್ ಸಿಂಗ್ ನೇತೃತ್ವದ ಅಧ್ಯಕ್ಷೀಯ ಮಂಡಳಿ ಸಮಾವೇಶದ ಕಲಾಪಗಳನ್ನು ನಿರ್ವಹಿಸಿತು.

ಐನ್‌ಟಿಯುಸಿಯ ಅಧ್ಯಕ್ಷರಾದ ಡಾ. ಸಂಜೀವ್ ರೆಡ್ಡಿ, ಸಿಐಟಿಯು ಪ್ರಧಾನ ಕಾರ್ಯದರ್ಶಿ ತಪನ್ ಸೇನ್, ಎಐಟಿಯುಸಿಯ ಅಮರ್‌ಜೀತ್ ಕೌರ್, ಹೆಚ್‌ಎಂಎಸ್‌ನ ಹರಭಜನ್‌ಸಿಂಗ್ ಸಿಧು,







ಎಐಸಿಸಿಟಿಯುನ ಸತ್ಯವಾನ್, ಟಿಯುಸಿಸಿಯ ಶಿವಶಂಕರ್, ಸೇವಾ ಸಂಘಟನೆಯ ಮನಾಲಿಶಾ, ಎಐಸಿಸಿಟಿಯುನ ದಿಮ್ರೀ, ಎಲ್.ಪಿ.ಎಫ್‌ನ ಷಣ್ಮುಗಂ, ಹಾಗೂ ಯುಟಿಯುಸಿಯ ಅಶೋಕ್ ಘೋಷ್ ಹಾಗೂ ರೈಲ್ವೆ ಯೂನಿಯನ್‌ಗಳ ಪರವಾಗಿ ಗುಮನ್ ಸಿಂಗ್ ಹಾಗೂ ಶಿವಗೋಪಾಲ ಸಮಾವೇಶವನ್ನು ಉದ್ದೇಶಿಸಿ ಮಾತನಾಡಿದರು.

ಸಮಾವೇಶವು ದೇಶದ ದುಡಿಯುವ ವರ್ಗ ನಿರಂತರವಾಗಿ ಮಂಡಿಸುತ್ತಾ ಬಂದಿರುವ 12 ಪ್ರಮುಖ ಬೇಡಿಕೆಗಳಾದ ಕನಿಷ್ಟ ವೇತನ, ಸಾಮಾಜಿಕ ಭದ್ರತೆ, ಯೋಜನಾ ಕಾರ್ಮಿಕರಿಗೆ ಸೇವಾ ಭದ್ರತೆ, ಸಾರ್ವಜನಿಕ ಉದ್ಯಮಗಳ ಖಾಸಗೀಕರಣಕ್ಕ ತಡೆ, ಗುತ್ತಿಗೆ ಕೆಲಸ ನಿಯಂತ್ರಣ, ಐಎಲ್‌ಓ 87 ಹಾಗೂ 98 ಮತ್ತು 177(ಗೃಹ ಕೆಲಸ), 189(ಮನೆ ಕೆಲಸ) ಮೊದಲಾದ ನಿರ್ಣಯಗಳ ಅಂಗೀಕಾರಕ್ಕಾಗಿ ಆಗ್ರಹಿಸುತ್ತಿದ್ದು ಸರಕಾರಗಳು ಯಾವುದೇ ಕ್ರಮ ವಹಿಸದಿರುವ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿದೆ. ಮಾತ್ರವಲ್ಲ, ಹಾಲಿ ಇರುವ 44 ಕಾರ್ಮಿಕ ಕಾನೂನುಗಳನ್ನು ಮಾಲೀಕರ ಸ್ನೇಹಿಯಾದ 4 ಸಂಹಿತೆಗಳನ್ನಾಗಿ ಮಾರ್ಪಡು ಮಾಡಿ 'ನಿಗದಿತ ಕೆಲಸದ ಅವಧಿ' ಕೆಲಸವನ್ನು ಕ್ರಮಬದ್ಧಗೊಳಿಸಿರುವ ಬಗ್ಗೆ ಈ ಸಮಾವೇಶವು ತೀವ್ರ ಆತಂಕವನ್ನು ವ್ಯಕ್ತಪಡಿಸಿದೆ. ಅಲ್ಲದೆ ಸರಕಾರ ಜಾರಿ ಮಾಡಿರುವ ನೂತನ ಪಿಂಚಣಿ ಯೋಜನೆ ಕುರಿತು ಸಮಾವೇಶ ವಿರೋಧ ವ್ಯಕ್ತಪಡಿಸಿದೆ. ರಾಜಸ್ಥಾನದ ರೈತ ಸಮುದಾಯ ಮತ್ತು ಅಲ್ಲಿನ ಸಾರಿಗೆ ನೌಕರರು ಸೆಪ್ಟೆಂಬರ್ 16 ರಿಂದ ನಡೆಸುತ್ತಿರುವ ಹೋರಾಟವನ್ನು ಬೆಂಬಲಿಸಿ ನಿರ್ಣಯ ಕೈಗೊಂಡಿದೆ.

ಸರಕಾರದ ಆಡಳಿತವನ್ನು ಬಳಸಿ ಕೋಮು ವಿಷ ಬೀಜವನ್ನು ಭಿತ್ತಿ ಸಮಾಜವನ್ನು ವಿಘಟಿಸುತ್ತಿರುವ ಕೋಮುವಾದಿ ಶಕ್ತಿಗಳ ಚಟುವಟಿಕೆಗಳ ಕುರಿತು ಸಮಾವೇಶ ತನ್ನ ತೀವ್ರ ಆಕ್ರೋಶವನ್ನು ವ್ಯಕ್ತಪಡಿಸಿದೆ. ಮಾತ್ರವಲ್ಲ ಸರಕಾರದ ಹಿಡಿತದಲ್ಲಿರುವ UAPA, NSA, CBI, NIA, IT ಮೊದಲಾದ ಸಂಸ್ಥೆಗಳನ್ನು ಬಳಸಿ ಭಿನ್ನಾಭಿಪ್ರಾಯಗಳನ್ನು ಹತ್ತಿಕ್ಕಲಾಗುತ್ತಿದೆ. ದೇಶದ ಶಾಂತಿ ಪ್ರಿಯ, ಜಾತ್ಯಾತೀತ ಪರವಾಗಿರುವ ವ್ಯಕ್ತಿಗಳನ್ನು ಬಂಧಿಸುವ ಮೂಲಕ ಅಸುರಕ್ಷ ಹಾಗೂ ಭಯಗ್ರಸ್ಥ ವಾತವರಣವನ್ನು ನಿರ್ಮಿಸಲಾಗುತ್ತಿದೆ. ಇದರ ವಿರುದ್ದ ಕಾರ್ಮಿಕ ವರ್ಗ ತನ್ನ ಬಲಿಷ್ಟ ಪ್ರತಿರೋಧದ ಧ್ವನಿ ಎತ್ತಬೇಕೆಂದು ಸಮಾವೇಶ ಕರೆ ನೀಡಿದೆ.

ಅಂತರಾಷ್ಟ್ರೀಯ ಹಾಗೂ ರಾಷ್ಟ್ರೀಯ ಕಾರ್ಪೋರೆಟ್‌ಗಳ ಹಿತಾಸಕ್ತಿಗಳಿಗಾಗಿ ಸೇವೆ ಸಲ್ಲಿಸುತ್ತಿರುವ ಪ್ರಸಕ್ತ ಕೇಂದ್ರ ಸರಕಾರವು ಆಮೂಲಕ ಜನ-ವಿರೋಧಿ, ಕಾರ್ಮಿಕ-ವಿರೋಧಿ ಹಾಗೂ ದೇಶ-ವಿರೋಧಿ ನೀತಿಗಳನ್ನು ಜಾರಿ ಮಾಡುವ ಮೂಲಕ ದೇಶಿಯ ಉತ್ಪಾದನಾ ಸಾಮರ್ಥ್ಯ ಮತ್ತು ದೇಶದ ಆರ್ಥಿಕತೆಯ ಮೇಲೆ ಗಂಭೀರ ಪೆಟ್ಟು ನೀಡುತ್ತಿದೆ. ಇಂತಹ ನೀತಿಗಳನ್ನು ಕಾರ್ಮಿಕ ವರ್ಗ ತನ್ನ ಶಕ್ತಿಯ ಬಲ ಪ್ರಯೋಗದ ಮೂಲಕ ಜನಪರವಾಗಿ ಬದಲಾಯಿಸಬೇಕಿದೆ. ಅಂತಹ ಉನ್ನತ ಚಳುವಳಿಯನ್ನು ಬೆಳೆಸಿ ಅಂತಿಮ ಹಂತಕ್ಕೆ ಕೊಂಡೊಯ್ಯುವ ಕರ್ತವ್ಯವನ್ನು ಈ ಕಾರ್ಮಿಕ ವರ್ಗದ ಐಕ್ಯ ವೇದಿಕೆಯು ಮಾಡಬೇಕೆಂದು ಸಮಾವೇಶ ಕರೆ ನೀಡಿದೆ.

ರಾಷ್ಟ್ರೀಯ ಸಮಾವೇಶವು ಈ ಕೆಳಗಿನ ಕಾರ್ಯಕ್ರಮಗಳನ್ನು ಅಂಗೀಕರಿಸಿದೆ.

* 2018 ಅಕ್ಟೋಬರ್/ನವೆಂಬರ್‌ನೊಳಗೆ ರಾಜ್ಯ ಮಟ್ಟದ ಹಾಗೂ ಜಿಲ್ಲಾ ಮಟ್ಟದ ಮತ್ತು ಕೈಗಾರಿಕಾ/ಉಧ್ಯಮವಾರು ಜಂಟಿ ಸಮಾವೇಶಗಳನ್ನು ನಡೆಸುವುದು.
* 2018 ಡಿಸೆಂಬರ್ ಕೈಗಾರಿಕಾವಾರು ಜಂಟಿ ಗೇಟ್ ಮೀಟಿಂಗುಗಳು, ರ್‍ಯಾಲಿಗಳನ್ನು ಸಂಘಟಿಸುವುದು
* 2018 ಡಿಸೆಂಬರ್ 17-22 ಮತ ಪ್ರದರ್ಶನಗಳ ಮೂಲಕ ಮುಷ್ಕರ ನೋಟಿಸ್ ನೀಡುವುದು
* 2019 ಜನವರಿ 8 ಹಾಗೂ 9 ರಂದು ಎರಡು ದಿನಗಳ ರಾಷ್ಟ್ರವ್ಯಾಪಿ ಸಾರ್ವತ್ರಿಕ ಮುಷ್ಕರ ನಡೆಸುವುದು.

ದೇಶದ ಎಲ್ಲಾ ಕೇಂದ್ರೀಯ ಕಾರ್ಮಿಕ ಸಂಘಟನೆಗಳಿಗೆ ಸಂಯೋಜನೆಗೊಂಡಿರುವ ಮತ್ತು ಯಾವುದೇ ಸಂಘಟನೆಗಳಿಗೂ ಸಂಯೋಜನೆಗೊಳ್ಳದಿರುವ ಸ್ವತಂತ್ರವಾದ ಯೂನಿಯನ್‌ಗಳು, ಒಕ್ಕೂಟಗಳು ಮತ್ತು ಅಸೋಷಿಯೇಷನ್‌ಗಳು ತಮ್ಮೆಲ್ಲ ಬೇಧ ಭಾವಗಳನ್ನು ಬದಿಗಿಟ್ಟು ದೇಶದ ಮತ್ತು ಒಟ್ಟಾರೆ ದುಡಿಯುವ ವರ್ಗದ ಹಿತಾಸಕ್ತಿಗಾಗಿ ಕಾರ್ಮಿಕ ವರ್ಗ ಒಂದಾಗಿ ನಡೆಯುವ ಮೇಲ್ಕಂಡ ಕಾರ್ಯಕ್ರಮಗಳನ್ನು ಯಶಸ್ವಿಗೊಳಿಸಲು ಮುಂದಾಗಬೇಕೆಂದು ಈ ರಾಷ್ಟ್ರೀಯ ಸಮಾವೇಶ ಕರೆ ನೀಡಿದೆ. ●



# ಕೊನೆಗೂ ಬಂತು ಆಧಾರ್ ತೀರ್ಪು

ಬಹಳ ತಿಂಗಳುಗಳಿಂದ ನಿರೀಕ್ಷಿಸಿದ್ದ ಆಧಾರ್ ತೀರ್ಪು ಕೊನೆಗೂ ಬಂದಿದೆ. ಅದಕ್ಕೆ ದೇಶದ ಸರ್ವೋಚ್ಚ ನ್ಯಾಯಾಲಯದ ಅಂಗೀಕಾರ ಮುದ್ರೆ ಸಿಕ್ಕಿದೆ. ಐವರು ನ್ಯಾಯಾಧೀಶರ ಪೀಠದಲ್ಲಿ ಮುಖ್ಯನ್ಯಾಯಾಧೀಶರೂ ಸೇರಿದಂತೆ ನಾಲ್ಕು ನ್ಯಾಯಾಧೀಶರು ಆಧಾರ್ ಕಾಯ್ದೆ ಸಂವಿಧಾನಬದ್ದ ಎಂದು ತೀರ್ಪಿತ್ತಿದ್ದಾರೆ. ಒಬ್ಬರು ಮಾತ್ರ ಅದು ಅಸಂವೈಧಾನಿಕ ಮಾತ್ರವಲ್ಲ, ಸಂವಿಧಾನಕ್ಕೆ ಮಾಡಿರುವ ಮೋಸ ಎಂದೂ ತೀರ್ಪಿತ್ತಿದ್ದಾರೆ.

ಆಧಾರ್ ನ್ನು ಎತ್ತಿ ಹಿಡಿದ ತೀರ್ಪು ಕೂಡ ಈ ಕಾಯ್ದೆಯ ಕೆಲವು ಮುಖ್ಯ ಅಂಶಗಳನ್ನು ರದ್ದು ಮಾಡಿದೆ,

12 ಅಂಕಿಗಳ ವಿಶಿಷ್ಟ ಗುರುತು ಸಂಖ್ಯೆ ಸರಕಾರದ ಎಲ್ಲ ಕಲ್ಯಾಣ ಯೋಜನೆಗಳ ಸೌಕರ್ಯಗಳನ್ನು ಪಡೆಯಲು ಕಡ್ಡಾಯ ಎಂಬುದನ್ನು ತೀರ್ಪು ಎತ್ತಿ ಹಿಡಿದಿದೆ.

ಸುಪ್ರಿಂ ಕೋರ್ಟ್ ಸಾಮಾಜಿಕ ಸೌಲಭ್ಯಗಳಿಗೆ ಮಾತ್ರ ಇದನ್ನು ಬಳಸಬೇಕು ಎಂದು ಹೇಳಿದ್ದರೂ ಸರಕಾರ ಹಲವು ಇತರ ಸೇವೆಗಳಿಗೂ ಒಂದಾದ ಮೇಲೊಂದರಂತೆ ವಿಸ್ತರಿಸುತ್ತಲೇ ಹೋಯಿತು. ಬ್ಯಾಂಕ್ ಖಾತೆಗಳನ್ನು ತೆರೆಯಲು, ಮೊಬೈಲ್ ಸೇವೆಗಳನ್ನು ಪಡೆಯಲು, ಪಾಸ್‌ಪೋರ್ಟ್ ಪಡೆಯಲು, ಡ್ರೈವಿಂಗ್ ಲೈಸೆನ್ಸ್ ಪಡೆಯಲು, ಅಷ್ಟೇ ಏಕೆ ಶಾಲೆ–ಕಾಲೇಜುಗಳಲ್ಲಿ ಪ್ರವೇಶ ಪಡೆಯಲು ಸ್ಪರ್ಧಾ ಪರೀಕ್ಷೆಗಳಲ್ಲಿ ಕೂರಲು ಇತ್ಯಾದಿ ಸುಮಾರಾಗಿ ಎಲ್ಲದಕ್ಕೂ ಇದನ್ನು ಕಡ್ಡಾಯ ಮಾಡುವ ಅಧಿಸೂಚನೆಗಳು ಸರಕಾರದಿಂದ ಸಾಲುಸಾಲಾಗಿ ಬಂದವು. ಇವೆಲ್ಲವೂ ಅಸಂವೈಧಾನಿಕ ಎಂದು ಈಗ ಈ ಬಹುಮತದ ತೀರ್ಪು ಕೂಡ ಹೇಳಿದೆ.

ಇದಲ್ಲದೆ, ಇನ್ನೂ ಮುಖ್ಯವಾಗಿ ಈ ಕಾಯ್ದೆಯ ಸೆಕ್ಷನ್ 57ನ್ನು ಈ ತೀರ್ಪು ಅಸಿಂಧುಗೊಳಿಸಿದೆ. ಇದು ಖಾಸಗಿಯವರೂ ಗುರುತಿನ ಸಾಕ್ಷಿಯಾಗಿ ಆಧಾರ್‌ನ್ನು ಕಡ್ಡಾಯವಾಗಿ ಕೇಳಲು ಅವಕಾಶ ಮಾಡಿಕೊಟ್ಟಿತ್ತು. ಇನ್ನು ಮುಂದೆ ಖಾಸಗಿಯವರು ಗುರುತಿನ ದಾಖಲೆಯಾಗಿ ಆಧಾರ್ ನಂಬರ್ ಕೊಡಿ ಎಂದು ಒತ್ತಾಯಿಸುವಂತಿಲ್ಲ.

ಸೆಕ್ಷನ್ 47ನ್ನು ಕೂಡ ಅಸಿಂಧುಗೊಳಿಸಲಾಗಿದೆ. ಇದು ಆಧಾರ್ ಬಗ್ಗೆ ಕೇವಲ ವಿಶಿಷ್ಟ ಗುರುತು ಪ್ರಾಧಿಕಾರ ಮಾತ್ರವೇ ಮಾಹಿತಿ ಉಲ್ಲಂಘನೆಯ ಕ್ರಿಮಿನಲ್ ದೂರುಗಳನ್ನು ಕೊಡಬಹುದು ಎಂದು ವಿಧಿಸಿತ್ತು. ವ್ಯಕ್ತಿಗಳು ದೂರು ಸಲ್ಲಿಸುವಂತಿರಲಿಲ್ಲ. ಬಹುಮತದ ತೀರ್ಪು ಇದನ್ನು ಈಗ ಬದಲಿಸಿದೆ.

ಈ ಕಾಯ್ದೆಯ ಬಗ್ಗೆ ಇದ್ದ ಒಂದು ಪ್ರಮುಖ ಆಕ್ಷೇಪ ಎಂದರೆ ಇಂತಹ ಬಹಳ ವ್ಯಾಪಕ ಪರಿಣಾಮದ ಕಾಯ್ದೆಯನ್ನು ಹಣ ಮಸೂದೆಯಾಗಿ ಮಂಡಿಸಿದ್ದರಿಂದ ಸಂಸತ್ತಿನ ಮೇಲ್ಮನೆಯ, ಅಂದರೆ ರಾಜ್ಯಸಭೆಯ ಅಂಗೀಕಾರ ಇದಕ್ಕೆ ಅಗತ್ಯವಿಲ್ಲದಂತೆ ಮಾಡಲಾಯಿತು. ಇದು ಪ್ರಜಾಪ್ರಭುತ್ವಕ್ಕೆ ಅನುಗುಣವಾದ ಕ್ರಮ ಅಲ್ಲ ಎಂಬ ಬಲವಾದ ಆಕ್ಷೇಪ ಬಂದಿತ್ತು. ಆದರೆ ಸುಪ್ರಿಂ ಕೋರ್ಟ್ ಬಹುಮತದ ತೀರ್ಪು ಈ ಆಕ್ಷೇಪವನ್ನು ತಳ್ಳಿ ಹಾಕಿದೆ.

ರಾಜ್ಯಸಭೆ ಈಗ ಸುಪ್ರಿಂ ಕೋರ್ಟ್ ರದ್ದು ಮಾಡಿರುವ ಸೆಕ್ಷನ್ 57ನ್ನು ರದ್ದು ಮಾಡಬೇಕೆಂದು ಆಗ ಶಿಫಾರಸು ಮಾಡಿತ್ತು, ಅದನ್ನು ಲೋಕಸಭೆ ಪರಿಗಣನೆಗೆ ತಗೊಳ್ಳಲಿಲ್ಲ ಎಂಬುದನ್ನು ಇಲ್ಲಿ ನೆನಪಿಸಿಕೊಳ್ಳಬಹುದು.

ಸರಕಾರ ಇದನ್ನು ಹಣದ ಮಸೂದೆಯಾಗಿ ಮಂಡಿಸಲು ಕಾರಣ, ರಾಜ್ಯಸಭೆಯಲ್ಲಿ ಇದನ್ನು ತನಗೆ ಬೇಕಾದಂತೆ ಪಾಸು ಮಾಡಿಸಿಕೊಳ್ಳುವ ಭರವಸೆ ಅದಕ್ಕೆ ಇರಲಿಲ್ಲ.

ಸುಪ್ರಿಂ ಕೋರ್ಟ್ ಸರಕಾರದ ಈ ಕ್ರಮವನ್ನು ಎತ್ತಿ ಹಿಡಿದಿರುವುದರಿಂದ ಇನ್ನು ಮುಂದೆ ಸರಕಾರಗಳು ಅದರ ದುರುಪಯೋಗ ಮಾಡಿಕೊಳ್ಳುವ ಸಂಭವ ಹೆಚ್ಚಿದೆ ಎಂದು ಕೆಲವು ಪರಿಣಿತರು ಆತಂಕ ವ್ಯಕ್ತಪಡಿಸಿದ್ದಾರೆ.






ವ್ಯಂಗ್ಯಚಿತ್ರ: ಗೋಕುಲ್, ಡೆಕ್ಕನ್ ಕ್ರಾನಿಕಲ್




## "ಬಡವರಿಗೆ ಪರಿಹಾರ ನೀಡದ ಬಹುಮತದ ತೀರ್ಪು"

ಆಧಾರ್ ಸಮಾಜದಲ್ಲಿ ಅಂಚಿಗೆ ತಳ್ಳಲ್ಪಟ್ಟವರಿಗೆ ಘನತೆಯನ್ನು ತಂದು ಕೊಟ್ಟಿದೆ, ಇದು ಎಲ್ಲರನ್ನೂ ಒಳಗೊಳ್ಳುವ ಕ್ರಮ ಎಂಬ ಸರಕಾರದ ವಾದವನ್ನು ಬಹುಮತದ ತೀರ್ಪು ಒಪ್ಪಿಕೊಂಡಿದೆ. ಆದರೆ ಅರ್ಜಿದಾರರ ಆಕ್ಷೇಪವಿದ್ದುದೇ ಸರಕಾರದ ವಾದ ನಿಜವಲ್ಲ ಎಂಬುದು ಆಗಲೇ ವಾಸ್ತವವಾಗಿ ಸಾಬೀತಾಗುತ್ತಿದೆ ಎಂದು.

ಈ ದೃಷ್ಟಿಯಿಂದ ಇದು ಅತ್ಯಂತ ನಿರಾಶಾದಾಯಕ ತೀರ್ಪು ಎಂದು ಅರ್ಜಿದಾರರಲ್ಲಿ ಹೆಚ್ಚಿನವರು ಬೇಸರ ವ್ಯಕ್ತಪಡಿಸಿದ್ದಾರೆ.

ಬಹುಮತದ ತೀರ್ಪಿನಲ್ಲಿ ಸ್ವಲ್ಪಮಟ್ಟಿಗೆ ಇದರಲ್ಲಿ ಕೊರತೆಯಿರಬಹುದು, ಅದಕ್ಕಾಗಿ ಇಡೀ ಯೋಜನೆಯನ್ನು ದೂಷಿಸುವುದು ಸರಿಯಲ್ಲ ಎಂದು ಹೇಳಲಾಗಿದೆ. ಆದರೆ ಈ ಕೊರತೆಯಿರುವುದು ಸ್ವಲ್ಪ ಮಟ್ಟಿಗೆ ಅಲ್ಲ., ಗಮನಾರ್ಹ ಪ್ರಮಾಣದಲ್ಲಿ ಎನ್ನುತ್ತಾರೆ ಅರ್ಜಿದಾರು ಸುಮರು 2.7% ದಷ್ಟು ಆಧಾರ್‌ಗಳಲ್ಲಿ ಸಮಸ್ಯೆ ಕಂಡು ಬಂದಿದೆ ಎಂಬುದು ಸರಿಯಲ್ಲ, ನಿಜವಾಗಿ ಸಮಸ್ಯೆ ಅದರ ಹತ್ತು ಪಟ್ಟಿನಷ್ಟಿದೆ ಎನ್ನುತ್ತಾರೆ ಅವರು. ಉದಾಹರಣೆಗೆ ರಾಜಸ್ಥಾನ ಸರಕಾರದ ವೆಬ್‌ಸೈಟ್ ಪ್ರಕಾರವೇ ಕಳೆದ ವರ್ಷ ಆಧಾರ್ ಕಾರ್ಡ್‌ಗಳಿದ್ದ, ರೇಶನ್ ಫಲಾನುಭವಿಗಳಾಗಿದ್ದವರಲ್ಲೇ ಸುಮಾರು 25% ಮಂದಿಗೆ ರೇಶನ್ ಪಡೆಯುವುದು ಸಾಧ್ಯವಾಗಿಲ್ಲ. ಕಾರಣ ಅವರ ಆಧಾರ್ ಸಂಖ್ಯೆಗಳು ಪ್ರಮಾಣಿತಗೊಳ್ಳಲಿಲ್ಲ.

ಇದಕ್ಕೆ ಕಾರಣ ಆ ಫಲಾನುಭವಿಗಳು ಖಂಡಿತಾ ಅಲ್ಲ. ಈ ಯೋಜನೆಯ ಜಾರಿ ಸರಿಯಾಗಿಲ್ಲ ಎಂಬುದೂ ಅಲ್ಲ. ವಾಸ್ತವವಾಗಿ ಇದು ಕಾರ್ಯಸಾಧ್ಯವಲ್ಲದ ಯೋಜನೆ ಏಕೆಂದರೆ ಬಹಳಷ್ಟು ಕಡೆ, ವಿಶೇಷವಾಗಿ ಗ್ರಾಮಾಂತರಗಳಲ್ಲಿ ದೂರಸಂಪರ್ಕಗಳು ಸಿಗುವುದೇ ಕಷ್ಟ. ಸಂಪರ್ಕ ಸಿಗದಿದ್ದರೆ ಅಲ್ಲಿಯ ಕುಟುಂಬಗಳಿಗೆ ರೇಶನ್ ಇಲ್ಲ, ಅವರು ಹಸಿವಿನಿಂದ ಸಾಯಬೇಕು. ಹಾಗೆ ಮಾಡಿರುವ ಯೋಜನೆ ಇದು ಎಂದು ಕೆಲವು ಆಹಾರ ಹಕ್ಕಿನ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಪ್ರಧಾನ ಮಂತ್ರಿಗಳೂ ಸೇರಿದಂತೆ ಸರಕಾರೀ ಮುಖಂಡರು ಆಧಾರ್‌ನಿಂದ ಭ್ರಷ್ಟಾಚಾರ ಕಡಿಮೆಯಾಗಿದೆ, ಸರಕಾರಕ್ಕೆ ಎಷ್ಟೋ ಸಾವಿರ ಕೋಟಿ ರೂ.ಗಳ ಉಳಿತಾಯವಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಇದಕ್ಕೆ ನಂಬಬಹುದಾದ ಆಧಾರಗಳೇನೂ ಅಲ್ಲ. ಒಂದು ವೇಳೆ ಅಷ್ಟು ಹಣ ಉಳಿತಾಯವಾಗಿದೆ ಎಂದೇ ಇಟ್ಟುಕೊಂಡರೂ, ಸರಕಾರಕ್ಕೆ ಇಷ್ಟೊಂದು ಹಣದ ವಂಚನೆ ಮಾಡುತ್ತಿದ್ದವರು ಯಾರು ಎಂದು ಗುರುತಿಸಿ ಅವರ ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ಎಂದು ಈ ಕಾರ್ಯಕರ್ತರು ಪ್ರಶ್ನಿಸುತ್ತಾರೆ.

ಮನರೇಗದಲ್ಲಿ ಕೆಲಸ ಮಾಡಿದವರ 100 ಕೋಟಿ ರೂ.ಗಳಷ್ಟು ಹಣ ಸಂದಾಯವಾಗಿಲ್ಲ, ಕಾರಣ ಮತ್ತೆ ಅದೇ, ಅವರ ಆಧಾರ್ ನಂಬರ್‌ಗಳು ಪ್ರಮಾಣಿತವಾಗಲಿಲ್ಲ. ಇದನ್ನು ಉಳಿತಾಯ ಎನ್ನಬೇಕೋ, ಅಥವ ನಿರಾಕರಣೆ ಎನ್ನಬೇಕೋ ಎಂದು ಪ್ರಶ್ನಿಸುತ್ತಾರೆ ಕಾರ್ಯಕರ್ತರು.

ಹಂಚಬೇಕಾದ ಹಣವನ್ನು ಫಲಾನುಭವಿಗಳನ್ನು ಗುರುತಿಸಲಾಗದಿರುವುದರಿಂದ ಹಂಚಿರದಿದ್ದರೆ ಅದು ಉಳಿತಾಯ ಹೇಗಾಗುತ್ತದೆ? ಹಾಗೆ ಹೇಳುವುದು ಗಾಯದ ಮೇಲೆ ಎಳೆಯುವ ಬರೆಯಾಗುತ್ತದೆ. ಅಷ್ಟೊಂದು ಫಲಾನುಭವಿಗಳನ್ನು ಗುರುತಿಸಲಾಗದಿದ್ದರೆ, ಏಕೆ ಹಾಗಾಗಿದೆ ಎಂದು ತಪಾಸಣೆ ಮಾಡುವುದು ಸರಕಾರದ ಕರ್ತವ್ಯವಲ್ಲವೇ ಎಂದು ಇವರು ಪ್ರಶ್ನಿಸುತ್ತಾರೆ.

ಆದರೆ ಸರಕಾರ ತಪಾಸಣೆ ಮಾಡಲು ಹೋಗುವುದಿಲ್ಲ. ಏಕೆಂದರೆ ಸಬ್ಸಿಡಿಗಳನ್ನು ಕಡಿತ ಮಾಡುವುಧೆ ಈ ಆಧಾರ್ ಯೋಜನೆಯ ಮೂಲ ಉದ್ದೇಶ. ಸುಪ್ರಿಂ ಕೋರ್ಟ್ ತೀರ್ಪು ಭಾವಿಸಿದಂತೆ ಇದು ಎಲ್ಲರನ್ನೂ ಒಳಗೊಳ್ಳುವ ಯೋಜನೆ ಅಲ್ಲವೇ ಅಲ್ಲ, ಏಕೆಂದರೆ ಸಾಧ್ಯವಾದಷ್ಟು ಮಂದಿಯನ್ನು ಹೊರಗೆ ತಳ್ಳುವುದು ಇದರ ರಚನೆಯಲ್ಲೇ ಅಂತರ್ಗತವಾಗಿದೆ ಎನ್ನುತ್ತಾರೆ ಆಹಾರ ಹಕ್ಕು ಆಂದೋಲನದ ಆರ್ಥಿಕ ತಜ್ಞೆ ರೀತಿಕಾ ಖೇರಾ.




ವ್ಯಂಗ್ಯಚಿತ್ರ: ಸಂದೀಪ್ ಅಧ್ವರ್ಯು, ಟೈಂಸ್ ಆಫ್ ಇಂಡಿಯ

ಬಹುಮತದ ತೀರ್ಪು ಆಧಾರ್ ಕಾಯ್ದೆಯ ಸೆಕ್ಷನ್ 7ರ ಅಡಿಯಲ್ಲಿ ಬಡಜನಗಳು ತಮ್ಮ ಹಕ್ಕಿನ ಸೌಕರ್ಯಗಳನ್ನು ಪಡೆಯಲು ಅಡ್ಡಿಯಾಗುವ ಅಂಶಗಳಲ್ಲಿ ಯಾವುದೇ ಪರಿಹಾರ ಕೊಡದಿರುವುದು ಅತ್ಯಂತ ನಿರಾಶೆಯ ಸಂಗತಿ ಎಂದು ರೀತಿಕಾ ಬೇಸರ ವ್ಯಕ್ತಪಡಿಸುತ್ತಾರೆ. ಬಹುಮತದ ತೀರ್ಪಿಗೆ ಸಹಿ ಹಾಕಿದ ನ್ಯಾಯಾಧೀಶರುಗಳು ಯಾರಿಗೂ ಸೌಕರ್ಯಗಳನ್ನು ನಿರಾಕರಿಸುವುದಿಲ್ಲ ಎಂಬ ಸರಕಾರದ ಆಶ್ವಾಸನೆಯನ್ನು ನಂಬಿರುವುದು ನಿಜಕ್ಕೂ ನಿರಾಶಾದಾಯಕ ಸಂಗತಿ ಎನ್ನುತ್ತಾರೆ.

ವಿವಿಧ ಸ್ಕೀಮುಗಳ ಅಡಿಯಲ್ಲಿ ಸರಕಾರ

ಪುಟ 10ಕ್ಕೆ

## 20 ತಿಂಗಳಲ್ಲಿ ಹಸಿವಿನಿಂದ 42 ಸಾವುಗಳು: 25 ಆಧಾರ್–ಸಂಬಂಧಿತ



ಝಾರ್ಖಂಡ್‌ನ 11 ವರ್ಷದ ಬಾಲಕಿ ಸಂತೋಷಿ ಕುಮಾರಿ 'ಅನ್ನ, ಅನ್ನ' ಎಂದು ಅಂಗಲಾಚುತ್ತ ಪ್ರಜ್ಞಾ ಹೀನಳಾಗಿ ಕೊನೆಗೆ ಪ್ರಾಣ ಬಿಟ್ಟು ಈ ಸಪ್ಟಂಬರ್ 28ಕ್ಕೆ ಒಂದು ವರ್ಷವಗಿದೆ. ಆಕೆಯ ಕುಟಂಬದ ರೇಶನ್ ಕಾರ್ಡ್ ಕಳೆದು ಹೋಗಿತ್ತಂತೆ.ಅದನನು ಆಧಾರ್‌ಗೆ ಜೋಡಿಸಿರದ್ದರಿಂದ ಆ ಕುಟುಂಬಕ್ಕೆ ರೇಶನ್ ಪಡೆಯಲಾಗಿರಲಿಲ್ಲ. ಝಾರ್ಖಂಡ್ ಸರಕಾರ ಆ ವರ್ಷ ಆಧಾರ್ ಇಲ್ಲದ ಪಡಿತರ ಚೀಟಿಗಳನ್ನು ಸಆಮೂಹಿಕವಾಗಿ ರದ್ದು ಮಾಡಿತು.

ಸಂತೋಷಿಯ ಸಾವಿನ ಮೊದಲ ವಾರ್ಷಿಕದ ಸಂದರ್ಭದಲ್ಲಿ ದಲಿತರು, ಆದಿವಾಸಿಗಳ ನಡುವೆ ಕೆಲಸ ಮಾಡುತ್ತಿರುವ ಕೆಲವು ಕಾರ್ಯಕರ್ತರು ಮಾಧ್ಯಮಗಳಲ್ಲಿ ಬಂದಿರುವ ವರದಿಗಳ ಆಧಾರದಲ್ಲಿ ಸಂತೋಪಿಯಂತೆ ಹಸಿವಿನಿಮದ ಸಾವು ಸಂಭವಿಸಿದ ಪ್ರಕರಣಗಳ ಪಟ್ಟಿ ತಯಾರಿಸಿದ್ದಾರೆ. ಇದರ ಪ್ರಕಾರ 2017 ಮತ್ತು 2018ರಲ್ಲಿ ಇದುವರೆಗೆ ಇಂತಹ 42 ಸಾವುಗಳು ಅವರ ಗಮನಕ್ಕೆ ಬಂದಿವೆ. 2017ರಲ್ಲಿ 14, 2018ರಲ್ಲಿ ಇದುವರೆಗೆ 28. 2017ರಲ್ಲಿ ಗಮನಕ್ಕೆ ಬಂದ ಹಸಿವಿನಿಂದ ಸಂಭವಿಸಿದ 14 ಸಾವುಗಳಲ್ಲಿ 11 ಆಧಾರ್–ಸಂಬಂಧಿತ ಸಾವುಗಳು 2018ರಲ್ಲಿ ಸಂಭವಿಸಿರುವ 28ರಲ್ಲಿ 14 ಆಧಾರ್ –ಸಂಬಂಧಿತ ಸಾವುಗಳು. ಅಂದರೆ 42ರಲ್ಲಿ 25 ಆಧಾರ್–ಸಂಬಂಧಿತ ಸಾವುಗಳು. ಅವುಗಳಲ್ಲಿ 1ಕೆಲವು ಆಧಾರ್ ನಂಬರ್ ಇದ್ದರೂ ಅದು ಪ್ರಮಾಣಿತವಾಗದ್ದರಿಂದ 'ರೇಶನ್ ನಿರಾಕರಿಸಲ್ಪಟ್ಟ ಪ್ರಕರಣಗಳು.

ಸಿಪಿಐ(ಎಂ) ಪೊಲಿಟ್‌ಬ್ಯರೊ ಹೇಳಿರುವಂತೆ ಕೋಟ್ಯಂತರ ಬಡಜನರ ಅಸ್ತಿತ್ವವೇ ಕಲ್ಯಾಣ ಯೋಜನೆಗಳ ಲಭ್ಯತೆಯ ಮೇಲೆ ಅವಲಂಬಿಸಿರುವ ಈ ದೇಶದಲ್ಲಿ ಆಧಾರ್ ಕಡ್ಡಾಯ ಆ ಯೋಜನೆಗಳ ಸೌಕರ್ಯಗಳನ್ನು ನಿರಾಕರಿಸಿ ಅವರ ಬದುಕುಗಳನ್ನು ಅಪಾಯಕ್ಕೀಡು ಮಾಡುತ್ತದೆ. ದುರದೃಷ್ಟವಶಾತ್ ಸುಪ್ರಿಂ ಕೋರ್ಟಿನ ಬಹುಮತದ ತೀರ್ಪು ಆಧಾರ್‌ಅನ್ನು ಕಡ್ಡಾಯವಾಗಿ ಉಳಿಸಿದೆ.

ಇಂತಹ ಸಾವು–ಬದುಕಿನ ಪ್ರಶ್ನೆಯಲ್ಲಿ, ಅಲ್ಪಮತದ ತೀರ್ಪು ಹೇಳಿರುವಂತೆ, ಆಧಾರ್‌ಅನ್ನು ಏಕಮಾತ್ರ ಗುರುತಿನ ಸಾಧನವಾಗಿ ಮಾಡುವುದು ಅನಿವಾರ್ಯವೇ?

# ಆಶಾಕಿರಣವಾಗಿರುವ ಅಲ್ಪಮತದ ತೀರ್ಪು




ಐವರು ನ್ಯಾಯಾಧೀಶರ ಪೀಠದಲ್ಲಿ ಭಿನ್ನಮತವನ್ನು ದಾಖಲಿಸಿದ ನ್ಯಾಯಮೂರ್ತಿ ಚಂದ್ರಚೂಡ್‌ರವರ ಅಲ್ಪಮತದ ತೀರ್ಪು ಬಹಳಷ್ಟು ಗಮನ ಸೆಳೆದಿದೆ. ಸಪ್ಟೆಂಬರ್ 26ರಂದು ಕೊಟ್ಟ ಬಹುಮತದ ತೀರ್ಪಿನೊಂದಿಗೆ ಆಧಾರ್ ಮೇಲಿನ ಚರ್ಚೆ ನಿಲ್ಲುವುದಿಲ್ಲ. ಏಕೆಂದರೆ ಬಹುಮತದ ತೀರ್ಪು ಬಹಳಷ್ಟು ಪ್ರಶ್ನೆಗಳಿಗೆ ಉತ್ತರ ನೀಡಿಲ್ಲ, ಹಲವನ್ನು 'ಸದುದ್ದೇಶ'ದಿಂದ ಬದಿಗೆ ತಳ್ಳಿರುವಂತೆ ಕಾಣುತ್ತದೆ. ಇಂತಹ ಸನ್ನಿವೇಶದಲ್ಲಿ ಅಲ್ಪಮತದ ತೀರ್ಪು ಮುಂದಿನ ದಾರಿ ತೋರಿಸುತ್ತದೆ ಎಂಬುದು ಈಗ ಹಲವು ಪ್ರಜಾಪ್ರಭುತ್ವವಾದಿಗಳ ಆಶಯ. ಬಹುಮತದ ತೀರ್ಪಿನಿಂದ ನಿರಾಶರಾದವರು ಅಲ್ಪಮತದ ತೀರ್ಪನ್ನು ಸ್ವಾಗತಿಸಿದ್ದಾರೆ ಎಂಬುದ ಗಮನಿಸಬೇಕಾದ ಸಂಗತಿ.

ಬಡಜನಗಳಿಗೆ ಘನತೆ ನೀಡುವ ಉದ್ದೇಶ ಸಾಧನೆಗೆ ಪ್ರಭುತ್ವ ಇಷ್ಟೊಂದು ಕಠಿಣವಲ್ಲದ ಕ್ರಮಗಳನ್ನು ರೂಪಿಸಬಹುದಿತ್ತು, ಆಧಾರ್ ಅನ್ನು ಏಕಮಾತ್ರ ಗುರುತಿನ ಸಾಧನವಾಗಿ ಮಾಡಬೇಕಿರಲಿಲ್ಲ, 2009 ರಿಂದಲೇ, 2016ರಲ್ಲಿ ಆಧಾರ್ ಕಾಯ್ದೆ ಬರುವ ಮೊದಲಿರದಲೇ ಈ ಸಮಸ್ತ ಪ್ರಕ್ರಿಯೆ ಕೋಟ್ಯಂತರ ನಾಗರಿಕರ ಭೌತಿಕ ಮಾಹಿತಿಗಳನ್ನು ಅಪಾಯಕ್ಕೆ ತೆರೆದಿಟ್ಟದೆ ಎಂದು ಈ ಅಲ್ಪಮತದ ತೀರ್ಪು ಅಭಿಪ್ರಾಯ ಪಟ್ಟಿದೆ.

ಆಧಾರ್ ಮಸೂದೆಯನ್ನು ಹಣ ಮಸೂದೆಯಾಗಿ ಮಂಡಿಸಿರುವುದು ಅಸಂವೈಧಾನಿಕ. ರಾಜ್ಯ ಸಭೆಯನ್ನು 'ಬದಿಗಿಟ್ಟು ಅದನ್ನು ಪಾಸು ಮಾಡಿಸಿರುವುದು ಸಂವಿಧಾನಕ್ಕೆ ಮಾಡಿರುವ ಮೋಸ ಎಂದಿರುವ ಈ ತೀರ್ಪು, ಹಾಗೆ ಮಾಡುವುದು ಕೇಂದ್ರದಲ್ಲಿನ ಆಳುವ ಪಕ್ಷಕ್ಕೆ ರಾಜಕೀಯವಾಗಿ ಅನುಕೂಲಕರವಾಗಿರಬಹುದು, ಆದರೆ ಅದು ಒಂದು ಕಪಟತಂತ್ರವಾಗುತ್ತದೆ, ಸಂವಿಧಾನಿಕ ಸಂಸ್ಥೆಗಳನ್ನು ಕೀಳುಮಟ್ಟಕ್ಕೆ ಇಳಿಸುತ್ತದೆ ಎಂದು ಖಾರವಾಗಿ ಟಿಪ್ಪಣಿ ಮಾಡಿದೆ.

ಅಷ್ಟೇ ಖಾರವಾಗಿ, ಬ್ಯಾಂಕ್ ಖಾತೆ ಆಧಾರಿತ ಸೇವೆಗಳಿಗೆ ಆಧಾರ್ ಕೇಳುವುದು ಎಂದರೆ ಬ್ಯಾಂಕಿನಲ್ಲಿ ಖಾತೆ ತೆರೆ'ಯುವ ಪ್ರತಿಯೊಬ್ಬರೂ ಕಪ್ಪು ಹಣವನ್ನು ಬಿಳಿ ಮಾಡುವವರು ಎಂದು ಭಾವಿಸಿದಂತಾಗುತ್ತದೆ ಎಂದೂ ಈ ತೀರ್ಪು ಟಿಪ್ಪಣಿ ಮಾಡಿದೆ.

ಮೊಬೈಲ್‌ಸೇವೆ ಒದಗಿಸುವವರು ಈಗಾಗಲೇ ಆಧಾರ್‌ಗೆ ತಳುಕು ಹಾಕಿರುವುದರಿಂದ ಪಡೆದಿರುವ ಎಲ್ಲ ಮಾಹಿತಿಗಳನ್ನು ಅಳಿಸಿ ಹಾಕಬೇಕು ಎಂದು ಈ ತೀರ್ಪು ಆದೇಶಿಸಿದೆ.


## ಅಂಗವಿಕಲರ ಆತಂಕಗಳನ್ನು ಗಮನಕ್ಕೆ ತಗೊಂಡಿಲ್ಲ– ಎನ್‌ಪಿಆರ್‌ಡಿ ನಿರಾಸೆ

ರಾಷ್ಟ್ರೀಯ ಅಂಗವಿಕಲರ ಹಕ್ಕುಗಳ ವೇದಿಕೆ(ಎನ್‌ಪಿಆರ್‌ಡಿ) ಆಧಾರ್ ತೀರ್ಪಿನ ಬಗ್ಗೆ ತೀವ್ರ ನಿರಾಸೆ ವ್ಯಕ್ತಪಡಿಸಿದೆ.

ನ್ಯಾಯಮೂರ್ತಿ ಸಿಕ್ರಿ ಓದಿ ಹೇಳಿರುವ ಬಹುಮತದ ತೀರ್ಪು ವಿಭಿನ್ನ ಸರಕಾರೀ ಸ್ಕೀಮುಗಳಲ್ಲಿ ಸೌಕರ್ಯಗಳನ್ನು, ಪರಿಹಾರಗಳನ್ನು ಪಡೆಯಲು ಆಧಾರ್ ಅನಿವಾರ್ಯ ಎಂದು ಹೇಳಿದೆ. ಇದರ ಅರ್ಥ ಸಾವಿರಾರು ಅಂಗವಿಕಲರು ಪೆನ್ಶನ್‌ಗಳು ಮತ್ತು ಇತರ ಸಾಮಾಜಿಕ ಭದ್ರತಾ ಸ್ಕೀಮುಗಳಿಂದ ವಂಚಿತರಾಗಿಯೇ ಉಳಿಯಬೇಕಾಗುತ್ತದೆ.

ಅಂಗವಿಕಲರಿಗೆ ಈ ಯೋಜನೆಯಲ್ಲಿ ದಾಖಲಾಗುವುದೇ ಬಹುದೊಡ್ಡ ಸಮಸ್ಯೆ. ಬಯೊಮೆಟ್ರಿಕ್ ಒಂದು ಪ್ರಮುಖ ತೊಡಕು. ಆಧಾರ್ ಚೌಕಟ್ಟಿನಲ್ಲಿ ಅಂಗವಿಕಲರಿಂದ ಬೆರಳುಗುರುತುಗಳು ಅಥವ ಕಣ್ಣು ರೆಪ್ಪೆ ಯಾವುದಾರೂ ಒಂದೇ ಬಯೊಮೆಟ್ರಿಕ್‌ಅನ್ನು ಪಡೆಯಲು ಅವಕಾಶವಿದ್ದರೂ, ಹೆಚ್ಚಿನ ಆಧಾರ್ ಕೇಂದ್ರಗಳಲ್ಲಿ ಸಿಬ್ಬಂದಿಗೆ ಇದರ ಅರಿವೇ ಇರುವುದಿಲ್ಲ, ಅಥವ ಅವರಿಗೆ ಸರಿಯದ ತರಬೇತಿ ನೀಡಿರುವುದಿಲ್ಲ. ಹಲವಾರು ಸಂದರ್ಭಗಳಲ್ಲಿ ಅರ್ಜಿ ಸ್ವೀಕೃತಿಯಾಗುತ್ತದೆ, ಆದರೆ ಅದು ಪ್ರಮಾಣಿತಗೊಳ್ಳದೆ ಸರ್ವರ್ ಮಟ್ಟದಲ್ಲೆ ತಿರಸ್ಕೃತಗೊಳ್ಳುತ್ತದೆ.

ದುರದೃಷ್ಟವಶಾತ್ ಬಹುಮತದ ತೀರ್ಪು ಈ ಆತಂಕಗಳನ್ನು ಗಮನಕ್ಕೆ ತಗೊಂಡಿಲ್ಲ ಎಂದು ಎನ್‌ಪಿಆರ್‌ಡಿ ಖೇದ ವ್ಯಕ್ತಪಡಿಸಿದೆ.




ವ್ಯಂಗ್ಯಚಿತ್ರ: ಮಂಜುಲ್

## "ಬಡವರಿಗೆ ಪರಿಹಾರ ನೀಡದ ಬಹುಮತದ ತೀರ್ಪು"

ಪುಟ 9 ರಿಂದ

ಜನಗಳಿಗೆ, ಅದರಲ್ಲೂ ವಂಚಿತ ವಿಭಾಗಗಳಿಗೆ ಒದಗಿಸುವ ಸೌಕರ್ಯಗಳು ಸರಕಾರದ ಉದಾರ ಕೊಡುಗೆಗಳಲ್ಲ, ಅದು ಆ ಜನಗಳ ಹಕ್ಕು ಎಂಬ ಸಂಗತಿಯನ್ನು ಬಹುಶಃ ನ್ಯಾಯಾಧೀಶರೂ ಸೇರಿದಂತೆ ಬಹಳಷ್ಟು ಜನ ಗಮನಕ್ಕೆ ತಗೊಳ್ಳುತ್ತಿಲ್ಲ ಎಂಬುದನ್ನು ಈ ಬಹುಮತದ ತೀರ್ಪು ಮತ್ತೊಮ್ಮೆ ಸಾಬೀತು ಮಾಡಿರುವಂತೆ ಕಾಣುತ್ತದೆ.

ಸೆಕ್ಷನ್ 57ನ್ನು ಅಸಿಂಧುಗೊಳಿಸಿ ಈ ತೀರ್ಪು ಖಾಸಗಿಯವರಿಂದ ಆಧಾರ್ ಯೋಜನೆಗೆ ರಕ್ಷಣೆ ಕೊಟ್ಟಿದೆ ಎಂದು ಭಾವಿಸುವುದೂ ಸರಿಯಲ್ಲ. ಏಕೆಂದರೆ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಹೇಳಿರುವಂತೆ, ಈ ಕೇಂದ್ರ ಸರಕಾರ ಹಲವು ಸರಕಾರೀ ಜವಾಬ್ದಾರಿಗಳನ್ನು ಖಾಸಗೀಕರಿಸಿದೆ ಮತ್ತು ಖಾಸಗಿ ಕಂಪನಿಗಳಿಗೆ ಹೊರಗುತ್ತಿಗೆ ನೀಡಿದೆ. ಇಂತಹ ಕಂಪನಿಗಳಿಗೆ ಆಧಾರ್ ಮಾಹಿತಿಗಳು ಲಭ್ಯವಿರುತ್ತವೆ. ಇದು ಸರ್ವೋಚ್ಚ ನ್ಯಾಯಾಲಯವೇ ಒಂದು ಮೂಲಭೂತ ಹಕ್ಕು ಎಂದಿರುವ ಖಾಸಗಿತ್ವದ ಹಕ್ಕಿನ ಉಲ್ಲಂಘನೆಯಾಗುತ್ತದೆ.

ಬಹುಮತದ ತೀರ್ಪು ಇವೆಲ್ಲ ಅಂಶಗಳನ್ನು ಏಕೆ ಗಮನಕ್ಕೆ ತಗೊಂಡಿಲ್ಲ ಎಂಬುದೇ ಅರ್ಥವಾಗದ, ನಿರಾಶೆ ಉಂಟು ಮಾಡಿರುವ ಸಂಗತಿ ಎನ್ನುತ್ತಾರೆ ಆಧಾರ್ ಯೋಜನೆಯನ್ನು ಆಳವಾಗಿ ಅಭ್ಯಾಸ ಮಾಡಿರುವ ಅರ್ಜಿದಾರರು. ತನ್ನ ಆದೇಶವನ್ನು ಉಪೇಕ್ಷಿಸಿ ಸರಕಾರ ಒಂದಾದ ಮೇಲೊಂದರಂತೆ ಅಧಿಸೂಚನೆಗಳ ಮೂಲಕ ಹಲವಾರು ವಿಷಯಗಳನ್ನು ಆಧಾರ್‌ಗೆ ಒಳಪಡಿರುವುದನ್ನು ರದ್ದು ಮಾಡಿರುವ ಈ ತೀರ್ಪು ಇವನ್ನೆಲ್ಲ ಏಕೆ ತಂದದ್ದು ಎಂದು ಮಾತ್ರ ಸರಕಾರವನ್ನು ತರಾಟೆಗೆ ತಗೊಂಡಿಲ್ಲ ಎಂಬದು ಕೂಡ ಗಮನಾರ್ಹ ಎನ್ನುತ್ತಾರೆ ಪರಿಣಿತರು.

*ಕೇಳಿಸಿದ್ದು*

## ಗಾಂಧಿ ಭಯ ಮತ್ತು ಗಾಂಧಿ ಪ್ರೀತಿ

ಈಗ ನಮ್ಮ ಮುಂದಿರುವುದು 1869ರ ಅಕ್ಟೋಬರ್ 2ರಂದು ಹುಟ್ಟಿದ ಗಾಂಧಿ ಅಲ್ಲ. ಈಗ ನಮ್ಮ ಮುಂದಿರುವುದು 1948ರ ಜನವರಿ 30 ರಂದು ಕೊಲೆಯಾಗುವುದರ ಮೂಲಕ ಪುನರ್ಜನ್ಮ ಪಡೆದ ಗಾಂಧಿ. ಅದಕ್ಕೇ ಇರಬೇಕು ರಿಚರ್ಡ್ ಅಟೆನ್‌ಬರೋ ಅವರ 'ಗಾಂಧಿ' ಸಿನಿಮಾ ಪ್ರಾರಂಭವಾಗುವುದು ಗಾಂಧಿಯವರ ಸಾವಿನ ಸನ್ನಿವೇಶದಿಂದ.

ಅಹಿಂಸೆಯನ್ನು ಜನಮನದಲ್ಲಿ ಪ್ರತಿಷ್ಠಾಪಿಸಲು ಹೆಣಗಿ ಹಿಂಸಾತ್ಮಕ ಅಂತ್ಯ ಕಂಡ ಗಾಂಧೀಜಿಯ ನೂರೈವತ್ತನೆಯ ಜಯಂತ್ಯುತ್ಸವದ ಸುತ್ತ ನಡೆಯುತ್ತಿರುವ ವಿದ್ಯಮಾನಗಳನ್ನು ನೋಡಿ. ಹಿಂಸೆಯನ್ನು ಕೃತಿಯಿಂದಲೂ, ಮೌನಸಮ್ಮತಿಯಿಂದಲೂ ಪ್ರೋತ್ಸಾಹಿಸುತ್ತಿರುವ ನಾಯಕತ್ವವು 'ಆಚರಣೆ ಕೇವಲ ಸಾಂಕೇತಿಕ ಆಗಬಾರದು' ಎನ್ನುತ್ತಿದೆ, 'ಮಹಾತ್ಮ ಗಾಂಧಿಯವರ ಚಿಂತನೆಗಳು ಬದುಕಿನ ಭಾಗವಾಗಬೇಕು' ಎಂದು ಕರೆ ನೀಡುತ್ತಿದೆ! ಯಾವ ಚಿಂತನೆಗಳು? ಯಾರ ಬದುಕಿನ ಭಾಗ? ಮಹಾತ್ಮ ಗಾಂಧಿಯನ್ನು ಅಂತರಂಗದಲ್ಲಿ ಸದಾ ದ್ವೇಷಿಸುತ್ತಾ ಬಂದು ಹಲವು ತಲೆಮಾರುಗಳ ಹೃದಯದಲ್ಲಿ ಗಾಂಧಿ ದ್ವೇಷವನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬಿತ್ತಿದ ಸಂಘಟನೆಯ ಪ್ರಭೃತಿಗಳಿಗೂ ಆಚರಣೆಯ ರೂಪುರೇಷೆ ತಯಾರಿಸಲು ಸರ್ಕಾರ ರಚಿಸಿದ ಸಮಿತಿಯಲ್ಲಿ ಜಾಗ ಸಿಕ್ಕಿದೆ! ಇನ್ನು ಅದರಲ್ಲಿ ದೇಶದಲ್ಲಿ ಹರಡುತ್ತಿರುವ ಹಿಂಸೆಯ ಬಗ್ಗೆ ಬಾಯಿ ಬಿಡದ ಧರ್ಮೋದ್ಯಮಿಗಳು, ಅಧ್ಯಾತ್ಮೋದ್ಯಮಿಗಳು, ದೇವಾಲಯೋದ್ಯಮಿಗಳು ಯಥಾಪ್ರಕಾರ ಸೇರಿಕೊಂಡಿದ್ದಾರೆ. ಇಂತಹ ಸಂಘಟನೆಗಳ, ಇಂತಹ ವ್ಯಕ್ತಿಗಳ ಪ್ರತ್ಯಕ್ಷ ಪರೋಕ್ಷ ಪ್ರಭಾವಕ್ಕೊಳಗಾಗಿ ತಯಾರಾದ ಮನಸ್ಸುಗಳು ಸಾಮಾಜಿಕ ಮಾಧ್ಯಮಗಳನ್ನು ಬಳಸಿಕೊಂಡು ಗಾಂಧಿ ದ್ವೇಷವನ್ನು ಯಥಾಶಕ್ತಿ ಹರಡುತ್ತಿವೆ.

ಗಾಂಧೀಜಿ ನೂರೈವತ್ತನೆಯ ಜನ್ಮದಿನಾಚರಣೆಯ ಅಂಗವಾಗಿ ಮೊದಲಿಗೆ ಆಗಬೇಕಾದದ್ದು ಜಾಲತಾಣಗಳಲ್ಲಿ ರಾಶಿ ಹಾಕಿರುವ ಇಂತಹ ಗಾಂಧಿ ದ್ವೇಷದ ಸಂದೇಶಗಳನ್ನು ತೆಗೆದುಹಾಕುವ ಕೆಲಸ. ಸ್ವಚ್ಛ ಭಾರತ ಪ್ರಾರಂಭವಾಗಬೇಕಾಗಿರುವುದು ಸ್ವಚ್ಛ ಮನಸ್ಸುಗಳಿಂದ. ಎರಡನೆಯದಾಗಿ ಆಗಬೇಕಾಗಿರುವುದು ಗಾಂಧೀಜಿಯನ್ನು ಕೊಂದ ನಾಥುರಾಮ್ ಗೋಡ್ಸೆ ಎಂಬ ಧರ್ಮಾಂಧ ಯುವಕನನ್ನು ಪೂಜಿಸಲೆಂದು ದೇಶದ ಕೆಲವೆಡೆ ಕೆಲವರು (ಅವರು ಯಾರು ಮತ್ತು ಯಾವ ರಾಜಕೀಯ ಒಲವುಳ್ಳವರು ಅಂತ ಹೇಳಬೇಕಿಲ್ಲ ತಾನೇ) ಕಟ್ಟಿದ ಆಲಯಗಳನ್ನು ರಾಷ್ಟ್ರೀಯ ನಾಚಿಕೆಗೇಡಿನ ಭವನ (ನ್ಯಾಷನಲ್ ಹಾಲ್ ಆಫ್ ಶೇಮ್) ಎಂದು ಘೋಷಿಸುವ ಕೆಲಸ. ಈ ಆಲಯಗಳನ್ನು ಕೆಡವಿ ಅವುಗಳಿಗೆ ಒಂದು ಹೊಸ ಪ್ರಾಮುಖ್ಯ ಮತ್ತು ಪಾವಿತ್ರ್ಯ ನೀಡುವುದು ಬೇಡ. ಅವುಗಳು ಇರಬೇಕು. ಸಾವಿರಾರು ವರ್ಷಗಳ ಹಿಂದೆಯೇ ಜಗತ್ತಿಗೆ ಶಾಂತಿಯ ಮಂತ್ರ ನೀಡಿದ ಭಾರತದ ಆಂತರ್ಯದಲ್ಲಿ ಇನ್ನೂ ಉಳಿದಿರುವ ಹಿಂಸಾಪ್ರವೃತ್ತಿಗೆ ಸಾಕ್ಷಿಯಾಗಿ ಉಳಿಯಬೇಕು. ಕನಿಷ್ಠ ಈ ಎರಡು ಕಾರ್ಯಗಳು ಆಗದ ಹೊರತು ಗಾಂಧೀಜಿಯ ಜನ್ಮದಿನಾಚರಣೆಯನ್ನು ಆಳುವ ಪಕ್ಷ ಅದೆಷ್ಟು ವೈಭವದಲ್ಲಿ ಮಾಡಿದರೂ ಅದು ಅರ್ಥಹೀನ.

ಕೇಂದ್ರ ಸರ್ಕಾರ ನೇಮಿಸಿದ ಸಮಿತಿಯಲ್ಲಿ ಒಳ್ಳೆಯವರೂ ಇದ್ದಾರೆ. ಆದರೆ ಅವರಿಗೆ ಭಾರಿ ಗೌಜಿನಿಂದ ಗಾಂಧಿ ಜಯಂತಿ ಆಚರಿಸಲು ಹೊರಟಿರುವ ಪ್ರಬಲ ನಾಯಕತ್ವಕ್ಕೆ ಮೇಲಿನ ನಿಷ್ಠುರ ಸಲಹೆಗಳನ್ನು ನೀಡುವ ಧೈರ್ಯವಿದ್ದೀತೆ? ಒಬ್ಬಂಟಿಯಾಗಿ ಸತ್ಯ ಹೇಳುವ ಧೈರ್ಯ ಮತ್ತು ಸತ್ಯ ಹೇಳಿ ಒಬ್ಬಂಟಿಯಾಗುವ ಧೈರ್ಯ ಇದ್ದ ಈ ದೇಶದ ಕೊನೆಯ ನಾಯಕ (ಮೊದಲ ನಾಯಕನೂ ಆಗಿರಬಹುದು) ಮಹಾತ್ಮ ಗಾಂಧಿ. ಅಂತಹ ಧೈರ್ಯ ಇರುವ ಹೊಸ ತಲೆಮಾರಿನ ನಾಯಕತ್ವ ಸೃಷ್ಟಿಯಾದರೆ ಅದಕ್ಕಿಂತ ದೊಡ್ಡ ಗೌರವ ಗಾಂಧೀಜಿಗೆ ಬೇಕಾಗಿಲ್ಲ.

*– ಎ.ನಾರಾಯಣ, ಅನುರಣನ, ಪ್ರಜಾವಾಣಿ ಸೆಪ್ಟೆಂಬರ್ 25*

## ಬಿಹೆಚ್‌ಯು ನಲ್ಲಿ ವಿದ್ಯಾರ್ಥಿನಿಯರ ಮೇಲೆ ಎಬಿವಿಪಿ ಹಲ್ಲೆ–ಎಸ್‌ಎಫ್‌ಐ ಖಂಡನೆ

ಬನಾರಸ್ ಹಿಂದೂ ವಿಶ್ವವಿದ್ಯಾಲಯದ ವಿದ್ಯಾರ್ಥಿನಿಯರ ಮೇಲೆ ಎಬಿವಿಪಿ ಮಂದಿ ಈ ವರ್ಷವೂ ಹಲ್ಲೆ ಮಾಡಿದ್ದಾರೆ. ಈ ವಿದ್ಯಾರ್ಥಿನಿಯರು ಲೈಂಗಿಕ ಕಿರುಕುಳದ ವಿರುದ್ಧ ತಮ್ಮ ಯಶಸ್ವಿ ಹೋರಾಟದ ವಾರ್ಷಿಕೋತ್ಸವದ ಕಾರ್ಯಕ್ರಮವನ್ನು ನಡೆಸುತ್ತಿದ್ದಾಗ ಅದನ್ನು ಅಸ್ತವ್ಯಸ್ತಗೊಳಿಸಲು ಈ ಹಲ್ಲೆಯನ್ನು ವಿವಿಯ ಭದ್ರತಾ ಸಿಬ್ಬಂದಿಯ ಕಣ್ಣ ಮುಂದೆಯೇ ನಡೆಸಿದ್ದಾರೆ. ಇದನ್ನು ಎಸ್‌ಎಫ್‌ಐ ಕೇಂದ್ರ ಕಾರ್ಯದರ್ಶಿ ಮಂಡಳಿ ಖಂಡಿಸಿದೆ, ಮತ್ತು ಈ ಎಬಿವಿಪಿ ಗೂಂಡಾಗಳನ್ನು ತಕ್ಷಣವೇ ಬಂಧಿಸಬೇಕು ಎಂದು ಆಗ್ರಹಿಸಿದೆ.

ವಿದ್ಯಾರ್ಥಿನಿಯರು ಪಿತೃಪ್ರಧಾನ ವ್ಯವಸ್ಥೆಯ ವಿರುದ್ಧ, ತಮ್ಮ ಸ್ವಾತಂತ್ರ್ಯಕ್ಕಾಗಿ, ಲೈಂಗಿಕ ಕಿರುಕುಳದ ವಿರುದ್ಧ ದನಿ ಎತ್ತುವಾಗ ಈ ಎಬಿವಿಪಿ ಮಂದಿಗೆ ಇಷ್ಟೊಂದು ಭಯವಾಗುತ್ತಿದೆಯೇ ಎಂದು ಎಸ್‌ಎಫ್‌ಐ ಪ್ರಶ್ನಿಸಿದೆ. ವಿದ್ಯಾರ್ಥಿನಿಯರಿಗೆ ಸ್ವಾತಂತ್ರ್ಯ ಬೇಡೆಂದು ಅವರ ಭಾವನೆಯೇ? ಹಾಗಿದ್ದರೆ ಅವರಿಗೆ ಭಾರತದ ಸಂವಿಧಾನದಲ್ಲಿ ನಂಬಿಕೆ ಇಲ್ಲವೇ ಎಂದೂ ಎಸ್‌ಎಫ್‌ಐ ಕೇಂದ್ರ ಕಾರ್ಯದರ್ಶಿ ಮಂಡಳಿ ಪ್ರಶ್ನಿಸಿದೆ.

ಎಬಿವಿಪಿ ಈಗ ಕ್ಯಾಂಪಸ್‌ಗಳಲ್ಲಿ ಗೂಂಡಾಗಿರಿ ಮತ್ತು ಹಿಂಸಾಚಾರಕ್ಕೆ ಇನ್ನೊಂದು ಹೆಸರಿನಂತಾಗಿದೆ. ದೇಶಾದ್ಯಂತ ಅವರು ವಿದ್ಯಾರ್ಥಿ–ವಿದ್ಯಾರ್ಥಿನಿಯರ ಮೇಲೆ ಹಲ್ಲೆಗಳನ್ನು ನಡೆಸುತ್ತಿದ್ದಾರೆ. ಮತ್ತು ಯಾವುದೇ ಶಿಕ್ಷೆಯಿಲ್ಲದೆ ಬಚಾವಾಗುತ್ತಿದೆ. ಇದು ಕೇಂದ್ರ ಸರಕಾರದ ಬೆಂಬಲದಿಂದಾಗಿ ಎಂಬುದು ಸ್ಪಷ್ಟ. ಸಾಮಾಜಿಕ ಮಾಧ್ಯಮಗಳಲ್ಲಿ ಸಕ್ರಿಯರಾಗಿರುವ ಪ್ರಧಾನಿಗಳೂ ಸೇರಿದಂತೆ ಬಿಜೆಪಿಯ ಉನ್ನತ ಮುಖಂಡರುಗಳು ಎಬಿವಿಪಿಯ ಇಂತಹ ಹಿಂಸಾಚಾರಗಳ ಬಗ್ಗೆ ಮೌನವಾಗಿರುತ್ತಾರೆ ಎಂದು ಎಸ್‌ಎಫ್‌ಐ ಕೇಂದ್ರ ಕಾರ್ಯದರ್ಶಿ ಮಂಡಳಿ ಖೇದ ವ್ಯಕ್ತಪಡಿಸಿದೆ.

ಪಶ್ಚಿಮ ಬಂಗಾಲದ ಉತ್ತರ ದಿನಾಜ್‌ಪುರದ ದಲ್ಕೊಲದ ಲುತ್ಫುರ್ ಹಕ್ ಈ ಪ್ರದೇಶದ ಜನಪ್ರಿಯ ಮುಖಂಡರು ಮತ್ತು ಈ ಹಿಂದೆ ಪಂಚಾಯತ್ ಸದಸ್ಯರಾಗಿದ್ದವರು. ಅವರ ಹೆಣ ಸಪ್ಟಂಬರ್ 26ರಂದು ನದಿ ದಡದಲ್ಲಿ ಸಿಕ್ಕಿತು. ಕೆಲವು ದಿನಗಳಿಂದ ಅವರು ಕಾಣೆಯಾಗಿದ್ದರು. ಅವರನ್ನು ಹತ್ಯೆ ಮಾಡಲಾಗಿದೆ, ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯ ಮಹಮ್ಮದ್ ಸಲೀಂ ಈ ಹತ್ಯೆಯನ್ನು ಖಂಡಿಸುತ್ತ ಕೊಲೆಗಡುಕರನ್ನು ತಕ್ಷಣವೇ ಶಿಕ್ಷಿಸಬೇಕು ಎಂದು ಹೇಳಿದ್ದಾರೆ.






# ಬಿಜೆಪಿ ಆಪರೇಶನ್ ಮುಖಭಂಗ !

ಕಳೆದ ಕೆಲವು ವಾರಗಳಲ್ಲಿ ಮೈತ್ರಿ ಸರಕಾರ ಉರುಳಿಸಲು ಬಿಜೆಪಿ ಮಾಡಿದ ಆಪರೇಶನ್ ಸಕ್ಸಸ್ ಆಗಿದೆ! ಆದರೆ ಪಿ ಮಹಮ್ಮದ್ ಅವರ ಕಾರ್ಟೂನಿನಲ್ಲಿದ್ದಂತೆ ಪೇಶಂಟುಗಳು ಡಾಕ್ಟರ ಮೇಲೆ ಮಾಡಿದ ಆಪರೇಶನ್ ಸಕ್ಸಸ್ ಆಗಿದೆ. ರಾಜ್ಯ ಬಿಜೆಪಿಗೆ ಮತ್ತು ಈ ಆಪರೇಶನಿನ ರೂವಾರಿಯಾಗಿದ್ದ ಅಧ್ಯಕ್ಷ ಯೆಡಿಯೂರಪ್ಪನವರಿಗೆ ಇನ್ನೊಂದು ಬಾರಿ ಭಾರೀ ಮುಖಭಂಗವಾಗಿದೆ. ಅದೂ ಈ ವಾರದಲ್ಲಿ ಮೂರು ಬಾರಿ ಆಯಿತು. ಮೊದಲನೆಯದಾಗಿ ವಾರದ ಆರಂಭದಲ್ಲೇ 20 ಆಳುವ ರಂಗದ ಶಾಸಕರು ಮುಂಬಯಿಗೆ ತೆರಳುತ್ತಾರೆ ಎಂಬ ಬಿಜೆಪಿ ಯೋಜನೆ ಠುಸ್ ಆಯಿತು. ಕಾಂಗ್ರೆಸ್–ಬಿಜೆಪಿ ಶಾಸಕರ ಅತೃಪ್ತಿ ಬಂಡಾಯ ಶಮನಗೊಳಿಸುವುದರಲ್ಲಿ ಸದ್ಯಕ್ಕಂತೂ ಯಶಸ್ವಿಯಾಯಿತು. ವಿಧಾನಸಭೆಯಿಂದ ವಿಧಾನ ಪರಿಷತ್ತಿಗೆ 3 ಸದಸ್ಯರ ಚುನಾವಣೆಯಲ್ಲಿ ಹಲವು ಶಾಸಕರು ಅಡ್ಡ ಮತದಾನ ಮಾಡುತ್ತಾರೆ ಅಥವಾ ಗೈರು ಹಾಜರಾಗುತ್ತಾರೆ ಎಂದು ಹೇಳಲಾಯಿತು. ಬಿಜೆಪಿಗೆ ತನ್ನದೇ ಸಂಖ್ಯೆಯ ಆಧಾರದಲ್ಲಿ ಯಾವುದೇ ಸೀಟಿನ ಸಾಧ್ಯತೆ ಇರದಿದ್ದರೂ, ಒಂದು ಸ್ಥಾನಕ್ಕೆ ಅಭ್ಯರ್ಥಿ ಸ್ಪರ್ಧಿಸಿ ಗೆಲ್ಲುತ್ತಾರೆ. ಇದರಿಂದ ಮೈತ್ರಿ ಸರಕಾರದ ಬಿರುಕು ಸಾರ್ವಜನಿಕವಾಗುತ್ತದೆ. ಈ ಮತದಾನದಲ್ಲಿ ಹೀಗೆ ಶಾಸಕರು ಬಂಡಾಯವೆದ್ದರೂ ಸದಸ್ಯತ್ವ ಕಳೆದುಕೊಳ್ಳುವ ರಿಸ್ಕ್ ಇಲ್ಲ. ಆದ್ದರಿಂದ ಅತೃಪ್ತ ಶಾಸಕರು ತಮ್ಮ ಮಂತ್ರಿಗಿರಿಗೋ ಇತರ ಒತ್ತಾಯಗಳನ್ನು ಈಡೇರಿಸಲು ಇದನ್ನು ಬಳಸಿಕೊಳ್ಳುತ್ತಾರೆ. ಆದ್ದರಿಂದ ಇದು ಆಗೇ ಆಗುತ್ತದೆ ಎಂದು ಹೇಳಲಾಯಿತು. ಆದರೆ ಅದೂ ಆಗಲಿಲ್ಲ. ಈ ಸಾಧ್ಯತೆ ಇಲ್ಲದ್ದು ಮನಗಂಡು ಬಿಜೆಪಿ ಅಭ್ಯರ್ಥಿ ಸ್ಪರ್ಧಿಸಲೇ ಇಲ್ಲ. ಯುದ್ಧದ ಮೊದಲೇ ಶಸ್ತ್ರತ್ಯಾಗ ಮಾಡಿತು. ಇದು ಎರಡನೆಯ ಮುಖಭಂಗ. ಮೈತ್ರಿ ಸರಕಾರದ ಬಿರುಕು ಸಾರ್ವಜನಿಕಗೊಳಿಸಲು ಇನ್ನೊಂದು ಅವಕಾಶ ಬಂದಿದ್ದು ಬೆಂಗಳೂರಿನ ಮೇಯರ್–ಉಪಮೇಯರ್ ಚುನಾವಣೆಯಲ್ಲಿ. ಇಲ್ಲೂ ಸಾಕಷ್ಟು ಪಕ್ಷೇತರರೂ ಇದ್ದು ಕೆಲವೇ ಅಡ್ಡ ಮತದಾನ ಅಥವಾ ಗೈರು ಹಾಜರಿಯಿಂದ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿರಂಗಕ್ಕೆ ಮುಜುಗರ ಉಂಟು ಮಾಡಬಹುದಿತ್ತು. ಇಲ್ಲೂ ಅದನ್ನು ಸಾಧಿಸಲಾಗದೆ ಗಲಭೆ ಮಾಡಿ ಬಿಜೆಪಿ ಸದಸ್ಯರು ಸಭಾತ್ಯಾಗ ಮಾಡಿದರು. ಕಾಂಗ್ರೆಸ್ ಅಭ್ಯರ್ಥಿ ಮೇಯರ್ ಆಗಿ, ಜೆಡಿ(ಎಸ್) ಅಭ್ಯರ್ಥಿ ಉಪಮೇಯರ್ ಆಗಿ ಆಯ್ಕೆಯಾದರು. ಮತ್ತೆ ಬಿಜೆಪಿಗೆ ಮುಖಭಂಗವಾಯಿತು.

ಆದರೆ ಇದರರ್ಥ ಮೈತ್ರಿ ಸರಕಾರ ಈಗ ಸ್ಥಿರವಾಗಿದೆಯೆಂದೇನೂ ಅಲ್ಲ. ಸ್ವಾರ್ಥ, ಗುಂಪುಗಾರಿಕೆ, ಅವಕಾಶವಾದಗಳ ಕೆಸರಲ್ಲಿ ಮುಳುಗಿರುವ ಶಾಸಕರು ಇರುವ ಕಾಂಗ್ರೆಸ್–ಜೆಡಿ(ಎಸ್) ಮೈತ್ರಿರಂಗವನ್ನು ಅಸ್ಥಿರಗೊಳಿಸಲು ಹೊರಗಿನ ಸಹಾಯ ಕುಮ್ಮಕ್ಕು ಬೇಕಾಗಿಲ್ಲ. ಇದರಲ್ಲಿ ಅವರು ಸ್ವಾವಲಂಬಿಗಳು! ಮಂತ್ರಿ ಮಂಡಲ ವಿಸ್ತರಣೆ, ನಿಗಮ–ಮಂಡಳಿಗಳ ಮುಖ್ಯಸ್ಥರ ನೇಮಕ ಮುಂದಿನ ವಾರ ನಡೆಯಲಿದೆ ಎಂದು ಹೇಳಲಾಗುತ್ತಿದೆ. ಇದರ ನಂತರ ಇನ್ನೊಂದು ಸುತ್ತಿನ ಬಂಡಾಯ ಅಸ್ಥಿರತೆ ನಿರೀಕ್ಷಿಸಬಹುದು. ಬಿಜೆಪಿ, ಯೆಡಿಯೂರಪ್ಪ ಆಗ ತಮ್ಮ ಆಪರೇಶನ್ ಮತ್ತೆ ಪ್ರಯೋಗಿಸಲು ಪ್ರಯತ್ನಿಸಬಹುದು. ರಾಜ್ಯ–ಕೇಂದ್ರ ಪಕ್ಷ ನಾಯಕತ್ವ ಬೆಂಬಲಿಸಲಿ ಬಿಡಲಿ, ಯೆಡಿಯೂರಪ್ಪ ನವರಂತೂ 'ಮರಳಿ ಯತ್ನವ ಮಾಡು'ವುದಂತೂ ಗ್ಯಾರಂಟಿ. ●



ಕೃಪೆ: ಪಿ. ಮಹಮ್ಮದ್, ವಿ.ಕ

# ನೆರೆ, ಬರಕ್ಕೆ ಸ್ಪಂದಿಸದ ಸರಕಾರ

ಬಿಜೆಪಿಗೆ ಮೈತ್ರಿ ಸರಕಾರವನ್ನು ಉರುಳಿಸಲು ಸಾಧ್ಯವಾಗದಿದ್ದರೂ ಅದನ್ನು ಬದನಾಮ್ ಮಾಡುವಲ್ಲಿಯಂತೂ ಯಶ್ವಸಿಯಾಗಿದೆ. ಇಲ್ಲೂ ಮೈತ್ರಿ ಸರಕಾರಕ್ಕೆ ಹೊರಗಿನ ಬೆಂಬಲ ಏನೂ ಬೇಕಾಗಿಲ್ಲ. ಸಾಕಷ್ಟು ಆಂತರಿಕ ಪ್ರತಿಭೆಯಿದೆ! ರಾಜ್ಯದ ಕೆಲವು ಪ್ರದೇಶಗಳು ಅತಿವೃಷ್ಟಿಯಿಂದ ಕಷ್ಟ ನಷ್ಟ ಅನುಭವಿಸುತ್ತಿದ್ದರೆ, ಇನ್ನೂ ಕೆಲವು ಪ್ರದೇಶಗಳು ಅನಾವೃಷ್ಟಿಯಿಂದ ಬಳಲುತ್ತಿವೆ. ಆಪರೇಶನಿನ, ಜಾತಿ ಪ್ರದೇಶಗಳ ಮಂತ್ರಿಗಿರಿಗಳ ಬಗ್ಗೆ ಜಗಳ, ಅಧಿಕಾರಿಗಳ ವರ್ಗಾವಣೆಯ 'ಹಕ್ಕು' ಇತ್ಯಾದಿಗಳಲ್ಲಿ ಮುಳುಗಿ ಹೋಗಿದ್ದ ಶಾಸಕರಿಗೂ ಮಂತ್ರಿಗಳಿಗೂ ಇವೆಲ್ಲದರ ಬಗ್ಗೆ ಕ್ರಮ ಕೈಗೊಳ್ಳಲು ಎಲ್ಲಿ ವ್ಯವಧಾನವಿತ್ತು? ಕೊಡಗು ಮತ್ತು ದಕ್ಷಿಣ ಕರ್ನಾಟಕದ ಅತಿವೃಷ್ಟಿಯ ಬಗ್ಗೆ ಪರಿಹಾರ, ಪುನರ್ವಸತಿಯಲ್ಲಿ ಸರಕಾರ ಭಾರಿ ದಕ್ಷತೆ, ವೇಗ ಏನೂ ತೋರಿಲ್ಲ. ವಿಶೇಷವಾಗಿ ಕೊಡಗಿನ ಪರಿಹಾರ, ಪುನರ್ವಸತಿ ಬಗ್ಗೆ ಯೋಜನೆಗೆ ಮುತುವರ್ಜಿ ವಹಿಸಿದಂತೆ ಕಾಣಲಿಲ್ಲ. ಬೆಂಗಳೂರಿನಲ್ಲಿ ಕಳೆದ ಒಂದು ವಾರದಿಂದ ಮತ್ತು ಇದೇ ಮಳೆಗಾಲದಲ್ಲಿ ಹಿಂದೆ ಆದ ಭಾರೀ ಮಳೆ ಮತ್ತೆ ಚರಂಡಿ, ರಸ್ತೆ, ಕೆರೆ ಕೋಡಿಗಳ ನಿರ್ವಹಣೆಗಳಲ್ಲಿರುವ ತೀವ್ರ ಅವ್ಯವಸ್ಥೆಯನ್ನು ಬಯಲು ಮಾಡಿದೆ. ಕಳೆದ ವರ್ಷ ತೀವ್ರ ಸಮಸ್ಯೆಗೆ ಒಳಗಾಗಿದ್ದ ಬೆಂಗಳೂರಿನ ಪ್ರದೇಶಗಳೇ ಮತ್ತೆ ಅದೇ ಸಮಸ್ಯೆ ಎದುರಿಸಿವೆ. ಕೆರೆಗಳಲ್ಲಿ ನೊರೆ ಕಾಣಿಸಿಕೊಂಡಿದೆ. ಸಣ್ಣ ಮಳೆ ಬಂದರೂ ಗಂಟೆಗಟ್ಟಲೆ ಮೈಲುಗಟ್ಟಲೆ ಟ್ರಾಫಿಕ್ ಜಾಮ್ ಆಗುವಂತಹ ಪರಿಸ್ಥಿತಿಯಿದೆ. ಕಸ ವಿಲೇವಾರಿ, ಕಾನೂನು–ಬಾಹಿರ ಫ್ಲೆಕ್ಸ್ ಗಳನ್ನು ತೆಗೆದು ಹಾಕುವುದು, ರಸ್ತೆಯ ಗುಂಡಿಗಳನ್ನು ಮುಚ್ಚುವುದು, ಹೀಗೆ ಯಾವುದೇ ನಗರ ನಿರ್ವಹಣೆಯ ಕೆಲಸಗಳಲ್ಲಿ ಕೋರ್ಟು ಚಾಟಿ ಬೀಸಿದರೆ ಮಾತ್ರ ಕೆಲಸವಾಗುತ್ತದೆಯೆಂಬ ಪರಿಸ್ಥಿತಿಯಿದೆ. ಅದೇ ರೀತಿ ಬರ ಪರಿಸ್ಥಿತಿ ಬಹಳ ಸಮಯದಿಂದ ಸ್ಪಷ್ಟವಾಗಿ ಕಂಡು ಬರುತ್ತಿದ್ದರೂ ಕಳೆದ ವಾರವಷ್ಟೇ ಬರದ ಘೋಷಣೆಯಾಗಿದೆ. ಇನ್ನೂ ಬರ ಪರಿಹಾರ ಕ್ರಮಗಳನ್ನು ತೆಗೆದುಕೊಳ್ಳಲು ಎಷ್ಟು ಸಮಯ ತೆಗೆದುಕೊಳ್ಳುತ್ತಾರೋ ಎಂದು ಕಾದು ನೋಡಬೇಕು. ಸಾಲ ಮನ್ನಾ ಘೋಷಣೆಯಾದ ನಂತರ ಯಾವುದೇ ಮುಂದಿನ ಕ್ರಮಗಳ ಸೂಚನೆ ಕಂಡು ಬಂದಿಲ್ಲ. ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ಮುಂತಾದ ಹಿಂದೆ ಇದ್ದ ಸವಲತ್ತುಗಳ ಬಗ್ಗೆ ಇನ್ನೂ ನಿರ್ಧಾರವನ್ನೂ ಕೈಗೊಂಡಿಲ್ಲ. ●

## ದೇಶಕ್ಕಾಗಿ ಕ್ರಾಂತಿಗಾಗಿ ಎರಡೂ ಬದಿಯಲ್ಲಿ........ ಪುಟ 16 ರಿಂದ

ಸೇತುವೆಯನ್ನಾಗಿ ಮಾಡಿದವರು. ಅದರ ಮೇಲಿಂದ ಅತ್ತಲೊಬ್ಬ, ಇತ್ತಲೊಬ್ಬ ಹೊರಟುಹೋದಾಗ ಒಂಟಿ ಸೇತುವೆಯಾಗಿ ಉಳಿದುಬಿಟ್ಟಳು" ಎಂದು ಅವರನ್ನು ಕುರಿತು ಕವಿ ಸೋಮಸುಂದರ್ ಅವರು ಆಡಿದ ಮಾತುಗಳನ್ನಾಧರಿಸಿ ಕೋಟೇಶ್ವರಮ್ಮ ತಮ್ಮ ಆತ್ಮಕಥೆಗೆ 'ಒಂಟಿಸೇತುವೆ' ಎಂದೇ ನಾಮಕರಣ ಮಾಡಿಕೊಂಡಿದ್ದಾರೆ.

ಸ. ರಘುನಾಥ ಅವರು ಕನ್ನಡಕ್ಕೆ ಅನುವಾದಿಸಿರುವ ಈ ಪುಸ್ತಕವನ್ನು ಓದಿ ರೋಮಾಂಚನಗೊಂಡು ಅವರನ್ನು ಭೇಟಿಯಾಗಬೇಕೆಂದು ಕಳೆದ ಸೆಪ್ಟೆಂಬರ್ 8 ರಂದು ವಿಶಾಖಪಟ್ಟಣದ ಅವರ ಮನೆಗೆ ಹೋಗಿದ್ದೆ. ಅವರ ಮನೆಯೊಳಗೆ ಕಾಲಿಡುತ್ತಿದ್ದಂತೆ ಅಲ್ಲಿಯೇ ಹಾಸಿಗೆಯ ಮೇಲೆ ಒರಗಿಕೊಂಡು ನ್ಯೂಸ್ ಪೇಪರ್ ಓದುತ್ತಿದ್ದ ತೊಂಭತ್ತೇಳರ ಅಜ್ಜಿ ದಢಕ್ಕನೆ ಎದ್ದು ಕೂತು ನಮ್ಮನ್ನು ಸ್ವಾಗತಿಸಲು ಸಿದ್ಧರಾದರು. ಆತ್ಮೀಯವಾಗಿ ನಮ್ಮನ್ನು ಸ್ವಾಗತಿಸಿದೊಡನೆ ಕೇಳಿದ ಮೊದಲ ಪ್ರಶ್ನೆ, "ನಿಮಗೆ ಗೌರಿ ಲಂಕೇಶ್ ಗೊತ್ತಾ?" ಹೌದೆಂದು, ಪಕ್ಕದಲ್ಲಿ ನಿಂತಿದ್ದ ಜಿ.ಆರ್. ಅವರನ್ನು ತೋರಿಸಿ, "ಗೌರಿ, ಇವರ ಶಿಷ್ಯೆ" ಎಂದು ಪರಿಚಯಿಸಿದ್ದೇ, ಸ್ವಲ್ಪ ಕಾಲ ನಾವು ಆಡಿದ ಮಾತೆಲ್ಲಾ 'ಗೌರಿ ಹತ್ಯಾ ಪ್ರಕರಣ'ವನ್ನು ಕುರಿತಾಗಿತ್ತು. ದಿನಕ್ಕೆ ಆರು ಪತ್ರಿಕೆಗಳನ್ನು ಕೂಲಂಕುಷವಾಗಿ ಓದುವ ಈ ಅಜ್ಜಿಯ ಜೀವನೋತ್ಸಾಹ ಕಂಡು ನಿಬ್ಬೆರಗಾದೆ.

ಕೋಟೇಶವರಮ್ಮನವರ ಮನೆಯಲ್ಲಿದ್ದು ಅವರೊಡನೆ ಮಾತನಾಡಿ ನಮ್ಮ ಊರಿಗೆ ಹಿಂತಿರುಗುವಾಗ ಮನಸ್ಸು ತುಂಬಿ ಬಂತು. ಎರಡು ದಿನಗಳ ಕಾಲ ನಾವು ಒಡನಾಡಿದ್ದು ಬರೀ ಒಂದು ವ್ಯಕ್ತಿಯ ಜೊತೆಯಲ್ಲ, ನಮ್ಮ ದೇಶದ ಕಮ್ಯೂನಿಸ್ಟ್ ಚಳುವಳಿಯ ಸ್ಮೃತಿ ಸಂಚಯವನ್ನು ತನ್ನಲ್ಲಿ ಹೊತ್ತ ಜ್ಞಾನ ಭಂಡಾರದ ಜೊತೆಗೆ ಎಂದೆನಿಸಿತು. ಅವರನ್ನು ಕಂಡಾಗ ಕಣ್ಣೆದುರಿಗೇ ಮಕ್ಕಳು, ಗಂಡ ಎಲ್ಲರನ್ನೂ ಕಳೆದುಕೊಂಡರೂ, ನಿರಾಶೆಯ ಕೂಪದಲ್ಲಿ ಮುಳುಗದೆ ಮೇಲೆದ್ದು ಪ್ರಜ್ವಲಿಸುವ ಬೆಳಕೊಂದು ಕಂಡ ಅನುಭವವಾಯಿತು. ಅವರ ಆತ್ಮಕಥೆ 'ಒಂಟಿ ಸೇತುವೆ'ಯ ಕೊನೆಯ ಸಾಲುಗಳು ಅವರ ಈಗಿನ ಸ್ಥಿತಿಯನ್ನು ಬಿಂಬಿಸುವ ಸಾಲುಗಳೂ ಆಗಿವೆ:

"ಒಂಟಿತನ, ಒಬ್ಬಂಟಿಯೆಂದು ಮುದುಡಿ
ಕೂರುವುದಿಲ್ಲ
ಅಮಾನುಷ ಘಟನೆಗಳ ಕಂಡು ಕಣ್ಣೀರ
ಗೋದಾವರಿಯಾಗುತ್ತಲಿರುವಳು
ತಾರಕಕ್ಕೇರಿದ ಅಂದಿನ ಹೋರಾಟ
ಸಂಸ್ಕೃತಿಯ ನೆನೆದು ಸಾಗರವಾಗುತ್ತಲಿರುವಳು
ಅದರಲ್ಲಿ ಹುಟ್ಟಿದ ಆದರ್ಶದ ಮುತ್ತುಗಳನ್ನು
ನಾಳೆಯ ಹಿತಕ್ಕಾಗಿ ಭದ್ರಪಡಿಸಬೇಕೆಂದು
ತಪಿಸುತ್ತಲೇ ಇರುವಳು
ಮುಪ್ಪಡರಿದರೂ ಆ ಮುತ್ತುಗಳ ಅಕ್ಷರಗಳಲ್ಲಿ
ಕೋದು ತೃಪ್ತಳಾಗುವಳು." ●


## ಜನಾರೋಗ್ಯ ಕಾಳಜಿಯಿಲ್ಲದ ಔಷಧಿ ನೀತಿ......... ಪುಟ 6 ರಿಂದ

2–3% ಔಷಧಿಗಳು ಮಾತ್ರ.

* ಸರ್ಕಾರ ಪರಿಣಾಮಕಾರಿಯಾಗಿ ನಿಷೇಧ ಪ್ರಕ್ರಿಯೆಯಲ್ಲಿ ಭಾಗವಹಿಸುತ್ತಿಲ್ಲ. ಅದು ಔಷಧಿ ಕಂಪನಿಗಳಿಗೆ ಸಹಾಯಕವಾಗಿದೆ.
* ಇಲ್ಲಿ ನ್ಯಾಯಾಂಗದ ದುರ್ಬಳಕೆಯಾಗಿದೆ. ನ್ಯಾಯಾಂಗಕ್ಕೆ ಅರ್ಜಿ ಸಲ್ಲಿಸಿದಾಗ, ನ್ಯಾಯಾಧೀಶರು ಔಷಧಿ ಬಗ್ಗೆ ಯಾವ ತೀರ್ಮಾನಗಳನ್ನು ತೆಗೆದುಕೊಳ್ಳದೇ ಒಂದು ಸಮಿತಿ ನಿರ್ಮಿಸಿ ಅವರಿಗೆ ಜವಾಬ್ದಾರಿ ನೀಡುತ್ತಾರೆ. ಅವರು ಹಲವಾರು ವರ್ಷದ ನಂತರ ತೀರ್ಮಾನ ಕೊಡುತ್ತಾರೆ. ಅದನ್ನು ನ್ಯಾಯಾಧೀಶರು ಜಾರಿಗೆ ತರುತ್ತಾರೆ. ಆದರೆ ಔಷಧಿ ಕಂಪನಿಗಳು ಅದರ ವಿರುದ್ಧ ತಡೆಯಾಜ್ಞೆ ತರುತ್ತವೆ. ಈ ನಡುವೆ ಔಷಧಿ ಕಂಪನಿಗಳು ಅನಗತ್ಯ ಔಷಧಿ ಮಾರಿ ಲಾಭ ಮಾಡುತ್ತಲೇ ಇರುತ್ತವೆ.
* ಅಗತ್ಯ ಔಷಧಿಗಳು ಯಾವುವೆಂದು ವಿಶ್ವ ಆರೋಗ್ಯ ಸಂಸ್ಥೆ 1977 ರಲ್ಲೇ ಹೇಳಿದೆ. ಅಂಥ ಔಷಧಿಗಳನ್ನು ತಯಾರಿಸಲು ಸರ್ಕಾರ (DTAB) ಮತ್ತೆ ಯಾಕೆ ತಯಾರಾಗಿಲ್ಲ? ಇದರರ್ಥ DTAB ಸರಿಯಾಗಿ ಕೆಲಸ ಮಾಡುತ್ತಿಲ್ಲ. ಅದಕ್ಕೆ ಕಾರಣ DTAB ನಲ್ಲಿ ಔಷಧಿ ಕಂಪನಿಗಳ ಮುಖ್ಯಸ್ಥರೇ ಇದ್ದು ಅವರ ಗುರಿಯೇ ಲಾಭವಾಗಿದೆ!
* ಒಮ್ಮೆ ಔಷಧಿ ತಯಾರಾದರೆ, ಅದನ್ನು ನಿಷೇಧಿಸುವುದು ಅಷ್ಟು ಸುಲಭವಲ್ಲ ಹಾಗೂ ಅದು ತಡವಾಗುತ್ತದೆ. ಅದು ನಿಷೇಧವಾಗುವವರೆಗೂ ಜನರು ಅಪಾಯಕರ ಅನಗತ್ಯ ಔಷಧಿಗಳನ್ನು ಸೇವಿಸಬೇಕಾಗುತ್ತದೆ. ಇದನ್ನು ನ್ಯಾಯಾಧೀಶರು ಸರ್ಕಾರದವರು ಏಕೆ ತಿಳಿದುಕೊಳ್ಳುತ್ತಿಲ್ಲ?
* ಔಷಧಿ ಪಟ್ಟಿ ಮಾಡುವಾಗ ಏಕೆ ಕೇವಲ ಅಗತ್ಯ ಔಷಧಿಗಳನ್ನು ಪಟ್ಟಿ ಮಾಡುವುದಿಲ್ಲ. ಆಗ ನಿಷೇಧಿಸುವ ಅಗತ್ಯವೇ ಇರುವುದಿಲ್ಲ. ಯಾಕೆ ನಿಷೇಧಿಸಲು ಯೋಗ್ಯವಾದ ಔಷಧಿಗಳಿಗೆ ಸರ್ಕಾರ ಪರವಾನಗಿ ನೀಡುತ್ತದೆ? ಯಾಕೆ ವೈದ್ಯ ಸಂಘಟನೆಗಳು ಈ ವಿಷಯದ ಮೇಲೆ, ಜನಪರವಾದ ನಿಲುವಿಗಾಗಿ ಸರ್ಕಾರದ ಮೇಲೆ ಒತ್ತಡ ತರುವುದಿಲ್ಲ? ಯಾಕೆ ನ್ಯಾಯಾಧೀಶರು ಈ ಜನಪರ ವಿಷಯವನ್ನು ಕಡೆಗಣಿಸುತ್ತಾರೆ?

ನಾವು ದಿನನಿತ್ಯ ಅನಗತ್ಯ ವಿಷಯಗಳ ಬಗ್ಗೆ ಚರ್ಚೆ ಮಾಡುತ್ತಿರುತ್ತೇವೆ. ಆದರೆ ಇಂತಹ ಜನಪರವಿಲ್ಲದವರ ಬಗ್ಗೆ ಏಕೆ ಚರ್ಚಿಸುವುದಿಲ್ಲ. ಸರಕಾರದ ಮೇಲೆ ಒತ್ತಡ ತರುವುದಿಲ್ಲ ಹಾಗೂ ಬದಲಾವಣೆ ತರುವುದಿಲ್ಲ? ●

# 3 ವರ್ಷಗಳಲ್ಲಿ ಕಾರ್ಮಿಕರ ಸಂಬಳದ ಪಾಲಿನಲ್ಲಿ 20% ಕಡಿತ ಕಾರ್ಪೊರೇಟ್ ಲಾಭದ ಪಾಲು ಒಂದೂವರೆ ಪಟ್ಟು




2015–16ರಿಂದ 2018–19ರ ಮೊದಲ ತ್ರೈಮಾಸಿಕದ ಅವಧಿಯಲ್ಲಿ ದೊಡ್ಡ ಕಾರ್ಪೊರೇಟ್‌ಗಳಲ್ಲಿ ಉತ್ಪಾದನಾ ಚಟುವಟಿಕೆಗಳಿಂದ ಉತ್ಪನ್ನವಾದ ಮೌಲ್ಯದಲ್ಲಿ ಉದ್ಯಮಿಗಳ ಲಾಭದ ಪಾಲು 31% ದಿಂದ 47.8% ಕ್ಕೆ ಏರಿದೆ. ಆದರೆ ಇದೇ ಅವಧಿಯಲ್ಲಿ ಅದನ್ನು ಉತ್ಪಾದಿಸಿದ ಕಾರ್ಮಿಕರ ಕೂಲಿ–ಸಂಬಳಗಳ ಪಾಲು 31.4%ದಿಂದ 26% ಕ್ಕೆ ಇಳಿದಿದೆ.

ಇದು ಸಿಎಂಐಇ( ಭಾರತೀಯ ಅರ್ಥವ್ಯವಸ್ಥೆಯ ಪರಿವೀಕ್ಷಣಾ ಕೇಂದ್ರ) ನಡೆಸಿದ ಕಂಪನಿಗಳ ಹಣಕಾಸು ವರದಿಗಳ ವಿಶ್ಲೇಷಣೆಗಳಲ್ಲಿ ಕಂಡಿರುವ ಸಂಗತಿ. ಈ ಹಣಕಾಸು ವರದಿಗಳು ಶೇರು ಮಾರುಕಟ್ಟೆಯಲ್ಲಿ ಪಟ್ಟಿಯಾದ ಕಂಪನಿಗಳದ್ದು. ಅಂದರೆ ತಯಾರಿಕಾ ವಲಯದ ದೊಡ್ಡ ಕಾರ್ಪೊರೇಟ್‌ಗಳದ್ದು.

1991ರ ದಶಕದಲ್ಲಿ ನಮ್ಮ ದೇಶದಲ್ಲಿ ನವ–ಉದಾರವಾದಿ ಯುಗ ಆರಂಭವಾದಾಗ ತಯಾರಿಕಾ ವಲಯದಲ್ಲಿ ಉತ್ಪಾದಿಸಿದ ಒಟ್ಟು ಹೊಸ ಮೌಲ್ಯ(ಜಿವಿಎ)ದಲ್ಲಿ ಕೂಲಿ–ಸಂಬಳದ ಪಾಲು 33.1% ಇತ್ತು, ಉದ್ಯಮಿಗಳ ಲಾಭಗಳ ಪಾಲು 17.1% ಇತ್ತು ಎಂಬ ಸಂಗತಿಯತ್ತ ಆರ್ಥಿಕ ತಜ್ಞರು ನಮ್ಮ ಗಮನ ಸೆಳೆಯುತ್ತಾರೆ.(ಮೇಲಿನ ಗ್ರಾಫ್ ನೋಡಿ)

ನವ–ಉದಾರವಾದಿ ಯುಗದಲ್ಲಿ ಸೃಷ್ಟಿಯಾಗುವ ಹೊಸ ಮೌಲ್ಯದಲ್ಲಿ ಲಾಭದ 'ಪಾಲು ಹೆಚ್ಚುವುದು ಮತ್ತು ಕೂಲಿ–ಸಂಬಳದ ಪಾಲು ಇಳಿಯುವುದು ಸಾಮಾನ್ಯ ಸಂಗತಿಯಾಗಿದೆ. ಆದರೆ ಅಚ್ಛೇದಿನ್‌ಗಳಲ್ಲಿ ಇದು ಇನ್ನೂ ತೀವ್ರಗೊಂಡಿದೆ, ಅಂದರೆ ಅಚ್ಛೇ ದಿನ್ ಸರಕಾರದ ಧೋರಣೆಗಳು ಹೆಚ್ಚೆಚ್ಚು ಕಾರ್ಪೊರೇಟ್‌ಗಳ ಪರವಾಗುತ್ತಿದೆ, ಕಾರ್ಮಿಕರಿಗೆ ಇರುವ ಅಲ್ಪಸ್ವಲ್ಪ ರಕ್ಷಣೆಗಳನ್ನೂ ಕಡಿತ ಮಾಡಲಾಗುತ್ತಿದೆ ಎಂಬುದನ್ನು ಈ ವಿಶ್ಲೇಷಣೆ ದೃಢಪಡಿಸುತ್ತಿದೆ.

ಬಿಜೆಪಿ ನೇತೃತ್ವದ ಮೊದಲ ಎನ್‌ಡಿಎ ಸರಕಾರದ ಅವಧಿ ಮುಗಿಯುವ ವೇಳೆಗೆ ಅಂದರೆ 2003–04ರಲ್ಲಿ ಉದ್ಯಮಿಗಳ ಲಾಭದ ಪಾಲು 40.5%ಕ್ಕೆ ಏರಿತು. ಕೂಲಿ–ಸಂಬಳಗಳ ಪಾಲು 27.7% ಕ್ಕೆ ಇಳಿಯಿತು. ಈ ಪ್ರವೃತ್ತಿ ಕಾಂಗ್ರೆಸ್ ನೇತೃತ್ವದ ಯುಪಿಎ ಸರಕಾರದ




ಅಡಿಯಲ್ಲೂ 2008–09ರ ವರೆಗೆ ಮುಂದುವರೆಯಿತು. 2008–09ರಲ್ಲಿ ಇದರಲ್ಲಿ ಸ್ವಲ್ಪ ವ್ಯತ್ಯಾಸವಾಯಿತು ಎಂಬುದು ಈ ಮೇಲಿನ ಗ್ರಾಫ್‌ನಲ್ಲಿ ಕಾಣುತ್ತದೆ. ಇದಕ್ಕೆ ಕಾರಣ ಆ ವರ್ಷ ಜಾಗತಿಕ ಅರ್ಥವ್ಯವಸ್ಥೆ ಕಂಡ ಬಿಕ್ಕಟ್ಟು ಎನ್ನುತ್ತಾರೆ ಆರ್ಥಿಕ ತಜ್ಞರು.

ಅಂದಿನಿಂದ, ವಿಶೇಷವಾಗಿ 2010–11ರಿಂದ ಕಾರ್ಪೊರೆಟ್ ಲಾಭಗಳ ಪಾಲು ತುಸು ಇಳಿಯತೊಡಗಿತು ಎಂಬುದನ್ನೂ ನೋಡಬಹುದು. ಇದು 2015–16 ರವರೆಗೂ ಮುಂದುವರೆದು, ಲಾಭದ ಮತ್ತು ಕೂಲಿ–ಸಂಬಳದ ಪಾಲು ಸುಮಾರಾಗಿ ಒಂದೇ ಮಟ್ಟಕ್ಕೆ ಬಂತು.

ಆದರೆ ನಂತರದ ಮೂರು ವರ್ಷಗಳಲ್ಲಿ ಮತ್ತೆ ಲಾಭದ ಪಾಲು ತ್ವರಿತವಾಗಿ ಏರಲಾರಂಭಿಸಿದೆ, ಕೂಲಿ–ಸಂಬಳದ ಪಾಲು ಅಷ್ಟೇ ತ್ವರಿತವಾಗಿ ಇಳಿಯುತ್ತಿದೆ.

ಸರಕಾರದ ವಾರ್ಷಿಕ ಉದ್ದಿಮೆ ಸರ್ವೆಯ ಪ್ರಕಾರವೂ ನಿವ್ವಳ ಮೌಲ್ಯ ಸೇರ್ಪಡೆ(ಎನ್‌ವಿಎ)ಯಲ್ಲಿ ಕೂಲಿ–ಸಂಬಳದ ಪಾಲು 1990–91ರಿಂದ 2015–16ರ ನಡುವೆ 26%ದಿಂದ 15% ಕ್ಕೆ ಇಳಿಯಿತು. ಈ ಮಾಹಿತಿ ಸುಮಾರು 65ಸಾವಿರ ಕಾರ್ಖಾನೆಗಳಿಂದ ಸಂಗ್ರಹಿಸಿರುವಂತದ್ದು.

# ಆರೆಸ್ಸೆಸ್‌ನಲ್ಲಿ ಗ್ಲಾಸ್‌ನೊಸ್ತ್ ಮತ್ತು ಪೆರಿಸ್ತ್ರೊಯ್ಕಾ?

## ಗೊರ್ಬಚೆವ್, ಪುತಿನ್ ಇರುತ್ತಾರೆಯೇ ಅಥವ ಮೇ 2019 ಮಾತ್ರ!

ಕಳೆದ ವಾರ ದಿಲ್ಲಿಯ ವಿಜ್ಞಾನ ಭವನದಲ್ಲಿ ಆರೆಸ್ಸೆಸ್ ಸರಸಂಘ್‌ಚಾಲಕ್ ಮೂರು ದಿನಗಳ ಉಪನ್ಯಾಸ ಮಾಲೆ ಆರೆಸ್ಸೆಸ್ ಬಗ್ಗೆ ವಿರೋಧಿಗಳು 'ಹರಡಿಸಿದ್ದ' 'ಮಿಥ್ಯೆ'ಗಳನ್ನು ಚಿಂದಿ ಮಾಡಿದೆ ಎಂದು ಕೆಲವರು ಹೇಳಿದರೆ, ಇನ್ನು ಕೆಲವರು ಆರೆಸ್ಸೆಸ್ ಬದಲಾಗುತ್ತಿದೆ ಎಂದು ನಂಬಲು/ನಂಬಿಸಲು ಪ್ರಯತ್ನಿಸಿದ್ದಾರೆ.


ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಅದಕ್ಕೆ ಆರೆಸ್ಸೆಸ್ ಸಾಲವಾಗಿ ಕೊಟ್ಟಿರುವ ರಾಂ ಮಾಧವ್ ಅವರು ಇನ್ನೂ ಮುಂದೆ ಹೋಗಿ ಆರೆಸ್ಸೆಸ್‌ಗೆ ಇದೀಗ 'ಗ್ಲಾಸ್‌ನೊಸ್ತ್ ಗಳಿಗೆ' ಎಂದು ವರ್ಣಿಸಿದ್ದಾರೆ. ಮೂರೂವರೆ ದಶಕಗಳ ಹಿಂದೆ ಆಗಿನ ಸೋವಿಯೆತ್ ಒಕ್ಕೂಟದ ವಿಚಾರ, ಕ್ರಿಯೆಗಳಲ್ಲಿ "ಮುಕ್ತತೆ' ತಂದಂತೆ ಮೋಹನ್ ಭಾಗವತ್ ಅವರ ಉಪನ್ಯಾಸ ಮಾಲೆ ಆರೆಸ್ಸೆಸ್‌ನಲ್ಲಿ ಬಹಳ ಮಹತ್ವದ್ದಾಗಿದೆ ಎನ್ನುತ್ತಾರೆ ಅವರು. ತನ್ನ ಪ್ರಾಮಾಣಿಕತೆಯಿಂದ ಸುಲಲಿತ ನುಡಿಗಳಿಂದ ದಿಲ್ಲಿಯ ಮೇಲ್ವರ್ಗಗಳ ಬುದ್ಧಿಜೀವಿಗಳ ಮನಗೆದ್ದರು, ಅವರಲ್ಲಿ ತಮ್ಮ ಸಂಘಟನೆಯ ಕುರಿತ ಅಭಿಪ್ರಾಯಗಳಲ್ಲಿ ಹೊಸತನವನ್ನು ತಂದರು, ಟೀಕಾಕಾರರ ಬಾಯಿ ಮುಚ್ಚಿಸಿದರು ಎಂದು ರಾಂಮಾಧವ್ ಹೇಳಿದ್ದಾರೆ. ಕಳೆದ ದಶಕದಲ್ಲಿ ಆರೆಸ್ಸೆಸ್‌ನೊಳಗೆ ಒಂದು ಪಲ್ಲಟ ನಡೆದಿದೆ, ಈಗ ಭಾಗವತ್ ಅವರು ಈ ಪಲ್ಲಟವನ್ನು ದೇಶದ ಮುಂದಿಟ್ಟಿದ್ದಾರೆ ಎನ್ನುತ್ತಾರೆ ರಾಂಮಾಧವ್.

ಅವರ ಪ್ರಕಾರ 'ಪಲ್ಲಟ'ದ ಒಂದು ಮಹತ್ವದ ಉದಾಹರಣೆಯೆಂದರೆ "ಮುಸ್ಲಿಮರಿಲ್ಲದೆ ಹೀದೂರಾಷ್ಟ್ರವಿಲ್ಲ" ಎಂಬುದು. ಗೋಲ್ವಾಲ್ಕರ್ ಅವರ ವಿಚಾರಗಳಲ್ಲಿ ಕೆಲವು 'ಕಾಲಬಾಹಿರ'ವಾಗಿವೆ ಎಂದೂ ಅವರು ಒಪ್ಪಿಕೊಂಡರಂತೆ. ಆದ್ದರಿಂದ ಆ ಬಗ್ಗೆ ಟೀಕೆ ಈಗ ಅರ್ಥಹೀನ ಎಂಬುದು ಅವರ ಅಭಿಪ್ರಾಯ. ಇನ್ನೂ ಇಂತಹ ಕೆಲವು ಉದಾಹರಣೆಗಳನ್ನು ಅವರು ನೀಡಿದ್ದಾರೆ.

ರಾಂಮಾಧವ್ ಪ್ರಕಾರ ಈ 'ಪಲ್ಲಟ' ಭಾಗವತ್ ಅವರು ಸರಸಂಘ್‌ಚಾಲಕ್ ಆದಂದಿನಿಂದಲೇ ಆರಂಭವಾಗಿದೆ. ಅಂದರೆ ಅಖ್ಲಾಕ್‌ನ್ನು ಬಡಿದು ಸಾಯಿಸಿದಾಗ ಈ 'ಪಲ್ಲಟ' ಯಾವ ಹಂತದಲ್ಲಿತ್ತು ಎಂದೇನೂ ಅವರು ಹೇಳಿಲ್ಲ. ತಮ್ಮ ನೇರನುಡಿಯಿಂದ ಟೀಕಾಕಾರರನ್ನು ನಿರಸ್ತ್ರರನ್ನಾಗಿ ಮಾಡಿದ್ದಾರೆ ಎನ್ನುತ್ತಾರೆ ರಾಂ ಮಾಧವ್. ಆದರೆ ಆ ನೇರನುಡಿ "ಮುಸ್ಲಿಮರಿಲ್ಲದೆ ಹೀದೂರಾಷ್ಟ್ರವಿಲ್ಲ" ಎಂಬ ಮಾತಿನೊಂದಿಗೆ ಕಳೆದ ನಾಲ್ಕು ವರ್ಷಗಳಲ್ಲಿ ಜನಜಂಗುಳಿ ಬಡಿದು ಸಾಯಿಸಿದ ಅಖ್ಲಾಕ್‌ರಿಂದ ರಕ್ಬರ್‌ಖಾನ್‌ವರೆಗೆ ಎಲ್ಲರಿಗೂ ಶ್ರದ್ಧಾಂಜಲಿಯಲ್ಲದಿದ್ದರೂ, ಪಶ್ಚಾತ್ತಾಪದ ಅಥವ ಕನಿಷ್ಟ ಖೇದದ ಒಂದು ಮಾತಾದರೂ ಇದ್ದಿದ್ದರೆ....! ನಿರಸ್ತ್ರರಾದ ದಿಲ್ಲಿಯ ಬುದ್ಧಿಜೀವಿಗಳು ಈ ಬಗ್ಗೆ ಅವರನ್ನು ಕೇಳಿದಂತಿಲ್ಲ.

ಈ ಸಂಕ್ರಮಣ ಸುಲಭವೇನೂ ಅಲ್ಲ ಎನ್ನುತ್ತಾರೆ ರಾಂಮಾಧವ್. ಟೀಕಾಕರನ್ನೇನೋ ನಿರಸ್ತ್ರರಾಗಿಸಿದರು, ಆದರೆ ಆರೆಸ್ಸೆಸ್‌ನೊಳಗೆ ಅವರ ಹೊಸಚಿಂತನೆ ಬರಲು 'ಪೆರಿಸ್ತ್ರೋಯ್ಕ'ವೇ ಬೇಕಂತೆ. ಜೆಎನ್‌ಯು ಚುನಾವಣೆಯ ನಂತರ ಎಬಿವಿಪಿಯವರ ದಾಂಧಲೆ, ಬನಾರಸ್ ಹಿಂದೂ ವಿಶ್ವವಿದ್ಯಾಲಯದಲ್ಲಿ ಲೈಂಗಿಕ ಕಿರುಕುಳದ ವಿರುದ್ಧ ತಮ್ಮ ಯಶಸ್ವಿ ಹೋರಾಟದ ಆಚರಣೆ ಮಾಡುತ್ತಿದ್ದ ವಿದ್ಯಾರ್ಥಿನಿಯರ ಮೇಲೆ ದೈಹಿಕ ಹಲ್ಲೆಗಳ ಬಗ್ಗೆ ನೇರನುಡಿಗೆ ಈ 'ಪೆರಿಸ್ತ್ರೋಯ್ಕ'ವನ್ನೇ ಕಾಯಬೇಕೇನೋ. ಅಥವ ಮೇ 2019 ಕಳೆದರೆ ಸಾಕೇ?

ಅಂದ ಹಾಗೆ ಈ ಆರೆಸ್ಸೆಸ್ ಗ್ಲಾಸ್‌ನೊಸ್ತ್‌ನಲ್ಲಿ ಗೊರ್ಬಚೆವ್ ಯಾರು, ಪುತಿನ್ ಯಾರು ಎಂಬ ಪ್ರಶ್ನೆ ಒಬ್ಬ ಸಂಪಾದಕರಿಗೆ ಸಹಜವಾಗಿಯೇ ಎದ್ದಿದೆ.



ವ್ಯಂಗ್ಯ ಚಿತ್ರ: ಸತೀಶ್ ಆಚಾರ್ಯ

# ಮಾದರಿ ಗುಜರಾತಿನಿಂದ ಮತ್ತೊಂದು 'ಭಾರತದ ಸುಲಿಗೆ–ಭಾರತದಿಂದ ಪರಾರಿ'

ಈ ವಾರ ಮತ್ತೊಬ್ಬರು ಅಚ್ಛೇದಿನ್ ಚೌಕೀದಾರರ ಕಣ್ಣು ತಪ್ಪಿಸಿ ಭಾರತದಿಂದ ಪರಾರಿಯಾಗಿದ್ದಾರೆ. ಇವರೂ ಅದೇ ಅಚ್ಛೇ ದಿನ್ ಮಾದರಿ ಗುಜರಾತಿನವರು ಎಂಬುದು ಕೇವಲ ಕಾಕತಾಳೀಯವಿರಬಹುದು.

ವಡೋದರಾದಲ್ಲಿರುವ ಸ್ಟೆರ್ಲಿಂಗ್ ಬಯೊಟೆಕ್‌ನ ಮಾಲಕ ನಿತಿನ್ ಸಂದೇಸರಾ ಭಾರತದ ಬ್ಯಾಂಕುಗಳಿಗೆ 5300 ಕೋಟಿ ರೂ.ಗೆ ಪಂಗನಾಮ ಹಾಕಿ ಪರಾರಿಯಾಗಿದ್ದಾರೆ. ಇವರನ್ನು ಕಳೆದ ತಿಂಗಳು ದುಬೈನಲ್ಲಿ ಭಾರತದ ಅಧಿಕಾರಿಗಳು ಬಂಧಿಸಿದ್ದಾರೆ ಎಂಬ ಸುದ್ದಿಯಿತ್ತು. ಆದರೆ ಈಗ ನೈಜೀರಿಯಾಕ್ಕೆ ಓಡಿ ಹೋಗಿರಬಹುದು ಎನ್ನಲಾಗಿದೆ. ಇದರಿಂದಾಗಿ ಆತನನ್ನು ಭಾರತಕ್ಕೆ ಹಿಡಿದು ತರುವುದು ಕಷ್ಟಕರ ಎಂದು ಹೇಳಲಾಗುತ್ತಿದೆ. ಏಕೆಂದರೆ ನೈಜೀರಿಯಾದೊಂದಿಗೆ ಅಪರಾಧಿಗಳನ್ನು ಹಸ್ತಾಂತರ ಮಾಡುವ ಒಪ್ಪಂದ ಇಲ್ಲವಂತೆ.


ಪರಾರಿಯಾಗಿರುವುದು ಈತನೊಬ್ಬನೇ ಅಲ್ಲ. ಆತನ ಸೋದರ ಚೇತನ್ ಸಂದೇಸರಾ, ಅತ್ತಿಗೆ ದೀಪ್ತಿಬೆನ್ ಸಂದೇಸರಾ ಕೂಡ ಪರಾರಿಯಾಗಿದ್ದಾರೆ. ಇವರು ಮೂವರನ್ನೂ, ಜತೆಗೆ ಆಂಧ್ರ ಬ್ಯಾಂಕಿನ ಮಾಜಿ ಡೈರೆಕ್ಟರ್ ಅನೂಪ್ ಗರ್ಗ್ ಮತ್ತಿತರ ಮೂವರೊಂದಿಗೆ ಸಿಬಿಐ 'ಬುಕ್' ಮಾಡಿತ್ತಂತೆ, ಜೂನ್ 2018ರಲ್ಲಿ ಜಾರಿ ನಿರ್ದೇಶನಾಲಯ(ಇಡಿ) ಕೂಡ ಅವರ ಕಂಪನಿ ಆಸ್ತಿಗಳನ್ನು ಸೀಲ್ ಮಾಡಿತ್ತಂತೆ.

ಈ ಬಗ್ಗೆ ಟಿಪ್ಪಣಿ ಮಾಡುತ್ತ ಈಗ ಪ್ರಸಿದ್ಧರಾಗಿರುವ ಎನ್‌ಡಿಟಿವಿ ಆಂಕರ್ ರವೀಶ್ ಕುಮಾರ್ ಪ್ರಧಾನಿಗಳು "ಫ್ಲೀಸ್ ಇಂಡಿಯ, ಫ್ಲೀ ಇಂಡಿಯಾ'("ಭಾರತದ ಸುಲಿಗೆ–ಭಾರತದಿಂದ ಪರಾರಿ") ಎಂಬ ಹೊಸದೊಂದು ಸ್ಕೀಮನ್ನು ಉದ್ಘಾಟಿಸಿದ್ದಾರೆಯೇ ಎಂದು ವ್ಯಂಗ್ಯವಾಡಿದ್ದಾರೆ.

ವ್ಯಂಗ್ಯ ಒತ್ತಟ್ಟಿಗಿರಲಿ. **ಇದರಲ್ಲಿನ ಸಿಬಿಐ ಆಯಾಮವೂ ಕುತೂಹಲಕಾರಿಯಾಗಿದೆ**. ಏಕೆಂದರೆ ಕೇವಲ ಎರಡು ದಿನಗಳ ಮೊದಲು ಸಿಬಿಐ ಮುಖ್ಯಸ್ಥ ಅಲೋಕ್ ವರ್ಮ ತನ್ನದೇ ಸಂಸ್ಥೆಯ ಸ್ಪೆಶಲ್ ಡೈರೆಕ್ಟರ್ ರಾಕೇಶ್ ಆಸ್ತಾನ ಎಂಬವರ ಮೇಲೆ ಆರು ಭ್ರಷ್ಟಾಚಾರದ ಕೇಸುಗಳಿವೆ, ಇವುಗಳ ತನಿಖೆ ಮಾಡುತ್ತಿರುವ ಸಿಬಿಐ ಅಧಿಕಾರಿಗಳನ್ನು ಅವರು ಹೆದರಿಸುತ್ತಿದ್ದಾರೆ ಎಂದು ಆಪಾದಿಸಿದ್ದರು ಎನ್ನಲಾಗಿದೆ(ನ್ಯೂಸ್‌ಲಾಂಡ್ರಿ, ಸಪ್ಟಂಬರ್25). ಅವುಗಳಲ್ಲಿ ಮೊದಲ ಸ್ಥಾನದಲ್ಲಿರುವಂತದ್ದು ಲೇಟೆಸ್ಟ್ ಪರಾರಿ ಸಂದೇಸರಾ ಸೋದರರ ಅದೇ ಸ್ಟೆರ್ಲಿಂಗ್ ಬಯೋಟೆಕ್. ಈ ವಿಶೇಷ ಸಿಬಿಐ ಅಧಿಕಾರಿ ಸಂದೇಸರಾ ಕುಟುಂಬದ ವಿರುದ್ಧ ತೆರಿಗೆ ವಿಚಾರಣೆಗಳ ದಾರಿ ತಪ್ಪಿಸಲು ಕೂಡ ಪ್ರಯತ್ನಿಸಿದ್ದರು ಎಂಬ ಆಪಾದನೆಯೂ ಇದೆ.

**ಇನ್ನೂ ಕುತೂಹಲಕಾರಿ ಸಂಗತಿಯೆಂದರೆ ಈ ಆಸ್ತಾನಾ 1984ರ ಗುಜರಾತ್ ಕೇಡರ್‌ನ ಐಪಿಎಸ್ ಅಧಿಕಾರಿಯಾಗಿದ್ದವರು.** ಮತ್ತು ದೇಶದ ಪ್ರಸಕ್ತ ಬಲಿಷ್ಟ ಜೋಡಿಯ ವಿಶ್ವಾಸ ಪಾತ್ರರು. ಗೋಧ್ರಾಕಾಂಡದ ತನಿಖೆಗೆ ಈಗಿನ ನಮ್ಮ ಪ್ರಧಾನಿಗಳು ಆಗಿನ ಗುಜರಾತ್ ಮುಖ್ಯ ಮಂತ್ರಿಗಳಾಗಿ ರಚಿಸಿದ್ದ ಎಸ್‌ಐಟಿಯ ಮುಖ್ಯಸ್ಥರಾಗಿದ್ದವರು. ಅದರಿಂದಾಗಿಯೇ 2016ರಲ್ಲಿ ಸಿಬಿಐಗೆ ಬಂದವರು ಎನ್ನಲಾಗಿದೆ.

**ಯಾವುದು 100ರ ಗಡಿಯನ್ನು ಮೊದಲು ದಾಟುತ್ತದೆ?**



ವ್ಯಂಗ್ಯಚಿತ್ರ: ಅಜಿತ್ ನೈನನ್, ಟೈಂಸ್ ಆಫ್ ಇಂಡಿಯ

ಅಟಲ್ ಬಿಜೆಪಿಯ ಸರಕಾರ ಮೌನವೀಕ್ಷಕನಂತೆ ಕಂಡರೂ, ಆಳುವ ಪಕ್ಷದ ಅಧ್ಯಕ್ಷರು ಕೊನೆಗೂ 'ಕಳವಳಕಾರಿ' ಎಂದಿರುವ ಪೆಟ್ರೋಲ್–ಡೀಸೆಲ್ ಬೆಲೆಗಳು ಅವರ ಕಳವಳವನ್ನೂ ಲೆಕ್ಕಿಸದೆ ಏರುತ್ತಲೇ ಇವೆ. ಈ ಸಂಚಿಕೆ ಮುದ್ರಣಕ್ಕೆ ಹೋಗುವ ವೇಳೆಗೆ(ಸಪ್ಟಂಬರ್ 28) ಅವರ ಪಕ್ಷದ ಆಳ್ವಿಕೆಯ ಮುಂಬೈಯಲ್ಲಿ ಪೆಟ್ರೋಲ್ ಬೆಲೆ ಲೀಟರಿಗೆ ರೂ.90.57, ಡೀಸೆಲ್‌ಗೆ 79.01ರೂ. ಉಳಿದೆಡೆಗಳಲ್ಲೂ ಇದಕ್ಕಿಂತ ಬಹಳ ಕಡಿಮೆಯೇನೂ ಇಲ್ಲ. ಬೆಂಗಳೂರಿನಲ್ಲಿ ಅನುಕ್ರಮವಾಗಿ 83.88, 74.80 –ರಾಜ್ಯ ಸರಕಾರ ತನ್ನ ಪಾಲಿನ ತೆರಿಗೆ ದರವನ್ನು ತುಸು ಇಳಿಸಿದ್ದರಿಂದಾಗಿ.
ಅದೇ ವೇಳೆಯಲ್ಲಿ ರೂಪಾಯಿ ಮೌಲ್ಯ ಒಂದು ಡಾಲರಿಗೆ 72.60ಕ್ಕೆ ಇಳಿದಿದೆ. –ಸುದ್ದಿ

# ಗಿರಕಿ ಹೊಡೆಯುತ್ತಿರುವ ಭಾರತದ ಅರ್ಥ ವ್ಯವಸ್ಥೆ




**ಅನವಶ್ಯಕ ವಸ್ತುಗಳ ಆಮದು ನಿಯಂತ್ರಣ, ಪೆಟ್ರೋ ಉತ್ಪನ್ನಗಳ ಬೆಲೆ ಇಳಿಕೆ, ಅವುಗಳ ಬಳಕೆಯನ್ನು ಇಳಿಸುವ ಕ್ರಮಗಳು, ಮತ್ತು, ನೇರ ತೆರಿಗೆ ವಿಧಿಸುವ ಕ್ರಮ, ಅದರಲ್ಲೂ ಸಂಪತ್ತು ತೆರಿಗೆ ವಿಧಿಸುವ ಕ್ರಮಗಳ ಸಂಯೋಜನೆಯೇ ಸದ್ಯದಲ್ಲಿ ಗಿರಕಿಹೊಡೆಯುತ್ತಿರುವ ಭಾರತದ ಅರ್ಥ ವ್ಯವಸ್ಥೆಯನ್ನು ಸರಿಪಡಿಸುವ ಸ್ಪಷ್ಟ ದಾರಿ.ಈ ಕ್ರಮಗಳು ನವ-ಉದಾರವಾದದ ದಿಕ್ಕನ್ನು ಧಿಕ್ಕರಿಸಿ ಅದರ ವಿರುದ್ಧ ದಿಕ್ಕಿನಲ್ಲಿ ನಮ್ಮನ್ನು ಕೊಂಡೊಯ್ಯುತ್ತವೆ. ತಮ್ಮ ವಿದೇಶಿ ವಿನಿಮಯದ ಅಗತ್ಯಗಳಿಗಾಗಿ ಕೆಲವು ದೇಶಗಳು ಐಎಂಎಫ್ ಮೊರೆ ಹೋಗಿ ಅದು ಹೇರಿದ "ಮಿತವ್ಯಯ"ಕ್ರಮಗಳ ಕಪಿಮುಷ್ಠಿಯಿಂದ ನರಳುವ ಪರಿಸ್ಥಿತಿಯನ್ನು ತಪ್ಪಿಸಿಕೊಳ್ಳಬೇಕು ಎಂದಾದರೆ, ಈ ಸಂಯೋಜಿತ ಕ್ರಮಗಳನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ.**

**ಪ್ರೊ. ಪ್ರಭಾತ್ ಪಟ್ನಾಯಕ್** **ಅನು: ಕೆ.ಎಂ.ನಾಗರಾಜ್**

ಭಾರತದ ಅರ್ಥ ವ್ಯವಸ್ಥೆ ಗಿರಕಿಹೊಡೆಯುತ್ತಿದೆ. ಆರ್ಥಿಕ ಸಮಸ್ಯೆಗಳ ಬಗ್ಗೆ ಎನ್‌ಡಿಎ ಸರ್ಕಾರದ ಅಜ್ಞಾನದಿಂದ ಈ ಪರಿಸ್ಥಿತಿ ಉಂಟಾಗಿದೆ ಎಂದು ಹೇಳುವಂತಿಲ್ಲ. ನಿಸ್ಸಂದೇಹವಾಗಿಯೂ ಸರ್ಕಾರದ ಕೊಡುಗೆ ಒಂದು ಅಂಶವಾದರೆ, ಅರ್ಥ ವ್ಯವಸ್ಥೆಯು ಸದ್ಯದಲ್ಲಿ ತಿನ್ನುತ್ತಿರುವ ನೋವುಗಳ ಸ್ವರೂಪವು ಸಮಸ್ಯೆಯ ಆಳ-ಅಗಲಗಳನ್ನು ಸೂಚಿಸುತ್ತದೆ. ನವ-ಉದಾರವಾದವೇ ಭಾರತದ ಅರ್ಥ ವ್ಯವಸ್ಥೆಯ ಸಮಸ್ಯೆ. ನವ-ಉದಾರವಾದವು ಅರ್ಥ ವ್ಯವಸ್ಥೆಯನ್ನು ಮುಂದೆ ಹೆಜ್ಜೆ ಇಡಲಾರದ ಸ್ಥಿತಿಗೆ ತಂದು ನಿಲ್ಲಿಸಿದೆ. ನವ-ಉದಾರವಾದಿ ದಿಕ್ಪಥದಿಂದ ಆಚೆ ಸರಿಯುವವರೆಗೂ ಅರ್ಥ ವ್ಯವಸ್ಥೆಯು ತನ್ನ ಸದ್ಯದ ಸಂಕಷ್ಟಗಳಿಂದ ಹೊರಬರಲಾರದು.

ಭಾರತದ ಜಿಡಿಪಿ ಬೆಳವಣಿಗೆಯು ಒಂದು ಯಶೋಗಾಥೆ ಮತ್ತು ಅದು ತನ್ನ ಹೆಗ್ಗಳಿಕೆಯೆಂದು ನವ-ಉದಾರ ಆಳ್ವಿಕೆ ಬಡಾಯಿ ಕೊಚ್ಚಿಕೊಳ್ಳುತ್ತಿತ್ತು. ಭಾರತದ ಯಶೋಗಾಥೆಯು ಚೇನಾದ ರೀತಿಯದ್ದಲ್ಲ. ಭಾರತದ ಈ ಯಶೋಗಾಥೆಯು, ಪದೇ ಪದೇ ಮರುಕಳಿಸುವ ವ್ಯಾಪಾರ ಕೊರತೆ ಮತ್ತು ಚಾಲ್ತಿ ಖಾತೆಯ ಕೊರತೆಗಳ ಉಸುಬಿನ ಮೇಲೆ ಕಟ್ಟಿದ್ದಾಗಿತ್ತು. ಇತ್ತೀಚಿನ ವರ್ಷಗಳಲ್ಲಿ ಸಾಕಷ್ಟು ಪ್ರಮಾಣದಲ್ಲಿ ಒಳಹರಿಯುತ್ತಿದ್ದ ಬಂಡವಾಳವು ವ್ಯಾಪಾರ ಕೊರತೆಯನ್ನು ನೀಗಿಸಿದ್ದೇ ಅಲ್ಲದೆ ನಮ್ಮ ವಿದೇಶಿ ವಿನಿಮಯ ಮೀಸಲು ಸಂಗ್ರಹವೂ ಸಾಕಷ್ಟು ಉಬ್ಬಲು ಕಾರಣವಾಗಿತ್ತು. ಭಾರತದಲ್ಲಿದ್ದ ಉನ್ನತ ಮಟ್ಟದ ಬಡ್ಡಿದರಗಳು ವಿದೇಶಿ ಬಂಡವಾಳ ಈ ಪ್ರಮಾಣದಲ್ಲಿ ಒಳಹರಿಯಲು ಕಾರಣವಾಗಿದ್ದವು. ಅದೇ ಸಮಯದಲ್ಲಿ, 2008ರ ಆರ್ಥಿಕ ಮುಗ್ಗಟ್ಟಿನ ನಂತರ, ಅರ್ಥ ವ್ಯವಸ್ಥೆಯನ್ನು ಉತ್ತೇಜಿಸುವ ಸಲುವಾಗಿ ಅಮೇರಿಕಾ ತನ್ನ ಬಡ್ಡಿ ದರಗಳನ್ನು 0% ಮಟ್ಟದಲ್ಲಿಟ್ಟಿತ್ತು.

ಆದರೆ, ಈಗ, ಅಮೇರಿಕಾದಲ್ಲಿ ಬಡ್ಡಿ ದರಗಳು ಏರುಗತಿಯಲ್ಲಿರುವ ಕಾರಣದಿಂದ ಮತ್ತು ಅಲ್ಲಿ ಟ್ರಂಪ್ ಅನುಸರಿಸುತ್ತಿರುವ ರಕ್ಷಣಾತ್ಮಕ ಕ್ರಮಗಳಿಂದಾಗಿ ನವ-ಉದಾರವಾದದ ಭವಿಷ್ಯವೇ ಅನಿಶ್ಚಿತವಾಗಿರುವುದರಿಂದ, ಪ್ರಪಂಚದ ಎಲ್ಲೆಡೆ ಸಂಚರಿಸುತ್ತಿದ್ದ ಹಣಕಾಸು ಬಂಡವಾಳವು ತನ್ನ ಮೂಲ ಸ್ಥಾನ ಅಮೇರಿಕಾಗೆ ಮರಳುತ್ತಿದೆ, ಸುರಕ್ಷತೆಯ ದೃಷ್ಟಿಯಿಂದ. ಈ ಎರಡು ಕಾರಣಗಳಿಂದಾಗಿ, ಡಾಲರ್ ಮೌಲ್ಯ ವೃದ್ಧಿಸುತ್ತಿದೆ. ಅದರಲ್ಲೂ ವಿಶೇಷವಾಗಿ ರೂಪಾಯಿಯ ಎದುರು ವಿಪರೀತ ಎನ್ನುವಷ್ಟು. ರೂಪಾಯಿಯ ಇಳಿಕೆಯು ಮುಂಬರುವ ದಿನಗಳಲ್ಲಿ ತನ್ನ ಹಿಂದಿನ ಪರಿಸ್ಥಿತಿಗೆ ಮರಳುತ್ತದೆ ಎಂದು ಊಹಿಸುವಂತೆಯೂ ಇಲ್ಲ. ಹಾಗಾಗಿಯೇ, ರೂಪಾಯಿಯ ಇಳಿಕೆ ತಡೆಯುವ ಮತ್ತು ಬಂಡವಾಳ ಆಕರ್ಷಿಸುವ ಸಲುವಾಗಿ ಅರುಣ್ ಜೇಟ್ಲಿಯವರು ಸೆಪ್ಟೆಂಬರ್ ಹದಿನಾಲ್ಕರಂದು ಕೆಲವು ಕ್ರಮಗಳನ್ನು ಘೋಷಿಸಿದ್ದಾರೆ. ಅಷ್ಟಾಗಿಯೂ, ರೂಪಾಯಿಯ ಇಳಿಕೆ ನಿಂತಿಲ್ಲ.

ರೂಪಾಯಿ ಮೌಲ್ಯದ ಇಳಿಕೆಯಿಂದಾಗಿ ಆಮದುಗಳು ತುಟ್ಟಿಯಾಗುತ್ತವೆ. ಬಹಳ ಮುಖ್ಯವಾಗಿ, ಕಚ್ಚಾ ತೈಲದ ಬೆಲೆ ಏರಿಕೆಯಾಗುತ್ತದೆ. ಈ ಏರಿಕೆಯನ್ನು ಜನತೆಗೆ ವರ್ಗಾಯಿಸಲಾಗುತ್ತದೆ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಚಿಲ್ಲರೆ ಬೆಲೆ ಏರಿಸುವ ಮೂಲಕ. ತೈಲ ರಫ್ತು ದೇಶಗಳ ಒಕ್ಕೂಟವು ತೈಲ ಬೆಲೆ ಏರಿಸುವ ತೀರ್ಮಾನ ಕೈಗೊಂಡಿರುವುದರಿಂದ ಮತ್ತು ರೂಪಾಯಿ ಇಳಿಯುತ್ತಿರುವುದರಿಂದ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಬೆಲೆಗಳು ಏರಿವೆ, ತಲೆಸುತ್ತುಬರುವಷ್ಟು ಮಟ್ಟಕ್ಕೆ. ದಿನೇ ದಿನೇ ಏರುತ್ತಲೇ ಇವೆ. ಹಾಗಾಗಿ, ನವ-ಉದಾರವಾದಿ ಆಳ್ವಿಕೆಯಲ್ಲಿ, ರೂಪಾಯಿ ವಿನಿಮಯ ದರ-ಅಪಮೌಲ್ಯ ಮತ್ತು ಬೆಲೆ ಏರಿಕೆ ಸಮಸ್ಯೆಗಳಿಂದ ಜನತೆಗೆ ಬಿಡುಗಡೆಯೇ ಇಲ್ಲ. ಆದ್ದರಿಂದ, ಈ ನಿಟ್ಟಿನಲ್ಲಿ, ಅರುಣ್ ಜೇಟ್ಲಿಯವರು ಯೋಚಿಸಬಹುದಾದ ಒಂದೇ ಒಂದು ಕ್ರಮವೆಂದರೆ ಹೆಚ್ಚು ಬಂಡವಾಳ ಆಕರ್ಷಿಸುವ ಮಾರ್ಗ, ರೂಪಾಯಿಯ ಇಳಿಕೆ ತಡೆಯುವ ಸಲುವಾಗಿ. ಅಮೇರಿಕಾದಲ್ಲಿ ಬಡ್ಡಿ ದರಗಳು ಏರುತ್ತಿರುವುದು ಮತ್ತು ಟ್ರಂಪ್ ಅನುಸರಿಸುತ್ತಿರುವ ರಕ್ಷಣಾತ್ಮಕ ಕ್ರಮಗಳ ಪರಿಣಾಮವಾಗಿ ನವ-ಉದಾರವಾದದ ಭವಿಷ್ಯವೇ ಅನಿಶ್ಚಿತವಾಗಿರುವ ಪರಿಸ್ಥಿತಿಯಲ್ಲಿ, ಬಂಡವಾಳ ಸೆಳೆಯುವುದು ಬಹಳ ಕಷ್ಟಕರವಾಗಿದೆ. ಒಂದು ವೇಳೆ, ಸಾಕಷ್ಟು ಬಂಡವಾಳ ಒಳಹರಿದರೂ ಅದು ಕೇವಲ ತಾತ್ಕಾಲಿಕ ಪರಿಹಾರವಷ್ಟೇ.

ಆರ್ಥಿಕ ವಿಷಯ ವ್ಯವಹಾರಗಳ ಬಗ್ಗೆ ಎನ್‌ಡಿಎ ಸರ್ಕಾರದ ನಿರ್ವಹಣೆ ಅದಕ್ಷತೆಯಿಂದ ಕೂಡಿದೆ ಎಂದು ಮನಮೋಹನ್ ಸಿಂಗ್ ಮತ್ತು ಚಿದಂಬರಂ ಎನ್‌ಡಿಎ ಮೇಲೆ ಮಾಡುವ ದಾಳಿಯನ್ನು ಅಲ್ಲಗಳೆಯುವಂತಿಲ್ಲ. ಆದರೆ, ಈ ಬಗ್ಗೆ ಉತ್ತಮ ಎಂದು ಹೇಳಬಹುದಾದ ಯಾವ ವಿಚಾರಗಳೂ ಅವರ ಬಳಿಯೂ ಇಲ್ಲ. ಹೆಚ್ಚೆಂದರೆ, ಅವರು ಬಡ್ಡಿ ದರಗಳನ್ನು ಇನ್ನೂ ಕೊಂಚ ಏರಿಸಿ, ಇನ್ನೊಂದಿಷ್ಟು ಬಂಡವಾಳ ಒಳಹರಿಯುವಂತೆ ಮಾಡಬಹುದೇನೋ. ಅದು ಬಣ್ಣ ಹಚ್ಚಿ ಬಿರುಕು ಮುಚ್ಚುವ ತೇಪೆ ಕೆಲಸವಾಗುತ್ತದೆ ಮಾತ್ರವಲ್ಲ, ನಿರುದ್ಯೋಗದ ಹೆಚ್ಚಳ ಮತ್ತು ಕಿರು ಉತ್ಪಾದಕರಿಗೆ ಹೆಚ್ಚಿನ ಹಾನಿಗಳಿಗೂ ಕಾರಣವಾಗುತ್ತದೆ.

ಪೆಟ್ರೋಲ್ ಮತ್ತು ಡೀಸೆಲ್ ಚಿಲ್ಲರೆ ಬೆಲೆಗಳು ಮುಗಿಲು ಮುಟ್ಟುತ್ತಿವೆ. ಅದರಿಂದಾಗಿ, ಎಲ್ಲಾ ಸರಕು-ಸಾಮಗ್ರಿಗಳ ಸಾಗಣೆ ವೆಚ್ಚ ಹೆಚ್ಚುತ್ತದೆ. ಹಾಗಾಗಿ, ಎಲ್ಲಾ ಸರಕು-ಸಾಮಗ್ರಿಗಳ ಬೆಲೆ ಏರುತ್ತದೆ. ಈ ಬೆಲೆ ಏರಿಕೆಯ ಹೊರೆಯನ್ನು ಕಡು ಬಡವರೂ ಹೊರುತ್ತಾರೆ. ಆದ್ದರಿಂದ, ಬೆಲೆ ಏರಿಕೆಯ ಹೊರೆಯಿಂದ ಜನತೆಗೆ ಸ್ವಲ್ಪ ಪರಿಹಾರ ಒದಗಿಸುವ ಒಂದು ಮಾರ್ಗವೆಂದರೆ, ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ತೆರಿಗೆಗಳನ್ನು ಇಳಿಸುವುದು. ಕೆಲವು ರಾಜ್ಯ ಸರ್ಕಾರಗಳು ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ತೆರಿಗೆಗಳನ್ನು ಈಗಾಗಲೇ ಇಳಿಸಿವೆ. ಪೆಟ್ರೋಲ್ ಮತ್ತು ಡೀಸೆಲ್‌ಗಳ ಮೇಲಿನ ತೆರಿಗೆಯನ್ನು ಮೊದಲು ಇಳಿಸಿದ್ದು ಕೇರಳ, ಇತ್ತೀಚಿನದು ಕರ್ನಾಟಕ. ಇನ್ನೂ ಎಷ್ಟರಮಟ್ಟಿಗೆ ಈ ಪರಿಹಾರ ಒದಗಿಸಬಹುದು ಎಂಬುದಕ್ಕೆ ಕೆಲವು ಮಿತಿಗಳಿವೆ, ಎರಡು ಕಾರಣಗಳಿಂದಾಗಿ. ಈ ಕಾರಣಗಳು ನವ-ಉದಾರವಾದದ ಆಳ್ವಿಕೆಗೆ ಸಂಬಂಧಿಸಿವೆ.

ಮೊದಲನೆಯದು, ಪರೋಕ್ಷ ತೆರಿಗೆಗಳ ಮೇಲೆ ನಮ್ಮ ಅವಲಂಬನೆ ಅತಿಯಾಗಿದೆ ಮತ್ತು ನಾವು ನೇರ ತೆರಿಗೆ ವಿಧಿಸುವುದನ್ನು ಕೈಬಿಟ್ಟಿದ್ದೇವೆ, ಹೂಡಿಕೆದಾರರ ವಿಶ್ವಾಸ ಉಳಿಸಿಕೊಳ್ಳುವ ಒತ್ತಡದಲ್ಲಿ. ಹೂಡಿಕೆ ಪ್ರಾಶಸ್ತ್ಯ ಪಡೆದಿದೆ ಏಕೆಂದರೆ, ಸಾಕಷ್ಟು ಪ್ರಮಾಣದಲ್ಲಿ ಒಳಹರಿಯುವ ಬಂಡವಾಳವು ನಮ್ಮ ಪಾವತಿ ಶೇಷದ (ವಿದೇಶಿ ವ್ಯಾಪಾರದ ಬಾಕಿ) ಪರಿಸ್ಥಿತಿ ತಲೆಕೆಳಗಾಗದಂತೆ ನೋಡಿಕೊಳ್ಳುತ್ತದೆ ಎಂಬ ಕಾರಣದಿಂದ. ಎರಡನೆಯದು, ಸರಕು ಮತ್ತು ಸೇವಾ ತೆರಿಗೆಯತ್ತ ಸಾಗಿದ ನಮ್ಮ ಅನರ್ಥಕಾರಿ ನಡೆ. ನವ-ಉದಾರವಾದವನ್ನು ಸಂಪ್ರೀತಗೊಳಿಸಲು ಕೈಗೊಂಡಿರುವ ಈ ಕ್ರಮವು ಸರ್ಕಾರದ ಆದಾಯಗಳ ಮೇಲೆ ಪ್ರತಿಕೂಲ ಪರಿಣಾಮ ಬೀರಿದೆ.

ಈ ಕಾರಣಗಳಿಂದ ದೇಶವು ಅಡ್ಡಪರಿಣಾಮಗಳನ್ನು ಈಗಾಗಲೇ ಅನುಭವಿಸುತ್ತಿರುವುದರಿಂದ, ಈಗಿರುವ ಮಟ್ಟದಲ್ಲೇ ಆದಾಯಗಳನ್ನು ಉಳಿಸಿಕೊಳ್ಳುವ ಅನಿವಾರ್ಯತೆಯಲ್ಲಿ ಸರ್ಕಾರವಿರುವಾಗ, ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಇಳಿಸುವುದು ಕಷ್ಟದ ಕೆಲಸವಾಗುತ್ತದೆ (ನೇರ ತೆರಿಗೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ವಿಧಿಸದ ಹೊರತು). ಕೆಲವು ರಾಜ್ಯಗಳು ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ತೆರಿಗೆ ಇಳಿಸಲು ಸಾಧ್ಯವಾಗಿರುವುದು, ಪೆಟ್ರೋಲಿಯಂ ಉತ್ಪನ್ನಗಳು ಜಿಎಸ್‌ಟಿ ವ್ಯಾಪ್ತಿಯ ಹೊರಗಿರುವ ಒಂದೇ ಕಾರಣದಿಂದಾಗಿ. ಆದ್ದರಿಂದ, ರಾಜ್ಯ ಸರ್ಕಾರಗಳು ಒಂದು ಮಟ್ಟದಿಂದ ಆಚೆಗೆ ಈ ತೆರಿಗೆಗಳನ್ನು ಇಳಿಸಲಾರವು, ಬೇರೆ ವಿಧಾನಗಳ ಮೂಲಕ ತಮ್ಮ ಆದಾಯಗಳನ್ನು ಹೆಚ್ಚಿಸಿಕೊಳ್ಳದ ಹೊರತು. (ರಾಜ್ಯ ಸರ್ಕಾರಗಳಿಗೆ ಮೊದಲು ಲಭ್ಯವಿದ್ದ ಇಂತಹ ಅನೇಕ ವಿಧಾನಗಳು ಈಗ ಇಲ್ಲವಾಗಿವೆ, ಜಿಎಸ್‌ಟಿ ಜಾರಿಯಿಂದಾಗಿ).

ಸದ್ಯದ ಆರ್ಥಿಕ ದು:ಸ್ಥಿತಿಯಿಂದ ಹೊರಬರುವ ದಾರಿ ಸ್ಪಷ್ಟವಾಗಿಯೇ ಇದೆ. ಆದರೆ, ನವ-ಉದಾರವಾದದ ಕಣ್ಣಡೆ ಹಾಕಿಕೊಂಡವರಿಗೆ ಅದು ಕಾಣುತ್ತಿಲ್ಲ. ಒಳ ಹರಿಯುವ ಬಂಡವಾಳದ ಪ್ರಮಾಣವು ಚಾಲ್ತಿ ಖಾತೆಯ ಕೊರತೆಯನ್ನು ಸರಿದೂಗಿಸಲು ಸಾಕಾಗುವುದಿಲ್ಲ. ಆದರೆ, ರೂಪಾಯಿ ಸತತವಾಗಿ ಇಳಿಯುತ್ತಲೇ ಇರುವ ಕಾರಣದಿಂದ, ಚಾಲ್ತಿ ಖಾತೆಯ ಕೊರತೆಯನ್ನು ತುರ್ತಾಗಿ ತಗ್ಗಿಸಲೇಬೇಕಾಗುತ್ತದೆ. ಹಾಗಾಗಿ, ಅನಗತ್ಯ ಆಮದುಗಳನ್ನು ನೇರವಾಗಿ ನಿರ್ಬಂಧಿಸುವ ಮೂಲಕವೇ ಈ ಕೊರತೆಯನ್ನು ತಗ್ಗಿಸಬೇಕಾಗುತ್ತದೆ.

2013ರಲ್ಲಿ, ರೂಪಾಯಿ ಇಳಿಕೆಯನ್ನು ತಡೆಗಟ್ಟಲು ಬಂಗಾರದ ಆಮದನ್ನು ನಿಯಂತ್ರಿಸಲಾಗಿತ್ತು. ರೂಪಾಯಿ ಇಳಿದ ಕಾರಣದಿಂದ ಆಗ ಹಣವಂತರ ಹೂಡಿಕೆ ಬಂಗಾರದತ್ತ ಹೊರಳಿತ್ತು. ಅದರಿಂದಾಗಿ, ಬಂಗಾರದ ಮೇಲಿನ ಬೇಡಿಕೆ ಹೆಚ್ಚಿತ್ತು. ಆ ಪರಿಸ್ಥಿತಿಯಲ್ಲಿ, ಬಂಗಾರದ ಆಮದಿನ ಮೇಲೆ ಹೇರಿದ ನೇರ ನಿಯಂತ್ರಣವು ವ್ಯಾಪಾರದ ಕೊರತೆ ನಿಭಾಯಿಸುವಲ್ಲಿ ಮತ್ತು ರೂಪಾಯಿ ಇಳಿಕೆಯನ್ನು ತಡೆಯುವಲ್ಲಿ ಮಹತ್ವದ ಪಾತ್ರ ವಹಿಸಿತ್ತು. ಆದರೆ, ಈಗ ಆಮದುಗಳ ಮೇಲೆ ಹೇರುವ ನಿಯಂತ್ರಣದ ವ್ಯಾಪ್ತಿ ವಿಶಾಲವಾಗಿರಬೇಕಾಗುತ್ತದೆ. ಬೇರೆ ದಾರಿಯೇ ಇಲ್ಲ. ಆಮದು ನಿಯಂತ್ರಣ ಮತ್ತು ರಿಸರ್ವ್ ಬ್ಯಾಂಕ್ ಬಳಿ ಇರುವ ವಿದೇಶಿ ವಿನಿಮಯ ಸಂಗ್ರಹವನ್ನು ಬಳಸಿಕೊಂಡು ತಕ್ಷಣವೇ ರೂಪಾಯಿಯನ್ನು ಸ್ಥಿರಗೊಳಿಸಬೇಕು.

ಪೆಟ್ರೋ ಉತ್ಪನ್ನಗಳ ಬೆಲೆಗಳನ್ನು ಸ್ಥಿರಗೊಳಿಸಲು, ಜಾಗತಿಕ ಮಾರುಕಟ್ಟೆಗಳು ವಾಲುತ್ತಿರುವ ದಿಕ್ಕನ್ನು ಗಮನಿಸಿದರೆ, ಇದಿಷ್ಟೇ ಕ್ರಮ ಸಾಕಾಗುವುದಿಲ್ಲ. ಪೆಟ್ರೋ ಉತ್ಪನ್ನಗಳ ಬೆಲೆಗಳನ್ನು ಸ್ಥಿರಗೊಳಿಸುವುದಷ್ಟೇ ಅಲ್ಲ, ಅವು ಎಲ್ಲಾ ವಸ್ತುಗಳ ಬೆಲೆ ಏರಲು ಕಾರಣವಾಗುವುದರಿಂದ, ಪೆಟ್ರೋ ಉತ್ಪನ್ನಗಳ ಬೆಲೆಗಳನ್ನು ಇಳಿಸಬೇಕಾಗುತ್ತದೆ. ಅವುಗಳ ಮೇಲಿನ ತೆರಿಗೆಗಳನ್ನು ಗಮನಾರ್ಹವಾಗಿ ಕಡಿತಗೊಳಿಸುವ ಮೂಲಕ ಪೆಟ್ರೋಲಿಯಂ ಉತ್ಪನ್ನಗಳ ಚಿಲ್ಲರೆ ಬೆಲೆಗಳನ್ನು ಇಳಿಸಬಹುದು. ಅದರಿಂದಾದ ಆದಾಯದ ಕೊರತೆಯನ್ನು ನೇರ ತೆರಿಗೆಗಳನ್ನು ವಿಧಿಸುವ ಮೂಲಕ, ಮುಖ್ಯವಾಗಿ ಸಂಪತ್ತು ತೆರಿಗೆ ವಿಧಿಸುವ ಮೂಲಕ, ತುಂಬಿಸಿಕೊಳ್ಳಬಹುದು.

ಸಾರ್ವಜನಿಕ ವೆಚ್ಚಗಳಿಗೆ ಹಣ ಕ್ರೋಢೀಕರಿಸುವ ಅತ್ಯುತ್ತಮ ಮಾರ್ಗವೆಂದರೆ, ಸಂಪತ್ತಿನ ಮೇಲೆ ತೆರಿಗೆ ವಿಧಿಸುವುದು. ಸಂಪತ್ತು ತೆರಿಗೆಯು, ಹೂಡಿಕೆಯ ಉತ್ತೇಜನದ ಮೇಲೆ ಯಾವುದೇ ಅಡ್ಡ ಪರಿಣಾಮ ಬೀರುವುದಿಲ್ಲ. ಏಕೆಂದರೆ, ಎಲ್ಲ ರೀತಿಯ ಸಂಪತ್ತಿನ ಮೇಲೆ ತಾರತಮ್ಯವಿಲ್ಲದೆ ತೆರಿಗೆ ವಿಧಿಸುವುದರಿಂದ, ಸಂಪತ್ತು ಉತ್ಪಾದಕ ಆಸ್ತಿಗಳ ರೂಪದಲ್ಲಿದ್ದಾಗ ಅದಕ್ಕೆ ಯಾವುದೇ ನಿರುತ್ತೇಜನವಿರುವುದಿಲ್ಲ. ಜೊತೆಗೆ, ಸಂಪತ್ತು ತೆರಿಗೆಯು, ಸಮಾಜದಲ್ಲಿರುವ ಸಂಪತ್ತಿನ ಅಸಮತೆಗಳನ್ನು ತಡೆಯುವಲ್ಲಿ ಪರಿಣಾಮ ಬೀರುತ್ತದೆ. ಪ್ರಜಾಪ್ರಭುತ್ವದ ಆಚರಣೆಗೆ ಇದೊಂದು ಪಾಲಿಸಬೇಕಾದ ಪೂರ್ವಶರತ್ತು ಎಂಬುನ್ನು ಎಲ್ಲರೂ ಒಪ್ಪುತ್ತಾರೆ.

ದೇಶದಲ್ಲಿ ಸಂಪತ್ತಿನ ಅಸಮತೆಗಳು ಇತ್ತೀಚೆಗೆ ವೇಗವಾಗಿ ಮತ್ತು ತೀವ್ರವಾಗಿ ಏರುತ್ತಿರುವ ಸಂರ್ಭದಲ್ಲಿ, ಸಂಪತ್ತಿನ ಮೇಲೆ ತೆರಿಗೆಯೇ ಇಲ್ಲದಿರುವುದು ಆಘಾತಕಾರಿಯಾಗಿದೆ. ಪೆಟ್ರೋಲಿಯಂ ಉತ್ಪನ್ನಗಳ ಮೇಲಿನ ಪರೋಕ್ಷ ತೆರಿಗೆಗಳಿಗೆ ಬದಲಾಗಿ ಶ್ರೀಮಂತರ ಮೇಲೆ ನೇರ ತೆರಿಗೆ ವಿಧಿಸುವ ಕ್ರಮವು ಒಂದೇ ಕಲ್ಲಿನಲ್ಲಿ ಎರಡು ಹಕ್ಕಿಗಳನ್ನು ಕೊಲ್ಲುತ್ತದೆ: ಏರುತ್ತಾ ಹೋಗುವ ಪೆಟ್ರೋಲಿಯಂ ಬೆಲೆಗಳು ಉಂಟುಮಾಡುವ ಹಣದುಬ್ಬರವು ಜನತೆಯನ್ನು ಹಿಂಡಿ ಹಿಪ್ಪೆಮಾಡುವುದನ್ನು ತಡೆಯುತ್ತದೆ ಮತ್ತು ಅದೇ ಸಮಯದಲ್ಲಿ ಸಂಪತ್ತಿನ ಸಮಾನತೆ ಸಾಧಿಸುವ ನಿಟ್ಟಿನಲ್ಲಿ ಸಮಾಜ ಸಾಗುವುದು ಅಪೇಕ್ಷಣೀಯವೂ ಆಗುತ್ತದೆ.

ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳು ಕೈಗೆಟುವ (ಕೆಳ) ಮಟ್ಟದಲ್ಲಿದ್ದರೆ ಅವುಗಳ ಬಳಕೆಗೆ ಉತ್ತೇಜನ ಕೊಟ್ಟಂತಾಗುತ್ತದೆ. ಮತ್ತು, ಜಾಗತಿಕ ಮಾರುಕಟ್ಟೆಗಳ ಪ್ರವೃತ್ತಿಯ ಹಿನ್ನೆಲೆಯಲ್ಲಿ ನಮ್ಮ ಪೆಟ್ರೋಲಿಯಂ ಆಮದುಗಳು ಹಿಗ್ಗಿ ರೂಪಾಯಿ ಮತ್ತೊಮ್ಮೆ ಒತ್ತಡಕ್ಕೆ ಒಳಗಾಗುತ್ತದೆ ಎಂಬುದಾಗಿ ವಾದಿಸಬಹುದು. ಆದರೆ, ಆಮದು ನಿಯಂತ್ರಣಗಳ ಜೊತೆಯಲ್ಲಿ, ಮತ್ತು, ಪೆಟ್ರೋಲಿಯಂ ಉತ್ಪನ್ನಗಳ ಬೆಲೆಗಳನ್ನು ಇಳಿಸಿದಾಗ, ಅವುಗಳ ಬಳಕೆಯನ್ನು ನೇರವಾಗಿ ನಿಯಂತ್ರಿಸುವ ಕೆಲಸವನ್ನು ಸರ್ಕಾರ ಮಾಡಬೇಕಾಗುತ್ತದೆ. ಸರ್ಕಾರದ ಬಳಕೆಯೇ ಎಲ್ಲರಿಗಿಂತ ಹೆಚ್ಚಾಗಿರುವುದರಿಂದ, ಮುಖ್ಯವಾಗಿ ರಕ್ಷಣಾ ವಲಯದ ಬಳಕೆ ದೊಡ್ಡ ಪ್ರಮಾಣದಲ್ಲಿರುವುದರಿಂದ, ಪೆಟ್ರೋಲಿಯಂ ಉತ್ಪನ್ನಗಳ ಬಳಕೆಗೆ ಸಂಬಂಧಿಸಿ ಸರ್ಕಾರವು ಕೆಲವು ನಿರ್ದೇಶನಗಳನ್ನು ಜಾರಿ ಮಾಡಬೇಕಾಗುತ್ತದೆ. ಇನ್ನು, ಸಾರ್ವಜನಿಕರು ಬಳಸುವ ಪೆಟ್ರೋಲಿಯಂ ಉತ್ಪನ್ನಗಳನ್ನು ಪಡಿತರಗೊಳಿಸಬಹುದು.

ಪರಿಸರ ಮಾಲಿನ್ಯ ತಡೆಯಲು ಇಂತಹ ಅನೇಕ ಕ್ರಮಗಳನ್ನು ಪ್ರತಿಪಾದಿಸಲಾಗಿದೆ ಮತ್ತು ಜಾರಿಗೊಳಿಸಿಯೂ ಆಗಿದೆ. ಉದಾಹರಣೆಗೆ, ಡೆಲ್ಲಿಯಲ್ಲಿ ಜಾರಿಗೊಳಿಸಿದ "ಸರಿ-ಬೆಸ" ಸ್ಕೀಂ ಸಹ ಒಂದು ರೀತಿಯ ಪಡಿತರವೇ. ಕೆಲವು ದೇಶಗಳಲ್ಲಿ, ಜನಸಂದಣಿ ಹೆಚ್ಚುವ ಅವಧಿಯಲ್ಲಿ ವಾಹನ ದಟ್ಟಣೆ ತಪ್ಪಿಸಲು ಒಂದು ಕಾರಿನಲ್ಲಿ ಪ್ರಯಾಣಿಸುವ ಕನಿಷ್ಠ ಸಂಖ್ಯೆಯನ್ನು ನಿಗದಿಪಡಿಸಲಾಗಿದೆ. ಇಂತಹ ಕ್ರಮಗಳು ಪೆಟ್ರೋಲಿಯಂ ಉತ್ಪನ್ನಗಳ ಬಳಕೆಯನ್ನು ನೇರವಾಗಿ ನಿಯಂತ್ರಿಸುತ್ತವೆ. ಇದನ್ನೇ ಬೇರೆ ರೀತಿಯಲ್ಲಿ ಹೇಳುವುದಾದರೆ, ಪೆಟ್ರೋಲಿಯಂ ಉತ್ಪನ್ನಗಳ ಪಡಿತರವು ಒಂದೇ ಕಲ್ಲಿನಲ್ಲಿ ಅನೇಕ ಹಕ್ಕಿಗಳನ್ನು ಕೊಲ್ಲುತ್ತದೆ: ರಸ್ತೆಯ ಮೇಲಿನ ವಾಹನ ದಟ್ಟಣೆ ಇಳಿಯುತ್ತದೆ; ಪರಿಸರ ಮಾಲಿನ್ಯ ತಗ್ಗುತ್ತದೆ; ಪೆಟ್ರೋಲಿಯಂ ಬಳಕೆ ಇಳಿಯುವುದರಿಂದ ನಮ್ಮ ವ್ಯಾಪಾರದ ಶಿಲ್ಕು ಚುಕ್ತಾ ಮಾಡುವಲ್ಲಿ ಪ್ರಯೋಜನಕಾರಿ ಪರಿಣಾಮ ಬೀರುತ್ತದೆ.

ಅನವಶ್ಯಕ ವಸ್ತುಗಳ ಆಮದು ನಿಯಂತ್ರಣ, ಪೆಟ್ರೋ ಉತ್ಪನ್ನಗಳ ಬೆಲೆ ಇಳಿಕೆ, ಅವುಗಳ ಬಳಕೆಯನ್ನು ಇಳಿಸುವ ಕ್ರಮಗಳು, ಮತ್ತು, ನೇರ ತೆರಿಗೆ ವಿಧಿಸುವ ಕ್ರಮ, ಅದರಲ್ಲೂ ಸಂಪತ್ತು ತೆರಿಗೆ ವಿಧಿಸುವ ಕ್ರಮಗಳ ಸಂಯೋಜನೆಯೇ ಸದ್ಯದಲ್ಲಿ ಗಿರಕಿಹೊಡೆಯುತ್ತಿರುವ ಭಾರತದ ಅರ್ಥ ವ್ಯವಸ್ಥೆಯನ್ನು ಸರಿಪಡಿಸುವ ಸ್ಪಷ್ಟ ದಾರಿ. ಈ ಎಲ್ಲ ಕ್ರಮಗಳ ಸಂಯೋಜನೆಯು ಅಪೇಕ್ಷಣೀಯವಾಗಿದೆ, ದೇಶವು ಅನುಭವಿಸುತ್ತಿರುವ ನೋವಿನಿಂದ ಉಪಶಮನ ಪಡೆಯಲು ಮಾತ್ರವಲ್ಲ, ನಮ್ಮ ದೀರ್ಘಕಾಲೀನ ಎಣಿಕೆಗಳ ದೃಷ್ಠಿಯಿಂದಲೂ ಸಹ, ಮತ್ತು, ಈ ಕ್ರಮಗಳು ನವ-ಉದಾರವಾದದ ದಿಕ್ಕನ್ನು ಧಿಕ್ಕರಿಸಿ ಅದರ ವಿರುದ್ಧ ದಿಕ್ಕಿನಲ್ಲಿ ನಮ್ಮನ್ನು ಕೊಂಡೊಯ್ಯುತ್ತವೆ. ತಮ್ಮ ವಿದೇಶಿ ವಿನಿಮಯದ ಅಗತ್ಯಗಳಿಗಾಗಿ ಕೆಲವು ದೇಶಗಳು ಐಎಂಎಫ್ ಮೊರೆ ಹೋಗಿ ಅದು ಹೇರಿದ "ಮಿತವ್ಯಯ"ಕ್ರಮಗಳ ಕಪಿಮುಷ್ಠಿಯಿಂದ ನರಳುವ ಪರಿಸ್ಥಿತಿಯನ್ನು ತಪ್ಪಿಸಿಕೊಳ್ಳಬೇಕು ಎಂದಾದರೆ, ಈ ಸಂಯೋಜಿತ ಕ್ರಮಗಳನ್ನು ಬಿಟ್ಟರೆ ಅನ್ಯ ಮಾರ್ಗವಿಲ್ಲ.

# "ಗಟಾರಗಳಲ್ಲಿ ಜಾಡಮಾಲಿಗಳ ಕೊಲೆಗಳನ್ನು ನಿಲ್ಲಿಸಿ"




ದಿಲ್ಲಿಯ ಬೀದಿಗಳಲ್ಲಿ ಸೆಪ್ಟಂಬರ್ 25ರಂದು ಈ ಘೋಷಣೆಗಳು ಮೊಳಗಿದವು. ಸಿಪಿಐ(ಎಂ), ಸಿಐಟಿಯು, ಜನವಾದಿ ಮಹಿಳಾ ಸಂಘಟನೆ ಮತ್ತು ಡಿಎಸ್‌ಎಂಎಂನ ದಿಲ್ಲಿ ರಾಜ್ಯ ಸಮಿತಿಗಳ ಕರೆಯ ಮೇರೆಗೆ ನೂರಾರು ಕಾರ್ಯಕರ್ತರು ಮತ್ತೆ-ಮತ್ತೆ ಗಟಾರ ಸ್ವಚ್ಛ ಮಾಡುವವರ ಸಾವುಗಳು ಸಂಭವಿಸುತ್ತಿರುವುದರ ಬಗ್ಗೆ ತಮ್ಮ ತೀವ್ರ ಆಕ್ರೋಶ ಪ್ರದರ್ಶಿಸಿದರು. ದಿಲ್ಲಿ ಗೇಟ್‌ನಿಂದ ದಿಲ್ಲಿ ಸಚಿವಾಲಯದ ವರೆಗೆ ಮೆರವಣಿಗೆ ನಡೆಸಿ ಯಾವುದೇ ರಕ್ಷಣಾ ಸಾಧನಗಳನ್ನು ಕೊಡದೆ ಗಟಾರದೊಳಕ್ಕೆ ಇಳಿಯುವಂತೆ ಮಾಡುತ್ತಿರುವುದನ್ನು ನಿಲ್ಲಿಸಿ, ಇದರಿಂದ ಹಾನಿಗೊಳಗಾಗಿರುವವರಿಗೆ ನ್ಯಾಯ ಒದಗಿಸಬೇಕು ಎಂದು ಆಗ್ರಹಿಸಿದರು. ಸಿಪಿಐ(ಎಂ) ಪೊಲಿಟ್‌ಬ್ಯುರೊ ಸದಸ್ಯರಾದ ಬೃಂದಾಕಾರಟ್ ಮತ್ತು ಸಿಪಿಐ(ಎಂ) ದಿಲ್ಲಿ ರಾಜ್ಯ ಕಾರ್ಯದರ್ಶಿ ಕೆ.ಎಂ. ತಿವಾರಿ ಪ್ರತಿಭಟನೆಯ ನೇತೃತ್ವ ವಹಿಸಿದರು. ಇತ್ತೀಚೆಗೆ ಗಟಾರದೊಳಗೆ ಇಳಿಯಬೇಕಾಗಿ ಬಂದು ಪ್ರಾಣ ಕಳಕೊಂಡ ಅನಿಲ್ ಹೆಂಡತಿ ಕೂಡ ಈ ಪ್ರತಿಭಟನೆಯಲ್ಲಿ ಇದ್ದರು.

ಗಟಾರಗಳನ್ನು ಸ್ವಚ್ಛಗೊಳಿಸಲು ಯಂತ್ರಗಳ ವ್ಯವಸ್ಥೆ ಮಾಡಬೇಕು, ದೈಹಿಕವಾಗಿ ಗಟಾರ/ಚರಂಡಿಗಳನ್ನು ಸ್ವಚ್ಛಮಾಡುವ ಜಾಡಮಾಲಿಗಳ ಮರುವಸತಿ ಮತ್ತು ಸರಕಾರೀ ಇಲಾಖೆಗಳಲ್ಲಿ ಖಾಯಂ ಉದ್ಯೋಗಗಳನ್ನು ಒದಗಿಸಬೇಕು, ಗಟಾರದೊಳಕ್ಕೆ ಇಳಿದು ಸಾವಪ್ಪಿರುವವರ ಕುಟುಂಬಗಳಿಗೆ 25 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಪ್ರತಿಭಟನಾಕಾರರು ಆಗ್ರಹಿಸಿದರು.

ಈ ಸಾವುಗಳು ಗಟಾರದಲ್ಲಿನ ಸಾವುಗಳಲ್ಲ, ಬದಲಿಗೆ ಯೋಜಿತ ಕೊಲೆಗಳು, ಇವಕ್ಕೆ ಸಂಬಂಧಪಟ್ಟ ಸರಕಾರ ಮತ್ತು ಇಲಾಖೆಗಳೇ ನೇರ ಹೊಣೆ ಎಂದು ಬೃಂದಾ ಕಾರಟ್ ಪ್ರತಿಭಟನಾಕಾರರನ್ನು ಉದ್ದೇಶಿಸಿ ಮಾತನಾಡುತ್ತ ಹೇಳಿದರು. ದೈಹಿಕವಾಗಿ ಮಲ ಸ್ವಚ್ಛಗೊಳಿಸುವುದನ್ನು ನಿಷೇಧಿಸಿರುವ ಕಾನೂನುಗಳ ಪಾಲನೆಯ ಆಗುತ್ತಿಲ್ಲ. ಕೇಂದ್ರ ಮತ್ತು ರಾಜ್ಯ ಸರಕಾರಗಳು ಚರಂಡಿ/ಗಟಾರಗಳನ್ನು ಸ್ವಚ್ಛಗೊಳಿಸಲು ಸಾಕಷ್ಟು ಯಂತ್ರಗಳನ್ನು ಮತ್ತು ತರಬೇತಿ ಹೊಂದಿದ ಸಿಬ್ಬಂದಿಯನ್ನು ಕೊಡುತ್ತಿಲ್ಲ. ಬಹುಪಾಲು ಗಟಾರ ಸ್ವಚ್ಛಮಾಡುವ ಕೆಲಸವನ್ನು ಖಾಸಗಿಯವರಿಗೆ ಗುತ್ತಿಗೆ ಕೊಡಲಾಗಿದೆ. ಅವರು ಕಡು ಬಡವ, ಸಾಮಾಜಿಕ ತಾರತಮ್ಯಕ್ಕೆ ಒಳಗಾದ ಕುಟುಂಬಗಳ ಜನಗಳನ್ನು ದುಡಿಸಿಕೊಳ್ಳುತ್ತಾರೆ ಎಂದ ಅವರು ಇದನ್ನು ದಿಲ್ಲಿಯ ಮೂಲೆ-ಮೂಲೆಗಳಿಗೆ ಒಯ್ದು ದೊಡ್ಡ ಸಂಖ್ಯೆಯಲ್ಲಿ ಜನಗಳನ್ನು ಅಣಿನೆರೆಸಿ ಸರಕಾರ ತನ್ನ ಜವಾಬ್ದಾರಿ ನಿರ್ವಹಿಸುವಂತೆ ಮಾಡಬೇಕು ಎಂದು ಕರೆ ನೀಡಿದರು.

ಬೃಂದಾಕಾರಟ್ ನೇತೃತ್ವದಲ್ಲಿ ನಿಯೋಗವೊಂದು ದಿಲ್ಲಿ ಉಪಮುಖ್ಯಮಂತ್ರಿ ಮಾನಿಷ್ ಸಿಸೋಡಿಯ ರನ್ನು ಭೇಟಿ ಮಾಡಿ ಈ ಕುರಿತ ಬೇಡಿಕೆಗಳ ಒಂದು ಮನವಿ ಪತ್ರವನ್ನು ಅವರಿಗೆ ಸಲ್ಲಿಸಿದರು. ಅವರು ಸಿಪಿಐ(ಎಂ) ಎತ್ತಿರುವ ಬೇಡಿಕೆಗಳನ್ನು ಸಕಾರಾತ್ಮಕವಾಗಿ ಪರಿಶೀಲಿಸುವುದಾಗಿ ಭರವಸೆ ನೀಡಿದರು.

## "ಉತ್ತರ ಪ್ರದೇಶ ಎಸ್‌ಸಿ/ಎಸ್‌ಟಿ ಆಯೋಗ ಅಧ್ಯಕ್ಷರ ನೇಮಕದಲ್ಲಿ ನಿಯಮಗಳ ಉಲ್ಲಂಘನೆಯಾಗಿದೆ"

ಹೀಗೆಂದು ಈ ಕುರಿತ ಮಾಹಿತಿಯನ್ನು ಮಾಹಿತಿ ಹಕ್ಕು ಕಾಯ್ದೆಯ ಅಡಿಯಲ್ಲಿ ಪಡೆದ ನೂತನ್ ಠಾಕುರ್ ಹೇಳಿರುವುದಾಗಿ ವರದಿಯಾಗಿದೆ.

ಉತ್ತರಪ್ರದೇಶದ ಡಿಜಿಪಿಯಾಗಿ ನಿವೃತ್ತರಾದ ಬ್ರಜ್ ಲಾಲ್ ನಿವೃತ್ತಿಯ ನಂತರ ಬಿಜೆಪಿ ಸೇರಿದರು. ಇವರನ್ನು ಪರಿಶಿಷ್ಟ ಜಾತಿಗಳು/ಪರಿಶಿಷ್ಟ ಬುಡಕಟ್ಟುಗಳು ಆಯೋಗದ ಅಧ್ಯಕ್ಷರಾಗಿ ನೇಮಕ ಮಾಡಲಾಯಿತು. ಈ ನೇಮಕದಲ್ಲಿ ಅನುಸರಿಸಬೇಕಾದ ವಿಧಿವಿಧಾನಗಳನ್ನು ಉಲ್ಲಂಘಿಸಲಾಗಿದೆ ಎಂದು ತಾನು ಪಡೆದ ಮಾಹಿತಿಯಿಂದ ಕಾಣ ಬರುತ್ತದೆ ಎಂದು ನೂತನ್ ಠಾಕುರ್ ಹೇಳಿದ್ದಾರೆ.

ಮುಖ್ಯಮಂತ್ರಿಗಳು ಸಮಾಜ ಕಲ್ಯಾಣ ಇಲಾಖೆಯಿಂದ ಈ ಕುರಿತ ಕಡತ ತರಿಸಿಕೊಂಡರು. ಇಲಾಖೆಯೊಂದಿಗೆ ಯಾವುದೇ ಸಮಾಲೋಚನೆ ನಡೆಸದೆ ಅದೇ ದಿನ ಅವರನ್ನು ಅಧ್ಯಕ್ಷರಾಗಿ ನೇಮಕ ಮಾಡಲಾಯಿತು.

ಮೂರು ದಿನಗಳ ನಂತರ ಅವರಿಗೆ "ರಾಜ್ಯ ಮಂತ್ರಿಯ ಸ್ಥಾನಮಾನ" ನೀಡಬೇಕೆಂಬ ಆದೇಶವೂ 'ಮೇಲಿನಿಂದ' ಇಲಾಖೆಗೆ ಬಂತು. ಇದಕ್ಕೆ ಸಂಬಂಧಪಟ್ಟ ಮಂತ್ರಿಗಳೊಂದಿಗೂ ಸಮಾಲೋಚನೆ ನಡೆಯಲಿಲ್ಲ.

ಇಂತಹ ಹುದ್ದೆಗಳಿಗೆ ಸಂಬಂಧಪಟ್ಟ ಕ್ಷೇತ್ರದಲ್ಲಿ ಅನುಭವವಿರುವವರನ್ನು ಸಂಬಂಧಪಟ್ಟ ಇಲಾಖೆಯೊಂದಿಗೆ ಸಮಾಲೋಚಿಸಿ ಆರಿಸಲಾಗುತ್ತದೆ. ಬ್ರಜ್‌ಲಾಲ್‌ರವರಿಗೆ ಅನುಭವವಿರುವುದು ಪೋಲಿಸ್ ಕೊಲಸದಲ್ಲಿ ಮಾತ್ರ ಎಂದು ಈ ಆರ್‌ಟಿಐ ಕಾರ್ಯಕರ್ತೆ ಹೇಳುತ್ತಾರೆ.

## ರಾಜ್ಯಗಳ ಸುತ್ತ

### ಅಸ್ಸಾಂ ಎನ್‌ಆರ್‌ಸಿ: ಸುಪ್ರಿಂಕೋರ್ಟ್ ಮುಂದೆ ಪ್ರತಿಷ್ಠಿತರ ಮಧ್ಯಪ್ರವೇಶ ಅರ್ಜಿ

ಅಸ್ಸಾಂ ನಲ್ಲಿ 'ರಾಷ್ಟ್ರೀಯ ಪೌರರ ದಾಖಲೆ' (ಎನ್‌ಆರ್‌ಸಿ)ಪ್ರಕ್ರಿಯೆಯಲ್ಲಿ ಮಧ್ಯಪ್ರವೇಶಕ್ಕೆ ಅವಕಾಶ ಕೋರಿ 50 ಪ್ರತಿಷ್ಠಿತ ನಾಗರಿಕರು ಸುಪ್ರಿಂ ಕೋರ್ಟಿನಲ್ಲಿ ಅರ್ಜಿ ಹಾಕಿದ್ದಾರೆ ಎಂದು ವರದಿಯಾಗಿದೆ.ಲಖ್‌ನೌ ವಿಶ್ವವಿದ್ಯಾಲಯದ ಮಾಜಿ ಉಪಕುಲಪತಿ ರೂಪ್‌ರೇಖಾ ವರ್ಮಾ, ಇತಿಹಾಸಜ್ಞ ಪ್ರೊ. ಇರ್ಫಾನ್ ಹಬಿಬ್, ಸದ್ಭಾವನಾ ಮಿಶನ್‌ನ ಸಂಯೋಜಕ ಪ್ರೊ.ವಿ.ಕೆ.ತ್ರಿಪಾಠಿ, ಮಾಜಿ ಸಂಸದ ಮಹಮ್ಮದ್ ಅದೀಬ್ ಮುಂತಾದವರು ಹಾಕಿರುವ ಈ ಅರ್ಜಿ ಎನ್‌ಆರ್‌ಸಿಯಲ್ಲಿ ಸೇರ್ಪಡೆಯಾಗದವರ ಬಗ್ಗೆ ಮತ್ತೆ ದಾಖಲಾತಿ ಕಿಯೆ ಆರಂಭಿಸುವ ಮೊದಲು ಹಿಂದಿನ ಸುತ್ತಿನಲ್ಲಿ ಸೇರ್ಪಡೆ ಮಾಡದವರ ಅರ್ಜಿದಾರರು ಅಲ್ಲಿಸಿದ ದಸ್ತಾವೇಜುಗಳ ಮರು ತಪಾಸಣೆ ನಡೆಸುವಂತೆ ಸುಪ್ರಿಂ ಕೋರ್ಟ್ ನಿರ್ದೇಶನ ನೀಡಬೇಕು ಎಂದು ಕೋರಿದ್ದಾರೆ.

ತಾವು ಮಧ್ಯಪ್ರವೇಶಿಸಲು ಅವಕಾಶ ಕೇಳಲು ಕಾರಣ, ತಾವುಗಳು ಅಸ್ಸಾಂಗೆ ಭೇಟಿ ನೀಡಿದಾಗ ಸೇರ್ಪಡೆಯಾಗದವರಲ್ಲಿ ಎಲ್ಲ ಸಮುದಾಯಗಳಿಗೆ ಸೇರಿದವರು ಇದ್ದಾರೆ, 40–50% ಮುಸ್ಲಿಮರು, 40–50% ಬಂಗಾಲಿ ಹಿಂದುಗಳು ಮತ್ತು 5–10% ಇತರರು ಮತ್ತು ಇವರಲ್ಲಿ ಬಹುಪಾಲು ದಟ್ಟ ದರಿದ್ರರು, ದುಡಿಮೆಗಾರರು ಎಂದು ಕಂಡು ಬಂದಿದ್ದು, ಬೃಹತ್ ಪ್ರಮಾಣದಲ್ಲಿ ಬಾಂಗ್ಲಾದೇಶಿಗಳು ನುಸುಳಿದ್ದಾರೆ" ಎಂಬುದು ಕೇವಲ ಮಿಥ್ಯೆಯೆಂದು ಸಾಬೀತಾಗಿದೆ ಎಂದು ಅರ್ಜಿದಾರರು ಹೇಳಿದ್ದಾರೆ.

ನ್ಯಾಯಮೂರ್ತಿ ರಂಜನ್ ಗೊಗೊಯ್ ಪೀಠದ ಮುಂದೆ ಹಲವು ಸಲಹೆ-ಸೂಚನೆಗಳನ್ನು ಕೂಡ ನೀಡಲಾಗಿದೆ. ಹಲವು ಕುಟುಂಬಗಳಲ್ಲಿ ಕೆಲವರನ್ನು ಸೇರಿಸಲಾಗಿದೆ, ಕೆಲವರನ್ನು ಹೊರಗಿಡಲಾಗಿದೆ. ಇಂತಹ ಸಂದರ್ಭಗಳಲ್ಲಿ ಸೇರಿಸಲ್ಪಟ್ಟವರ ಅಫಿಡವಿಟ್ ಆಧಾರದಲ್ಲಿ ಕೈಬಿಟ್ಟ ಅವರ ಸಂಬಂಧಿಕರನ್ನು ಸೇರಿಸಿಕೊಳ್ಳಬೇಕು ಎಂಬುದು ಒಂದು ಸೂಚನೆ. ಇನ್ನೊಂದು ಪೌರ ರಪಟ್ಟಿಗೆ ಸೇರಿಸದಿರಲು ಕಾರಣಗಳನ್ನು ಬಹಿರಂಗ ಪಡಿಸಬೇಕು ಎಂಬುದು ಇನ್ನೊಂದು ಸಲಹೆ.

## ತೆಲಂಗಾಣ: ಅಂತರ್ಜಾತಿ ವಿವಾಹಿತರ ಮೇಲೆ ಹೆಚ್ಚುತ್ತಿರುವ ಹಿಂಸಾಚಾರದ ವಿರುದ್ಧ ಪ್ರತಿಭಟನೆ

ತೆಲಂಗಾಣದಲ್ಲಿ ಜಾತಿಸಂಬಂಧಿ ಹಿಂಸಾಚಾರ ಹೆಚ್ಚುತ್ತಿದೆ ಎಂದು ಸಿಪಿಐ(ಎಂ) ತೆಲಂಗಾಣ ರಾಜ್ಯ ಕಾರ್ಯದರ್ಶಿ ತಮ್ಮಿನೇನಿ ಹೇಳಿದ್ದಾರೆ. ಈ ಕೊಲೆಗಳಿಗೆ ಸರಕಾರದಿಂದ ಏನೂ ಪ್ರತಿಕ್ರಿಯೆ ಇಲ್ಲ. ಮುಖ್ಯಮಂತ್ರಿ, ಗೃಹಮಂತ್ರಿ, ಟಿಆರ್‌ಎಸ್ ಮುಖಂಡರು ಏಕೆ ಪ್ರತಿಕ್ರಿಯಿಸುತ್ತಿಲ್ಲ ಎಂದು ಅವರು ಪತ್ರಿಕಾಸಮ್ಮೇಳನವನ್ನು ಉದ್ದೇಶಿಸಿ ಮಾತನಾಡುತ್ತ ಪ್ರಶ್ನಿಸಿದರು. ಇದು ಕಾಕತಾಳೀಯವೇನಲ್ಲ. ಜಾತಿ ಪ್ರಶ್ನೆಯ ಬಗ್ಗೆ ಟಿಆರ್‌ಎಸ್ ಸರಕಾರ ಉಪೇಕ್ಷೆಯ ನಿಲುವು ತಳೆದಿದೆ. ಅವರ ನಡುವೆಯೇ ಜಾತಿ ಹಿಂಸಾಚಾರ ನಡೆಸುವವರು ಇದ್ದಾರೆ. ಸರಕಾರದ ಉಪೇಕ್ಷಾ ಮನೋಭಾವ ಈ ಹಿಂಸಾಚಾರ ನಡೆಸುವವರಿಗೆ ಇನ್ನಷ್ಟು ಕುಮ್ಮಕ್ಕು ನೀಡುತ್ತದೆ ಎಂದು ತಮ್ಮಿನೇನಿ ಆಪಾದಿಸಿದ್ದಾರೆ.

ಸೆಪ್ಟಂಬರ್ 14ರಂದು ಮಿರಿಯಾಲಗುಡದಲ್ಲಿ ದಲಿತ ಯುವಕ ಪ್ರಣಯ್ ಮೇಲ್ಜಾತಿ ಹುಡುಗಿಯನ್ನು ಮದುವೆಯಾದ್ದಕ್ಕೆ ಹುಡುಗಿಯ ತಂದೆಯೇ ಹಾಡುಹಗಲೇ ಅಮಾನುಷವಾಗಿ ಆತನ ಕೊಲೆ ಮಾಡಿಸಿದ ಘಟನೆ ತೆಲಂಗಾಣ ಮಾತ್ರವಲ್ಲ, ಆಂಧ್ರಪ್ರದೇಶದಲ್ಲೂ ತಲ್ಲಣ ಉಂಟು ಮಾಡಿತ್ತು.

ಸೆಪ್ಟಂಬರ್ 19ರಂದು ವಿಜಯವಾಡಾದಲ್ಲಿ ಈ ಹತ್ಯೆಯ ವಿರುದ್ಧ ಒಂದು ಮೋಂಬತ್ತಿ ಮೆರವಣಿಗೆ ಫುಲೆ ಪ್ರತಿಮೆಯ ಬಳಿ ನಡೆಯಿತು. ಕೆವಿಪಿಎಸ್ ಮತ್ತು ಡಿಹೆಚ್‌ಪಿಎಸ್ ಇದನ್ನು ಏರ್ಪಡಿಸಿದ್ದವು. ಸಿಪಿಐ(ಎಂ) ಮತ್ತು ಸಿಪಿಐ ರಾಜ್ಯ ಕಾರ್ಯದರ್ಶಿಗಳು ಮತ್ತು ವಿವಿಧ ಸಂಘಟನೆಗಳ ಮುಖಂಡರು ಮಾತನಾಡಿ ಮೇಲ್ಜಾತಿಗಳ ಜಾತಿವಾದವನ್ನು ಪ್ರದರ್ಶಿಸಿದ ಅಮಾನುಷ ಘಟನೆ ಎಂದು ಇದನ್ನು ಬಲವಾಗಿ ಖಂಡಿಸಿದರು.

ದಲಿತ ಶೋಷಿತ ಮುಕ್ತಿ ಮಂಚ್‌ನ ರಾಷ್ಟ್ರೀಯ ಕಾರ್ಯದರ್ಶಿ ಶ್ರೀನಿವಾಸ್ ರಾವ್ ಕೂಡ ಈ ಮೆರವಣಿಗೆಯಲ್ಲಿ ಭಾಗವಹಿಸಿ ಮಾತನಾಡುತ್ತ ಬಿಜೆಪಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದ ಮೇಲೆ ಮನುವಾದಿಗಳ ಅಟ್ಟಹಾಸ ಹೆಚ್ಚಿದೆ, ಪರಂಪರೆ ಮತ್ತು ಸಂಸ್ಕೃತಿಯ ಹೆಸರಲ್ಲಿ ಜಾತಿವಾದಕ್ಕೆ ಪ್ರೋತ್ಸಾಹ ಸಿಗುತ್ತಿದೆ ಎಂದರು.

ಈ ಅಮಾನುಷ ಘಟನೆಯ ನಂತರ ತೆಲಂಗಾಣ ರಾಜಧಾನಿ ಹೈದರಾಬಾದಿನಲ್ಲೇ ಮತ್ತೊಂದು ಇಂತಹುದೇ ಘಟನೆಯಲ್ಲಿ ಇನ್ನೊಬ್ಬ ದಲಿತ ಹುಡುಗನ ಕೊಲೆಯಾಗಿದೆ.

ಈ ಹಿಂಸಾಚಾರದ ವಿರುದ್ಧ ಸಿಪಿಐ(ಎಂ) ತೆಲಂಗಾಣ ರಾಜ್ಯ ಸಮಿತಿ ಮತ್ತು ಬಹುಜನ ಎಡರಂಗ(ಬಿಎಲ್‌ಎಫ್) ಕರೆಯ ಮೇರೆಗೆ ವಿವಿಧ ಮಂಡಲ ಮುಖ್ಯ ಕಚೇರಿಗಳ ಎದುರು ಸೆಪ್ಟಂಬರ್ 27ರಂದು ಪ್ರತಿಭಟನಾ ಮತಪ್ರದರ್ಶನಗಳು ನಡೆದಿವೆ. ಈ ಪ್ರತಿಭಟನೆಗಳಲ್ಲಿ ಸರಕಾರದ ಉಪೇಕ್ಷೆಯ ನಿಲುವನ್ನು ಖಂಡಿಸುತ್ತ ಅಂತರ್ಜಾತಿ ಮದುವೆಯಾದವರಿಗೆ ರಕ್ಷಣೆ ಕೊಡುವ ಶಾಸನ ವೊಂದನ್ನು ತರಬೇಕು, ಮತ್ತು ಇಂತಹ ಹಿಂಸಾಚಾರದ ತ್ವರಿತ ವಿಚಾರಣೆಗೆ ಫಾಸ್ಟ್ ಟ್ರ್ಯಾಕ್ ಕೋರ್ಟ್‌ಗಳನ್ನು ರಚಿಸಬೇಕು ಎಂದು ಆಗ್ರಹಿಸಲಾಗಿದೆ.





# ಸ್ವೀಡನ್ ಸರಕಾರದಲ್ಲೂ ಉಗ್ರ ಬಲಪಂಥೀಯರು ?

ಸ್ವೀಡನ್ ಸಂಸತ್ತಿನ ಚುನಾವಣೆಯಲ್ಲಿ ಉಗ್ರ ಬಲಪಂಥೀಯ ಪಕ್ಷವಾದ "ಸ್ವೀಡನ್ನಿನ ಡೆಮಾಕ್ರಟ್ ರು", ತಾವು ಹೊಂದಿರುವ ನೆಲೆಗಳ ಆಧಾರದಲ್ಲಿ ಶೇ.30 ರಷ್ಟು ಮತ ಪಡೆಯುವ ವಿಶ್ವಾಸ ಹೊಂದಿದ್ದರು. ಅಧಿಕಾರದಲ್ಲಿದ್ದ ಮುಕ್ತ ಮಾರುಕಟ್ಟೆ ಪರ, ಸಂಪ್ರದಾಯವಾದಿ ಮಧ್ಯಮ ಬಲಪಂಥೀಯ "ಮೋಡರೇಟ್" ಪಕ್ಷವನ್ನು ಎರಡನೆ ಸ್ಥಾನಕ್ಕೆ ತಳ್ಳುವ ಗುರಿಯೊಂದಿಗೆ ಈ ಚುನಾವಣೆಯಲ್ಲಿ ಗೆಲ್ಲುವ ವಿಶ್ವಾಸಾರ್ಹತೆ ಹೊಂದಿದ್ದರು. ಆದರೆ ಸಾಧ್ಯವಾಗಲಿಲ್ಲ, ಆದಾಗ್ಯೂ, ಅವರು ಹಿಂದೆ ಪಡೆದಿದ್ದ ಶೇ.12.9 ಮತಕ್ಕಿಂತ, ಇದೀಗ ಶೇ. 17.6 ಕ್ಕೆ ಹೆಚ್ಚಿಸಿಕೊಂಡಿದ್ದಾರೆ. ಸೀಟುಗಳಿಕೆ 49ರಿಂದ 62ಕ್ಕೆ ಏರಿದೆ. ಆದರೂ ಚುನಾವಣಾ ಫಲಿತಾಂಶಗಳು ಅವರಿಗೆ ತೀವ್ರ ನಿರಾಶೆಯನ್ನು ತಂದಿದೆ ಎಂಬುದು ರಾಜಕೀಯ ವಲಯದ ವಿಶ್ಲೇಷಣೆ.

**ಉಗ್ರ ಬಲಪಂಥ ಸರಕಾರದಲ್ಲಿ ?**

ಚುನಾವಣಾ ಪೂರ್ವದಲ್ಲಿನ ತಮ್ಮ ಸಮೀಕ್ಷೆಯಲ್ಲಿ ಮಾಧ್ಯಮಗಳು ಸ್ವೀಡನ್ನಿನ ಈ ನವ–ನಾಝಿ ಉಗ್ರವಾದಿಗಳು ಶೇ. 24 ಕ್ಕಿಂತಲೂ ಹೆಚ್ಚು ಮತ ಪಡೆಯುತ್ತಾರೆ ಎಂದು ಸೂಚಿಸಿದ್ದವು. "ಮೋಡರೇಟ್" ಪಕ್ಷದ ಮತಗಳಿಕೆ ಶೇ. 23.3ರಿಂದ 19.8ಕ್ಕೆ ಮತ್ತು ಸೀಟುಗಳಲ್ಲಿ 84ರಿಂದ 70ಕ್ಕೆ ಕುಸಿದಿದೆ. ಸೋಶಿಯಲ್ ಡೆಮೊಕಾಟಿಕ್ ಪಕ್ಷ ಸಹ ಮತಗಳಿಕೆ ಶೇ. 31.1 ರಿಂದ 28.3ಕ್ಕೆ ಮತ್ತು ಸೀಟುಗಳಲ್ಲಿ 113ರಿಂದ 100ಕ್ಕೆ ಕುಸಿದಿದೆ. ಎಡಪಕ್ಷಗಳ ಮತಗಳಿಕೆ 2006, 2010 ಮತ್ತು 2014 ರ ಚುನಾವಣೆಯಲ್ಲಿ ಶೇ. 6 ಕ್ಕಿಂತ ಕಡಿಮೆ ಇದ್ದು, ಈ ಚುನಾವಣೆಯಲ್ಲಿ ಶೇ. 8 ಕ್ಕೆ ಏರಿಕೆ ಯಾಗಿರುವುದು ಗಮನಾರ್ಹ. ಎಡ ಪಕ್ಷಗಳು 28, ಗ್ರೀನ್ ಪಕ್ಷ 16 ಮತ್ತು 100 ಸ್ಥಾನಗಳನ್ನು ಹೊಂದಿರುವ ಸೋಷಿಯಲ್ ಡೆಮಾಕ್ರಾಟ್ ಗಳು ಒಂದಾಗಿ, ಈ ಹಿಂದಿನ "ಕೆಂಪು–ಹಸಿರು ಮೈತ್ರಿ ಕೂಟ"ಕ್ಕೆ ಇನ್ನಷ್ಟು ಪಕ್ಷಗಳನ್ನು ಸೇರಿಸಿಕೊಂಡು ಸರಕಾರ ರಚನೆಯ ಸಾಧ್ಯತೆಯನ್ನು ಪರಿಶೀಲಿಸಲಿವೆ. ಆದರೆ ಉಗ್ರ ಬಲಪಂಥೀಯ ನವ–ನಾಜಿಗಳು ಸರಕಾರದಲ್ಲಿ ಭಾಗವಹಿಸುವ ಸಾಧ್ಯತೆಯಿದೆ.

ಸೋಷಿಯಲ್ ಡೆಮಾಕ್ರಾಟ್ ಹಾಗೂ ಮೋಡರೇಟ್ ಪಕ್ಷಗಳು, ಈ ಇಬ್ಬರೂ ಉಗ್ರ ಬಲಪಂಥೀಯ ಡೆಮಾಕ್ರಾಟ್ ರ ನಿರಾಶ್ರಿತ–ವಿರೋಧಿ ನೀತಿಗಳನ್ನು ಎರವಲು ಪಡೆದು ತಮ್ಮ ಚುನಾವಣಾ ಪ್ರಚಾರದಲ್ಲಿ ಬಳಸಿಕೊಂಡರು. ಫ್ಯಾಸಿಸ್ಟ್ ಶಕ್ತಿಗಳ ಮತಗಳ ಏರಿಕೆಗೆ ಇದೇ ಮೂಲ ಕಾರಣವಾಯಿತು ಎನ್ನಲಾಗಿದೆ.

ಅದೇ ರೀತಿ, ಪ್ರಧಾನಿ ಲೋಫೆನ್ನ್‌ರ ಸೋಷಿಯಲ್ ಡೆಮಾಕ್ರಾಟ್ ಪಕ್ಷಕ್ಕೆ, ವಿಶೇಷವಾಗಿ ಎಡ ಪಕ್ಷಗಳು ಫ್ಯಾಸಿಸ್ಟ್ ವಿರೋಧಿ ತತ್ವದ ನೆಲೆಯಲ್ಲಿ ನಡೆಸಿದ ಪರಿಣಾಮಕಾರಿ ಪ್ರಚಾರದ ಚಟುವಟಿಕೆಗಳಿಂದಾಗಿ, ಸ್ವೀಡನ್ನಿನ ಪ್ರಮುಖ ನಗರಗಳಲ್ಲಿ ಉತ್ತಮ ಬೆಂಬಲ ವ್ಯಕ್ತವಾಗಿದೆ. ಉಗ್ರವಾದಿ ಬಲಪಂಥೀಯ ಪಕ್ಷ ಈ ಹಿಂದೆ ಪ್ರಮುಖ ಮೂರು ನಗರ ಗಳಾದ ಸ್ಟಾಕ್ ಹೋಮ್ ಮತ್ತು ಗೋಥನ್ ಬರ್ಗ್ ಹಾಗೂ ಮಲ್ಮೊ ರಾಜಧಾನಿ ನಗರ ತಮ್ಮ ನಿಯಂತ್ರಣದ ಪ್ರಭಾವವದಲ್ಲಿಯೇ ಇದ್ದವು. ಆದರೀಗ ಮೂರರಲ್ಲಿ ಮೊದಲ ಎರಡು, ಸೋಷಿಯಲ್ ಡೆಮಾಕ್ರಾಟ್ ನಿಯಂತ್ರಣ ಕ್ಕೆ ತೆಗೆದುಕೊಂಡಿದ್ದರೆ ಮಲ್ಮೊ ನಗರದಲ್ಲಿ ಎಡ ಪಕ್ಷಗಳ ಪ್ರಭಾವ ಡೆಮಾಕ್ರಾಟ್ ಗಿಂತ ಹೆಚ್ಚಾಗಿದೆ. ಇದು ಚುನಾವಣಾ ನಂತರದ ಬೆಳವಣಿಗೆಯಾಗಿದೆ.

ಉಗ್ರವಾದಿ ಬಲಪಂಥೀಯ ಡೆಮಾಕಾಟ್ ಗಳೊಂದಿಗೆ ಒಂದು ಒಪ್ಪಂದ ಮಾಡಿಕೊಳ್ಳುವ ಮೂಲಕ ಸಂಪ್ರದಾಯವಾದಿ ಮಧ್ಯಮ ಪಕ್ಷದವರು ಲೋಫೆನ್ ರನ್ನು ಅಧಿಕಾರದಿಂದ ಇಳಿಸುವ ದಿಸೆಯಲ್ಲಿ ನಡೆಸಿದ ಪ್ರಯತ್ನ ಇದೀಗ ವಿಫಲವಾಗಿದೆ. ಆದರೆ 349 ಸೀಟುಗಳ ಸ್ವೀಡನ್ ಪಾರ್ಲಿಮೆಂಟಿನಲ್ಲಿ ಎಡ–ನಡುಪಂಥೀಯ ರಂಗ (ಸೋಶಿಯಲ್ ಡೆಮೊಕ್ರಾಟಿಕ್, ಎಡ ಮತ್ತು ಗ್ರೀನ್ ಪಕ್ಷಗಳ ಕೂಟ) 144 ಸೀಟುಗಳನ್ನು ಪಡೆದಿದೆ. ಬಲ–ನಡುಪಂಥೀಯ ಕೂಟ (ಮೋಡರೇಟ್, ನಡು, ಕ್ರಿಶ್ಚಿಯನ್ ಡೆಮೊಕ್ರಾಟ್, ಲಿಬರ್ ಪಕ್ಷಗಳ ಕೂಟ) 143 ಸೀಟುಗಳನ್ನು ಪಡೆದಿದೆ. ಉಗ್ರ ಬಲಪಂಥೀಯ ಡೆಮಾಕ್ರಾಟ್ ಗಳು 'ಕಿಂಗ್ ಮೇಕರ್' ಆಗಿದ್ದಾರೆ. ಈಗಿನ ಎಡ–ನಡುಪಂಥೀಯ ರಂಗ ವಿಶ್ವಾಸ ಮತ ಯಾಚಿಸಿದ್ದು ಪಾರ್ಲಿಮೆಂಟಿನಲ್ಲಿ ಅದು ಮಂಜೂರಾಗಿಲ್ಲ. ಆದ್ದರಿಂದ ನಡು–ಬಲಪಂಥೀಯ ಮತ್ತು ಉಗ್ರಪಂಥೀಯ ಪಕ್ಷಗಳ ಕೂಟ ಸರಕಾರ ರಚನೆಯ ಸಾಧ್ಯತೆ ಹೆಚ್ಚಾಗಿದೆ. ಅಂದರೆ ಇನ್ನೊಂದು ದೇಶದಲ್ಲಿ ನವ–ನಾಜಿಗಳು ಅಧಿಕಾರಕ್ಕೆ ಬರಬಹುದು.

ಉಗ್ರ ಬಲಪಂಥೀಯರನ್ನು ಒಳಗೊಂಡ ಸರ್ಕಾರಗಳು ಇಟಲಿ, ಹಂಗೇರಿ, ಸ್ಲೋವಾಕಿಯಾ ಮತ್ತು ಜರ್ಮನಿ ಹಾಗೂ ಉತ್ತರ ಯುರೋಪಿನ ಫಿನ್ ಲ್ಯಾಂಡ್ ಮತ್ತು ನಾರ್ವೆ ದೇಶಗಳಲ್ಲಿ ಈಗಾಗಲೇ ಆಡಳಿತದಲ್ಲಿ ಕಾರ್ಯ ಪ್ರವೃತ್ತವಾಗಿವೆ. ಸಿರಿಯಾ, ಅಫ್ಘಾನಿಸ್ತಾನ ಮತ್ತು ಆಫ್ರಿಕಾದ ದೇಶಗಳಿಂದ ಲಿಬಿಯಾದ ಮೂಲಕ ಯುರೋಪ್ ರಾಷ್ಟ್ರಗಳಿಗೆ ವಲಸೆಗಾರರ ಸಮಸ್ಯೆ ನೆಪವಾಗಿಟ್ಟುಕೊಂಡು ಭಯ–ದ್ವೇಷ ಹರಡಿ, ಉಗ್ರ ಬಲಪಂಥೀಯ ಪಕ್ಷಗಳು ಬಲಗೊಂಡು ಸರ್ಕಾರದಲ್ಲಿ ಪಾಲುದಾರರಾಗಲು ಮೂಲ ಕಾರಣವೆಂದು ರಾಜಕೀಯ ಪಂಡಿತರ ವಿಶ್ಲೇಷಣೆ ಯಾಗಿದೆ.

ಯೂರೋಪಿನಾದ್ಯಂತ ಆದಂತೆ ಸ್ವಿಡನಿನಲ್ಲೂ ಮುಖ್ಯ ವಾಹಿನಿಯ ಪಕ್ಷಗಳು ಒಂದು ಕಡೆ ನಿರಾಶ್ರಿತ ವಲಸೆಗಾರರ ವಿರುದ್ಧ ನಿಲುವು ತೆಗೆದುಕೊಂಡರೆ, ಇನ್ನೊಂದು ಕಡೆ ಕಾರ್ಮಿಕ ವರ್ಗದ ಬೇಡಿಕೆಯನ್ನು ಕಡೆಗಣಿಸಿದವು. ಆದರೆ, ಸ್ವೀಡನ್ನಿನಲ್ಲಿ ಎಡ ಮತ್ತು ಸಂಘಟಿತ ಕಾರ್ಮಿಕ ಚಳುವಳಿಯ ಬಲದಿಂದಾಗಿ ಉಗ್ರ ಬಲಪಂಥೀಯರು ಬಹಳ ಮುನ್ನಡೆ ಸಾಧಿಸಲು ಸಾಧ್ಯವಾಗಿಲ್ಲ. ಆದರೂ ಸರಕಾರದಲ್ಲಿ ಅವರ ಭಾಗವಹಿಸುವಿಕೆಯ ಸಾಧ್ಯತೆಯಿಂದ ಪರಿಸ್ಥಿತಿ ಬದಲಾಗಲಿದೆ. ಸ್ವೀಡನಿನ ಎಡಪಂಥೀಯರು, ಕಠಿಣ ಅಥವಾ ಮಿತವ್ಯಯ ನೀತಿಗಳ ವಿರುದ್ಧ ಪ್ರಚಾರ ಕೈಗೊಳ್ಳುವ ಜೊತೆಗೆ, ನವ–ನಾಜಿವಾದದ ಜತೆ ನಡುಪಂಥೀಯರು ಶಾಮೀಲಾಗಿರುವುದುನ್ನು ಬಯಲುಮಾಡಬೇಕಾಗಿದೆ. ಜನತೆಯ ಪರವಾದ ಸಮಾಜವಾದಿ ಪರ್ಯಾಯವನ್ನು ನೀಡುವಲ್ಲಿ ಮಹತ್ವದ ಪಾತ್ರ ನಿರ್ವಹಿಸ ಬೇಕಾಗಿದೆ. ●



ಜಗದ ಸುತ್ತ

ನಾಗರಾಜ ನಂಜುಂಡಯ್ಯ

# ಅರ್ಜೆಂಟೈನಾ: ಸಾರ್ವಜನಿಕ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ

ಅರ್ಜೆಂಟೈನಾ ದೇಶದಲ್ಲಿ ಸಾರ್ವಜನಿಕ ಶಿಕ್ಷಣ ದಿಂದ 99 ದಶಲಕ್ಷ ಡಾಲರ್ ಕಡಿತಗೊಳಿಸುವ ಮೌರಿಸಿಯೊ ಮ್ಯಾಕ್ರಿಯರ ಬಲಪಂಥೀಯ ಸರ್ಕಾರದ ಯೋಜನೆಯ ವಿರುದ್ಧ ಜನರು ಪ್ರತಿಭಟಿಸುತ್ತಾ ಬೀದಿಗಳಲ್ಲಿ ಹೋರಾಟ ನಡೆಸುತ್ತಿದ್ದಾರೆ. ಆಗಸ್ಟ್ 29 ರಂದು ವಿವಿಧ ವಿದ್ಯಾರ್ಥಿ ಬಣಗಳು, ಪ್ರಮುಖವಾಗಿ ಎಡಪಂಥೀಯ ವಿದ್ಯಾರ್ಥಿ ಗುಂಪಿನ ಅಡಿಯಲ್ಲಿ ಈ ಹೋರಾಟ ಅರ್ಜೆಂಟೈನಾ ಬೀದಿಗಳಲ್ಲಿ ಮೆರವಣಿಗೆ ನಡೆಸಲಾಗಿದೆ. ಬ್ಯೂನಸ್ ಏರ್ಲೈನ್ಸ್ ಹತ್ತಿರದ ಹಳೆಯ ಕಟ್ಟಡವನ್ನು ಅಕ್ಷರಶಃ ಅಲುಗಾಡುವಂತೆ ಮಾಡಿದೆ. ಆ ನಂತರ ಆಗಸ್ಟ್ 30 ರಂದು ಶಿಕ್ಷಕರು ಮೆರವಣಿಗೆ ಮತ್ತು ಮುಷ್ಕರವನ್ನು ಆಯೋಜಿಸಿದ್ದರು. ಅವರು ತಮಗೆ ಉತ್ತಮವಾದ ಸಂಬಳ ನೀಡಬೇಕೆಂಬ ಬೇಡಿಕೆಯೊಂದಿಗೆ ಬೀದಿಗಿಳಿದಿದ್ದರು. ಶಿಕ್ಷಕರ ಮುಷ್ಕರಕ್ಕೆ ವಿದ್ಯಾರ್ಥಿಗಳು ಕೂಡಾ ಬೆಂಬಲಿಸಿದ್ದಾರೆ. ಅದರಲ್ಲಿ ಸಾರ್ವಜನಿಕ ಶಿಕ್ಷಣದ ಹಕ್ಕಿನ ರಕ್ಷಣೆಯ ಬೇಡಿಕೆ ಪ್ರಮುಖ ವಾಗಿತ್ತು.




**ಅದ್ಭುತ ಸಾಮಾಜಿಕ ಬದ್ಧತೆ**

ಜಾಗತೀಕರಣದ ಈ ದಿನಗಳಲ್ಲೂ, ಜಗತ್ತಿನ ಯಾವುದೇ ದೇಶಗಳ ಸರ್ಕಾರಗಳು ತಮ್ಮ ಸಾಮಾಜಿಕ ಬದ್ಧತೆಗಳ ಮೂಲಕ, ನರ್ಸರಿ ಶಾಲೆಯಿಂದ ಮೊದಲ್ಗೊಂಡು, ಉನ್ನತ ಮಟ್ಟದ ವಿಶ್ವವಿದ್ಯಾಲಯಗಳ "ಶಿಕ್ಷಣ' ಕ್ಕಾಗಿ ಹಣ ಒದಗಿಸಿ ಉಚಿತ ಶಿಕ್ಷಣ ನೀಡುತ್ತಿದ್ದಾರೆ ಎಂದರೆ ನಂಬಲರ್ಹವಾದ ವಿಚಾರವಲ್ಲ ಮತ್ತು ಇದು ಅಸಂಭವ ಎನ್ನುವವರೆ ಹೆಚ್ಚು. ಆದರೆ ನಾರ್ವೆ ಮತ್ತು ಕ್ಯೂಬಾ ದೇಶಗಳಲ್ಲಿ ಶಿಕ್ಷಣವನ್ನು ಉಚಿತವಾಗಿ ಒದಗಿಸಲಾಗಿದೆ. ಇದು ಹೇಗೆ ಸಾಧ್ಯ ವೆಂಬುದನ್ನು ಈ ಎರಡೂ ದೇಶಗಳು ಅಳವಡಿಸಿಕೊಂಡು ತಮ್ಮ ಸರಕಾರಗಳ ಸಾಮಾಜಿಕ ಬದ್ಧತೆಯನ್ನು ಜಗತ್ತಿಗೆ ಎತ್ತಿ ತೋರಿಸಿದ್ದಾರೆ. ನಾರ್ವೆ ದೇಶದಲ್ಲಿನ ತೈಲದಿಂದ ಉತ್ಪತ್ತಿಯಾಗುವ ಸಂಪತ್ತಿನ ಬಾಬ್ತಿಯಲ್ಲಿ ಉನ್ನತ ಶಿಕ್ಷಣದ ಅಭಿವೃದ್ಧಿಗಾಗಿ ವೆಚ್ಚವಾಗುವ ಎಲ್ಲಾ ಹಣವನ್ನು ತಾನೇ ಭರಿಸುತ್ತಿದೆ. ಅದೇ ರೀತಿಯಾಗಿ ಸಮಾಜವಾದಿ ಕ್ಯೂಬಾ ಕೂಡಾ ತನ್ನ ಸಾಮಾಜಿಕ ಬದ್ಧತೆಯ ಯೋಜನೆಯ ಅಡಿಯಲ್ಲಿ, ಶಿಕ್ಷಣದ ಜೊತೆಗೆ ಆರೋಗ್ಯವನ್ನು ಜನರಿಗೆ ಉಚಿತವಾಗಿ ನೀಡುತ್ತಿದೆ. ಈ ದೇಶಗಳಲ್ಲಿ ಯಾವುದೇ ವಿದ್ಯಾರ್ಥಿಗಳು ತಮ್ಮ ಶಿಕ್ಷಣಕ್ಕಾಗಿ ಸಾಲ ಮಾಡುವ ಅಗತ್ಯವಿರುವುದಿಲ್ಲ. ಅವರ ಕನಸುಗಳು ಈ ದೇಶಗಳಲ್ಲಿ ಖಂಡಿತ ಮೊಟಕುಗೊಳ್ಳುವುದಿಲ್ಲ.

ನಾರ್ವೆ, ಕ್ಯೂಬಾ ದೇಶಗಳ ಸಾಲಿಗೆ ಮತ್ತೊಂದು ದೇಶವಾದ ಅರ್ಜೆಂಟೈನಾವು ಸೇರಿಕೊಂಡಿದೆ. ಕೇವಲ ಎರಡು ದಶಕಗಳ ಹಿಂದೆ ಅರ್ಜೆಂಟೈನಾ ದೇಶದ ಅರ್ಧದಷ್ಟು ಜನಸಂಖ್ಯೆ ಬಡತನದ ರೇಖೆ ಗಿಂತ ಕಡಿಮೆ ಇತ್ತು ಎಂದರೆ ಆಶ್ಚರ್ಯ ವಾಗುವುದರಲ್ಲಿ ಸಂಶಯವಿಲ್ಲ. ಅಂತಹ ದೇಶದಲ್ಲಿ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳು ವ್ಯಥೆ ಪಡಬೇಕಾದ ಅಗತ್ಯವಿಲ್ಲ. ಮಕ್ಕಳ ನರ್ಸರಿಯಿಂದ ಉನ್ನತ ಶಿಕ್ಷಣ ದವರೆಗೂ ಯಾವ ವಿದ್ಯಾರ್ಥಿಗಳು ಹಣ ಪಾವತಿ ಮಾಡಬೇಕಾಗಿಲ್ಲ. ಸಾಲವಿಲ್ಲದೆ ಶಿಕ್ಷಣ ಮುಗಿಸಿಕೊಂಡು ಜೀವನ ಆರಂಭಿಸುವ ವ್ಯವಸ್ಥೆ ಅರ್ಜೆಂಟೈನಾದಲ್ಲಿತ್ತು. ಇದಕ್ಕೆ ಕಾರಣ 2003 ರಿಂದ 2015 ದರ ವರೆಗೂ ಆಡಳಿತ ನಡೆಸಿದ ಕಿರ್ಚ್ನರ್ ತಂದ ವ್ಯವಸ್ಥೆ. ಇವರ ಅವಧಿಯಲ್ಲಿ ಬಡತನ ಗಮನಾರ್ಹವಾಗಿ ಕಡಿಮೆಯಾಯಿತು. ಸಾಮಾಜಿಕ ವೇತನವನ್ನು ವಿಸ್ತರಣೆ ಮಾಡಿದ ಕಿರ್ಚ್ನರ್ ಆಡಳಿತದ ಪ್ರಯತ್ನವನ್ನು ವಿಶ್ವಬ್ಯಾಂಕ್ ಕೂಡಾ ಮೆಚ್ಚಿಗೆ ಸೂಚಿಸಿತ್ತು. ಹೆಚ್ಚಿನ ಯುವ ಜನರನ್ನು ಶಿಕ್ಷಣದ ವ್ಯವಸ್ಥೆಯ ಒಳಗೆ ತರಲು ವಿನ್ಯಾಸಗೊಳಿಸಿದ್ದ ವರ್ಧಿತ ರಾಷ್ಟ್ರೀಯ ಗ್ರಾಮೀಣ ಶಿಕ್ಷಣ ಕಾರ್ಯಕ್ರಮ ದ ಅಡಿಯಲ್ಲಿ 8.68 ಲಕ್ಷ ವಿದ್ಯಾರ್ಥಿ ಗಳನ್ನು ಶಾಲೆ ಗಳಿಗೆ ತಂದು ಅರ್ಜೆಂಟೈನಾ ದಲ್ಲಿ ಒಂದು ಬಗೆಯ ಹೊಸ ಶಿಕ್ಷಣದ ಯೋಜನೆಯನ್ನು ಮಾದರಿಯಾಗಿ ರೂಪಿಸಿತ್ತು. ಅರ್ಜೆಂಟೈನಾ ದ ಒಟ್ಟು ಜನಸಂಖ್ಯೆ 4.4 ಕೋಟಿ.

ಇದೀಗ ಮಾರಿಷಿಯೋ ಮ್ಯಾಕ್ರಿ ನೇತೃತ್ವದ ಬಲಪಂಥೀಯ ಸರ್ಕಾರವು ನವ ಉದಾರವಾದ ನೀತಿಯ ಅಡಿಯಲ್ಲಿ, ಅರ್ಜೆಂಟೈನಾ ದೇಶದ ಆರ್ಥಿಕತೆಯನ್ನು ಅವ್ಯವಸ್ಥೆ ಮಾಡಿ ಬಿಕ್ಕಟ್ಟಿನ ಅಂಚಿಗೆ ನೂಕಿದೆ. ಅದರ ಡಾಲರ್ ಸಾಲ ಹೆಚ್ಚಾಗಿದೆ. ಮ್ಯಾಕ್ರಿಯ ಸರ್ಕಾರ ಐ.ಎಂ.ಎಫ್ ಬಳಿ ತಲೆ ಬಾಗಿಸಿದೆ. ಇದರ ಹಿನ್ನೆಲೆಯಲ್ಲಿ ಸಾರ್ವಜನಿಕ ಶಿಕ್ಷಣದ ಮೇಲೆ ಗದಾ ಪ್ರಹಾರ ಮಾಡಿದೆ. 99 ದಶಲಕ್ಷ ಡಾಲರ್ ನಷ್ಟು ಶಿಕ್ಷಣದ ಮೇಲೆ ಕಡಿತವನ್ನು ಮ್ಯಾಕ್ರಿ ಘೋಷಿಸಿದ್ದಾರೆ. ಹಣದುಬ್ಬರ ಏರಿದೆ, ಶಿಕ್ಷಕರ ಸಂಬಳದ ಮೌಲ್ಯ ದುರ್ಬಲ ಗೊಂಡಿದೆ. ಇದರಿಂದ ಜನರು ಬೀದಿಗಿಳಿದು ಹೋರಾಟ ನಡೆಸಿದ್ದಾರೆ. ಇವರ ಮುಖ್ಯ ಘೋಷಣೆ ಸಾರ್ವಜನಿಕ ಶಿಕ್ಷಣದ ಹಕ್ಕಿನ ರಕ್ಷಣೆ. ಅಕ್ಟೋಬರ್ 27 ರಂದು ಅರ್ಜೆಂಟೈನಾ ಮತ್ತೊಂದು ಅಧ್ಯಕ್ಷೀಯ ಚುನಾವಣೆಯನ್ನು ಎದುರಿಸಬೇಕಾಗಿದೆ. ವಿದ್ಯಾರ್ಥಿ ಗಳಿಗೆ ಮಾಡಿದ ಈ ದ್ರೋಹವು ಬಲಪಂಥೀಯ ರಾಜಕೀಯದ ಮೇಲೆ ತುಂಬಾ ದುಷ್ಪರಿಣಾಮಗಳನ್ನು ಬೀರುತ್ತದೆ ಎಂಬುದರಲ್ಲಿ ಸಂಶಯವಿಲ್ಲ. ಜೊತೆಗೆ ನವ ಉದಾರವಾದದ ಪರಿಣಾಮವಾಗಿ ಕಾರ್ಮಿಕರ ಹಲವಾರು ಸವಲತ್ತುಗಳನ್ನು ಮೊಟಕು ಗೊಳಿಸಲಾಗಿದೆ. ಇದರ ವಿರುದ್ಧ ಸೆಪ್ಟೆಂಬರ್ 24 ರಂದು ಎಡ ಪಕ್ಷಗಳ ನೇತೃತ್ವದ ಕಾರ್ಮಿಕ ಸಂಘಟನೆಗಳು ಯಶಸ್ವಿಯಾದ ಮುಷ್ಕರ ನಡೆಸಿ, ಮ್ಯಾಕ್ರಿ ಸರಕಾರಕ್ಕೆ ಎಚ್ಚರಿಕೆ ಕೊಟ್ಟಿದ್ದಾರೆ. ಈ ಎಲ್ಲಾ ಬೆಳವಣಿಗೆಗಳ ಹಿನ್ನೆಲೆಯಲ್ಲಿ ಅಧ್ಯಕ್ಷೀಯ ಚುನಾವಣೆಯಲ್ಲಿ ಏನಾಗುವುದೋ ಕಾದು ನೋಡಬೇಕು. ●


JANASHAKTHI KANNADA VARA PATRIKE OCTOBER 1-7, 2018 Price: Rs. 10/- Date of Publication: 28 SEPTEMBER 2018 RNI No. KARKAN /2006/17926 Posted on every Saturday
"REGISTERD" Postal Reg. No. RNP/KA/BGS/2078/2016-18 Posted at Bangalore PSO, BG - 560026 Licensed to Post without prepayment License No. WPP-283

## ದೇಶಕ್ಕಾಗಿ ಕ್ರಾಂತಿಗಾಗಿ ಎರಡೂ ಬದಿಯಲ್ಲಿ ಕರಗಿದ ಮೇಣದ ಬತ್ತಿ

# ಕೊಂಡಪಲ್ಲಿ ಕೋಟೇಶ್ವರಮ್ಮ

– ಎನ್. ಗಾಯತ್ರಿ –

**ವಿಶಾಖಪಟ್ಟಣದಲ್ಲಿ ಸೆಪ್ಟೆಂಬರ್ 18ರ ರಾತ್ರಿ ಕೊನೆಯುಸಿರೆಳೆದ ತೆಲಂಗಾಣದ ಮಹಾನ್ ಹೋರಾಟಗಾರ್ತಿ ಕೊಂಡಪಲ್ಲಿ ಕೋಟೇಶ್ವರಮ್ಮ ಚಳುವಳಿಯೊಂದರಲ್ಲಿ ಭಾಗಿಯಾಗುವ ಹೆಣ್ಣಿನ ತ್ಯಾಗದ ಪರಾಕಾಷ್ಠೆಗೆ ಸಂಕೇತವಾದರು. ಹೋರಾಟಗಳ ನಾಡಾದ ಆಂಧ್ರದಲ್ಲಿ ಆ ಹೋರಾಟಗಳಿಗೆ ಸರ್ವಶಕ್ತಿಯನ್ನು ಒದಗಿಸಿದ ಹೋರಾಟಗಾರ್ತಿಯರಲ್ಲಿ ಕೋಟೇಶ್ವರಮ್ಮ ಒಬ್ಬರು. ಆಂಧ್ರದ ಸುಧಾರಣಾವಾದಿ ಚಳುವಳಿ, ಸ್ವಾತಂತ್ರ್ಯ ಚಳುವಳಿ, ಕಮ್ಯುನಿಸ್ಟ್ ಚಳುವಳಿ ಮತ್ತು ನಕ್ಸಲ್ ಬಾರಿ ಚಳುವಳಿಯೆಲ್ಲವಕ್ಕೂ ಸಾಕ್ಷಿಯಾದ ಇವರು ರಚಿಸಿರುವ 'ಒಂಟಿ ಸೇತುವೆ' ಆತ್ಮ ಕಥಾನಕ ಆಂಧ್ರದಲ್ಲಿ ಆರೇಳು ದಶಕಗಳ ಕಾಲ ನಡೆದ ಕ್ರಾಂತಿಕಾರಿ ಹೋರಾಟದ ಸ್ವರೂಪವನ್ನು ಸ್ತ್ರೀನೆಲೆಯಿಂದ ರಚಿಸಿದ ಮಹತ್ವದ ಕೃತಿಯಾಗಿದೆ. ಇದನ್ನು ಓದುವುದು, ಇದರಿಂದ ಸ್ಫೂರ್ತಿ ಪಡೆಯುವುದು, ಇದರ ಬಗ್ಗೆ ಬರೆಯುವುದು ಅವರನ್ನು ನೆನೆಸಿಕೊಳ್ಳಬಹುದಾದ ಅತ್ಯುತ್ತಮ ವಿಧಾನ. ಅವರ ನಿಧನಕ್ಕೆ ಮೊದಲೇ ಬರೆದ ಈ ಬರಹದ ಪ್ರಕಟಣೆ ಕೋಟೇಶ್ವರಮ್ಮ ಅವರಿಗೆ ನಮ್ಮ ಶ್ರದ್ಧಾಂಜಲಿಯ ಭಾಗ.**




'ಒಂಟಿ ಸೇತುವೆ' ಎರಡು ನೆಲೆಯಲ್ಲಿ ಮುಖ್ಯವಾದದ್ದು. ಒಂದು, ಇದರಲ್ಲಿ ಆಂಧ್ರದದಲ್ಲಿ ಆರೇಳು ದಶಕಗಳ ಕಾಲ ನಡೆದ ಕ್ರಾಂತಿಕಾರಿ ಹೋರಾಟದ ಒಂದು ವಿರಾಟ್ ಸ್ವರೂಪ ಬಿಚ್ಚಿಕೊಳ್ಳುತ್ತದೆ. ಕೋಟೇಶ್ವರಮ್ಮ ಅವರು ಈ ಅವಧಿಯಲ್ಲಿ ಸುಧಾರಣಾ ಚಳುವಳಿ, ರಾಷ್ಟ್ರೀಯ ಚಳುವಳಿ, ಕಮ್ಯೂನಿಸ್ಟ್ ಚಳುವಳಿ ಹಾಗೂ ನಕ್ಸಲ್ ಬಾರಿ ಚಳುವಳಿಯೆಲ್ಲವಕ್ಕೂ ಸಾಕ್ಷಿಯಾದವರು. ಈ ಹೋರಾಟದ ಅತ್ಯಂತ ಸಣ್ಣ ವಿವರಗಳನ್ನು ಬಿಡದೆ ಪ್ರಸ್ತಾಪಿಸುವ ಲೇಖಕಿ ಆ ಕಾಲದ ಯುಗಧರ್ಮವನ್ನು ನಮಗೆ ದೃಶ್ಯರೂಪದಲ್ಲಿ ಕಾಣಿಸುತ್ತಾರೆ. ಅವರು ಎಲ್ಲ ಚಳುವಳಿಗಳ ಒಳಿತು–ಕೆಡಕುಗಳನ್ನು ಹತ್ತಿರದಿಂದ ಕಂಡವರು. ಮತ್ತೊಂದು, ಆಪ್ತವಾಗಿ ತೆರೆದುಕೊಳ್ಳುವ ಅವರ ಬದುಕಿನ ಹೋರಾಟದ ಚಿತ್ರಣ. ಚಳುವಳಿಗಳಿಂದಾಗಿ ಸಮಾಜದಲ್ಲಿನ ಕೌಟುಂಬಿಕ ಜೀವನ ಹೇಗೆ ಬಳಲುತ್ತದೆ, ಎಂಬುದನ್ನು ಸ್ವತಃ ಅನುಭವಿಸಿ ಬಲ್ಲವರು. ಆದ್ದರಿಂದ ಈ ಹೋರಾಟದ ಕಥೆ ಅವರ ಕಥೆ ಮಾತ್ರವಾಗದೆ, ಆ ಕಾಲದ ಹೋರಾಟದ ಹೆಣ್ಣುಗಳ ಕಷ್ಟ, ಸಾಮರ್ಥ್ಯ ಪರಿಚಯಿಸುವ ವಿಶಾಲವಾದ ಆಯಾಮ ಪಡೆದುಕೊಂಡು ಇದಕ್ಕೊಂದು ಚಾರಿತ್ರಿಕ ಮೌಲ್ಯ ಕೊಟ್ಟಿದೆ.

ಹೋರಾಟಗಳ ನಾಡಾದ ಆಂಧ್ರದ ಕೃಷ್ಣ ಜಿಲ್ಲೆಯ ಪಾಮರುವಿನಲ್ಲಿ, ಅನುಕೂಲಸ್ಥ ಮಧ್ಯಮ ವರ್ಗದ ರೆಡ್ಡಿ ಕುಟುಂಬದಲ್ಲಿ 1919ರಲ್ಲಿ ಹುಟ್ಟಿದ ಕೋಟೇಶ್ವರಮ್ಮನಿಗೆ, ಮನೆಯಲ್ಲಿ ಅವರು ಹುಟ್ಟಿದಂದಿನಿಂದಲೇ ರಾಷ್ಟ್ರೀಯತಾವಾದದ ಪರಿಸರ ದೊರಕಿತ್ತು. ಬಾಲ್ಯದಲ್ಲಿ ಅವರು ಕಂಡ ಸದಾ ಚರಕದಿಂದ ನೂಲು ತೆಗೆಯುತ್ತಾ ಕುಳಿತಿರುತ್ತಿದ್ದ ತಾಯಿ, ಅವರ ಬದುಕಿನ ಕೊನೆಯವರೆಗೂ ಅವರ ಎಲ್ಲ ಹೋರಾಟದ ಚಟುವಟಿಕೆಗಳಿಗೆ ಬೆಂಬಲವಾಗಿ ನಿಂತವರು. ಚಿಕ್ಕವಳಿರುವಾಗ ಸುಶ್ರಾವ್ಯವಾಗಿ ಹಾಡುತ್ತಿದ್ದ ಕೋಟೇಶ್ವರಮ್ಮನ ಸುಮಧುರ ಕಂಠಕ್ಕೆ ತಂದೆ ಹೆಮ್ಮೆ ಪಡುತ್ತಿದ್ದರು. ಅವರಿಗೆ ನಾಲ್ಕೈದು ವರ್ಷವಿದ್ದಾಗಲೇ ಸೋದರ ಮಾವ ವೀರಾರೆಡ್ಡಿಯೊಂದಿಗೆ ಅವರ ಮದುವೆ ನಡೆದುಹೋಗಿತ್ತು. ಮದುವೆಯಾದ ಎರಡು ವರ್ಷಕ್ಕೆ ಅವರ ಗಂಡ ಕ್ಷಯ ರೋಗದಿಂದ ತೀರಿಹೋಗಿದ್ದರು. ಒಟ್ಟಿನಲ್ಲಿ ಅವರಿಗೆ ಆರೇಳು ವರ್ಷ ವಯಸ್ಸಾಗಿದ್ದಾಗಲೇ ಅವರಿಗೆ ವಿಧವೆಯ ಪಟ್ಟ ಬಂದಿತ್ತು.

ಮೊದಲ ಬಾರಿಗೆ ಗಾಂಧಿಯನ್ನು ನೋಡಿದ ದೃಶ್ಯವನ್ನು ಅವರು ಹೃದಯಂಗಮವಾಗಿ ವಿವರಿಸುತ್ತಾರೆ. ಅವರಿನ್ನು ಆಗ ಐದನೆಯ ತರಗತಿಯಲ್ಲಿ ಓದುತ್ತಿದ್ದರು. ಶಾಲೆಯಿಂದ ಮನೆಗೆ ಹೊರಟ್ಟಿದ್ದಂತೆ, ಗಾಂಧಿ ಅವರ ಊರಿಗೆ ಬಂದಿದ್ದರಿಂದ ಒಂದು ಸಾರ್ವಜನಿಕ ಸಭೆ ಏರ್ಪಾಡಾಗಿತ್ತು. ಗಾಂಧಿಯನ್ನು ಸ್ವಾಗತಿಸಲೋಸ್ಕರ ಮಹಿಳೆಯರು ಸಾಲುಗಟ್ಟಿ ನಿಂತಿದ್ದರು. ಅವರೆಲ್ಲಾ ತಮ್ಮ ಮೈಮೇಲಿದ್ದ ಆಭರಣಗಳನ್ನು ಗಾಂಧಿಗೆ ಬಿಚ್ಚಿಕೊಡುತ್ತಿದ್ದರು. ಅದನ್ನು ನೋಡಿದ ಕೋಟೇಶ್ವರಮ್ಮ ತಕ್ಷಣವೇ ಉದ್ವೇಗದಿಂದ ಅವರ ಮೈಮೇಲಿದ್ದ ಸುಲಭವಾಗಿ ಕಳಚಬಹುದಾಗಿದ್ದ ಆಭರಣಗಳನ್ನು ತೆರೆದು ಗಾಂಧಿಗೆ ಕೊಟ್ಟುಬಿಟ್ಟರು. ಹೀಗೆ ಚಿಕ್ಕ ವಯಸ್ಸಿನಲ್ಲಿಯೇ ಗಾಂಧೀಜಿಯವರಿಂದ ಆಶೀರ್ವಾದ ಪಡೆದ ಈಕೆ ನಂತರ ದೊಡ್ಡ ಹೋರಾಟಗಾರ್ತಿಯೇ ಬೆಳೆಯುತ್ತಾರೆ. ಮಹಿಳಾ ಚಳುವಳಿಗಾರರು ಊರಿಗೆ ಬಂದಾಗ ಅವರೊಂದಿಗೆ ಅಸ್ಪೃಶ್ಯತೆಯನ್ನು ವಿರೋಧಿಸುತ್ತಾ, ಹೆಂಡವನ್ನು ವಿರೋಧಿಸುತ್ತಾ, ಖದ್ದರು ಪ್ರಚಾರ, ವಿದೇಶಿ ವಸ್ತು ಬಹಿಷ್ಕಾರದಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಹಾಡುಗಳನ್ನು ಹಾಡುತ್ತಿದ್ದರು. ಅವರ ಮಧುರ ಕಂಠದಿಂದ ದೇಶಭಕ್ತಿಯ ಹಾಡುಗಳನ್ನು ಸಭೆಗಳಲ್ಲಿ ಹಾಡುತ್ತಿದ್ದರು.

ಬುದ್ದಿ ಬರುವುದಕ್ಕಿಂತ ಮುಂಚೆಯೇ ವಿಧವೆಯಾಗಿದ್ದ ಕೋಟೇಶ್ವರಮ್ಮ ಕಮ್ಯುನಿಸ್ಟ್ ಕಾರ್ಯಕರ್ತರಾಗಿದ್ದ ಕೊಂಡಪಲ್ಲಿ ಸೀತಾರಾಮಯ್ಯನವರನ್ನು ಮದುವೆಯಾದದ್ದು ಕ್ರಾಂತಿಕಾರಿಗಳಲ್ಲಿ ಉತ್ಸಾಹವನ್ನು, ನೆಂಟರಲ್ಲಿ ದ್ವೇಷವನ್ನು ಒಟ್ಟಿಗೆ ಹುಟ್ಟಿಸಿತು. ಮದುವೆಯ ನಂತರ ಆಕೆಯೂ ಕಮುನಿಸ್ಟ್ ಪಕ್ಷ ಸೇರಿ, ಎರಡು ಬಾರಿ ಪಕ್ಷ ನಿಷೇಧಿಸಲ್ಪಟ್ಟಾಗ ಭೂಗತಳಾಗಿ ಪಡಬಾರದ ಪಾಡು ಪಟ್ಟ ಕೋಟೇಶ್ವರಮ್ಮನ ರೋಮಾಂಚಕಾರಿ ಜೀವನಗಾಥೆ ಇಲ್ಲಿ ಬಿಚ್ಚಿಕೊಳ್ಳುತ್ತೆ. ತೆಲಂಗಾಣ ಹೋರಾಟದ ಕಥೆಯನ್ನು ಕುರಿತು ಈಗಾಗಲೇ ಹಲವಾರು ಪುಸ್ತಕಗಳನ್ನು ಕಮ್ಯುನಿಸ್ಟ್ ನಾಯಕರು ರಚಿಸಿದ್ದಾರೆ. ಆದರೆ ಹೆಣ್ಣಿನ ನೆಲೆಯಿಂದ ರಚಿತವಾದ ಈ ಪುಸ್ತಕದ ವಿಶೇಷವೇನೆಂದರೆ, ಕಮ್ಯುನಿಸ್ಟ್ ಚಳುವಳಿಯ ಅಧ್ಯಯನಕ್ಕೆ ಇಲ್ಲಿ ಲಿಂಗಾಧಾರಿತ ದೃಷ್ಟಿಕೋನವೊಂದು ದಕ್ಕಿದೆ.

ರಾಜ್ಯ ಕಮ್ಯೂನಿಸ್ಟ್ ನಾಯಕರಿಂದ ಮೊದಲಗೊಂಡು ತಾಲ್ಲೂಕು ಮಟ್ಟದ ನಾಯಕರವರೆಗೆ ಎಲ್ಲರೂ ಭೂಗತ ಜೀವನಕ್ಕೆ ನಡೆದರು. ಆಗ ರಹಸ್ಯ ಕಾರ್ಯಾಚರಣೆ ನಡೆಸಲು ನಾಯಕರ ಪತ್ನಿಯರನ್ನು, ಕೆಲವು ಮಹಿಳಾ ಕುಟುಂಬ ಸದಸ್ಯರನ್ನು ಪಕ್ಷವು ಹೋರಾಟಕ್ಕೆ ಇಳಿಸಿತು. ಇಂತಹ ಹೋರಾಟಗಳಲ್ಲಿ ಕೋಟೇಶ್ವರಮ್ಮ ಧೈರ್ಯವಾಗಿ ಮುನ್ನುಗ್ಗಿ ನಡೆದುದಲ್ಲದೆ, ಅವರ ತಾಯಿಯು ಈ ಹೋರಾಟದಲ್ಲಿ ಧುಮುಕಿದರು. ಅವರು ಅಡಗುತಾಣಗಳು, ಸರಿಯಾಗಿ ಊಟ, ನಿದ್ರೆಯಿಲ್ಲದೆ, ಸಣ್ಣ ಮಕ್ಕಳನ್ನು ದೂರವಿಟ್ಟ ಈ ಮಹಾತಾಯಿಯರು ಅನುಭವಿಸಿದ ಸಂಕಟ, ನೋವು– ಎಲ್ಲವೂ ಈ ಆತ್ಮ ಕಥಾನಕದಲ್ಲಿ ಸವಿಸ್ತಾರವಾಗಿ ಚಿತ್ರಿತವಾಗಿದೆ. ಭೂಗತರಾಗಿದ್ದಾಗ, ತಮ್ಮ ಇರವು ಪೋಲೀಸರಿಗೆ ತಿಳಿಯಬಾರದೆಂದು ಬಸಿರಾದ ಮಹಿಳೆಯರು ತಮ್ಮ ಬಸಿರು ಇಳಿಸಿಕೊಳ್ಳುತ್ತಿದ್ದುದು, ಯಾವುದೋ ಗಂಡಸರಿಗೆ ರಕ್ಷಣೆಗಾಗಿ ಅವರ ಗಂಡಂದಿರಂತೆ, ಮಗಳಂತೆ, ತಾಯಿಯಂತೆ ಪಾತ್ರವಹಿಸಿ ಪ್ರಯಾಣ ಮಾಡುತ್ತಿದ್ದುದು, ಇವೆಲ್ಲಾ ಅಂದಿನ ಕ್ರಾಂತಿಕಾರಿ ಹೆಣ್ಣುಮಕ್ಕಳು ತೆಗೆದುಕೊಳ್ಳುತ್ತಿದ್ದ ರಿಸ್ಕ್ ಗಳಾಗಿದ್ದವು.

ಪಕ್ಷದ ಮಹಿಳಾ ಸಂಘಗಳ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಕೊಂಡ ಕೋಟೇಶ್ವರಮ್ಮ ರಾತ್ರಿ ಶಾಲೆಗಳನ್ನು ತೆರೆದು ಶಿಕ್ಷಣ ನೀಡುವುದರೊಂದಿಗೆ ಅಂತರ್ಜಾತೀಯ ವಿವಾಹ, ವಿಧವಾ ವಿವಾಹಗಳನ್ನು ನಡೆಸುವಲ್ಲಿ ಮುಂದಾದರು. ಗುಂಟೂರು ಜಿಲ್ಲೆಯಲ್ಲಿ ಅವರು ರಾಜ್ಯಮಟ್ಟದ ಸಮಾವೇಶವನ್ನು ಏರ್ಪಡಿಸಿದಾಗ ಅದರಲ್ಲಿ ಹಜರಾ ಬೇಗಂರಂತಹ ಹಿರಿಯ ನಾಯಕಿಯರು ಭಾಗವಹಿಸಿದ್ದರು. ಪಕ್ಷ ಪ್ರಕಟಿಸುತ್ತಿದ್ದ "ಆಂಧ್ರ ಮಹಿಳಾ" ಪತ್ರಿಕೆಗೂ ಕೆಲಸ ಮಾಡಿದರು.

ಕೋಟೇಶ್ವರಮ್ಮನ ಹೋರಾಟದ ಬದುಕಿನ ಜೊತೆಗೆ ಅವರ ಕಲಾವಿದೆಯ ವ್ಯಕ್ತಿತ್ವವೂ ಈ ಪುಸ್ತಕದಲ್ಲಿ ಚಿತ್ರಿತವಾಗಿದೆ. ಸಾರ್ವಜನಿಕ ಸಭೆಗಳಲ್ಲಿ ಹಾಡುವುದರ ಮೂಲಕ ರಾಜಕೀಯ ರಂಗ ಪ್ರವೇಶಿಸಿದ ಈಕೆ, ಸಾಹಿತ್ಯ, ಸಾಂಸ್ಕೃತಿಕ ರಂಗದಲ್ಲೂ ತಮ್ಮ ಕ್ರಿಯಾಶೀಲತೆಯನ್ನು ತೋರಿದರು. 1943ರಲ್ಲಿ ಅಭ್ಯುದಯ ರಚಯಿತಲು ಸಂಘಂ( ಪ್ರಗತಿಶೀಲ ಲೇಖಕರ ಸಂಘ) ಹುಟ್ಟಿ ಕಾರ್ಯ ನಿರ್ವಹಿಸತೊಡಗಿದಾಗ ಮೊದಲಿಗೆ ಗುರುಜಾಡರ ಗೌರವಾರ್ಥ "ಕನ್ಯಾಶುಲ್ಕ" ನಾಟಕದಲ್ಲಿ ಅಭಿನಯಿಸಿದರು. ಅನಂತರ "ಪ್ರಜಾನಾಟ್ಯ ಮಂಡಲಿ" ಹುಟ್ಟಿಕೊಂಡಾಗ ಅದು ಪ್ರದರ್ಶಿಸಿದ 'ಮುಂದಡಗು', 'ಮಾಭೂಮಿ', ನಾಟಕಗಳಲ್ಲೂ ಕೋಟೇಶ್ವರಮ್ಮ ಅಭಿನಯಿಸಿದರು. ಬರಗಾಲದ ದೃಶ್ಯಗಳನ್ನು ಕಣ್ಣಿಗೆ ಕಟ್ಟುವಂತಹ 'ಇದೇ ಲೋಕ' ನಾಟಕದಲ್ಲಿನ ಕೋಟೇಶ್ವರಮ್ಮನ ಅಭಿನಯಕ್ಕೆ ಅಪಾರ ಮೆಚ್ಚುಗೆ ವ್ಯಕ್ತವಾಯಿತಲ್ಲದೆ, ಸೋವಿಯೆತ್ ದೇಶದ ಪ್ರತಿನಿಧಿಗಳು ಅವರಿಗೆ ಬಹುಮಾನ ಕೊಟ್ಟು ಸನ್ಮಾನಿಸಿದರು.

ಹೋರಾಟದ ಅಜ್ಞಾತವಾಸವೆಲ್ಲಾ ಮುಗಿದ ಮೇಲೆ ಪಕ್ಷ ಬಹಿರಂಗವಾಗಿ ಚಟುವಟಿಕೆ ಆರಂಭಿಸಿದಾಗ ಕೋಟೇಶ್ವರಮ್ಮ ಕ್ರಿಯಾಶೀಲವಾಗಿ ತಮ್ಮನ್ನು ತೊಡಗಿಸಿಕೊಂಡರು. 1952ರ ಚುನಾವಣೆಯಲ್ಲಿ ನಡೆದ ಬಿರುಸಿನ ಚುನಾವಣಾ ಪ್ರಚಾರ ಕಾರ್ಯದಲ್ಲಿ ಇತರ ಮಹಿಳಾ ನಾಯಕರೊಂದಿಗೆ ಕೋಟೇಶ್ವರಮ್ಮ ಕೂಡ ಭಾಗಿಯಾದರು. ಒಮ್ಮೆ ಕಾಮ್ರೇಡ್ ಪಾರ್ವತಿ ಕೃಷ್ಣನ್ ಅವರ ಜೊತೆಗೂಡಿ ಚುನಾವಣಾ ಪ್ರಚಾರ ಕೈಗೊಂಡರು. 1952ರ ಚುನಾವಣೆಯ ವೇದಿಕೆಗಳಲ್ಲಿ ಮೃತವೀರರ ತ್ಯಾಗವನ್ನು ನೆನಪಿಸುವಂತೆಯೇ ಮಹಿಳೆಯರು ಹಾಡುಗಳನ್ನು ಹಾಡುತ್ತಿದ್ದರು. ಈ ಸಂದರ್ಭದಲ್ಲಿ ಹಾಡಲೆಂದೇ ಕೋಟೇಶ್ವರಮ್ಮ ಹಲವಾರು ಗೀತೆಗಳನ್ನು ರಚಿಸಿದರು. ಅವರು ಬರೆದ "ತೆಲಗು ದೇಶವಮ್ಮ ನಮ್ಮದು" ಕವನ ಅಪಾರ ಜನಪ್ರಿಯತೆಯನ್ನು ಗಳಿಸಿದ್ದಲ್ಲದೆ, ಅದು ಹೋರಾಟದ ಜನರ ಬಾಯಲ್ಲಿ ಸದಾ ಗುಣುಗುಣಿಸತೊಡಗಿತು.

ಭೂಗತ ಹೋರಾಟದಲ್ಲಿದ್ದಾಗ ಮೃತನಾದ ವೀರಯೋಧನ ಪತ್ನಿಯೊಂದಿಗೆ ಸಂಬಂಧ ಬೆಳೆದು ಪತ್ನಿ ಕೋಟೇಶ್ವರಮ್ಮನಿಂದ ದೂರ ಸರಿದ ಸೀತಾರಾಮಯ್ಯ ಹೋಗುವಾಗ ಮಕ್ಕಳನ್ನು ತನ್ನೊಡನೆ ಕರೆದುಕೊಂಡು ಹೋಗಿ ಪತ್ನಿಯನ್ನು ತಬ್ಬಲಿ ಮಾಡಿದರು. ಆ ಸಂದರ್ಭದಲ್ಲಿ ಎಷ್ಟೇ ದುಃಖ ತುಂಬಿದ್ದರೂ ಜೀವನ ನಿರ್ವಹಣೆಗೆ, ಬದುಕಿಗೊಂದು ಅರ್ಥ ಕಂಡುಕೊಳ್ಳಲು ಬಿಟ್ಟು ಹೋಗಿದ್ದ ಶಿಕ್ಷಣವನ್ನು ಮುಂದುವರೆಸಲು, ದುರ್ಗಾಬಾಯಿ ದೇಶಮುಖ್ ಕಟ್ಟಿದ ಆಂಧ್ರ ಮಹಿಳಾ ಸಭಾದ ಹಾಸ್ಟೆಲ್‌ನಲ್ಲಿದ್ದು ಓದಿ ಮೆಟ್ರಿಕ್ ನಲ್ಲಿ ತೇರ್ಗಡೆ ಹೊಂದಿದರು. ನಂತರ ಕಾಕಿನಾಡ ಪಾಲಿಟೆಕ್ನಿಕ್ ಹಾಸ್ಟೆಲ್ ನಲ್ಲಿ ಮೇಟ್ರನ್ ಆಗಿ ಕೆಲಸ ಮಾಡಿ ತಮ್ಮ ಜೀವನ ನಿರ್ವಹಣೆ ಮಾಡಿಕೊಂಡರು. ದುಃಖ ಮರೆಯಲು ಸಾಹಿತ್ಯ ರಚನೆಯೂ ನಡೆದಿತ್ತು. ಅವರ ಮಕ್ಕಳು ಚಂದು ಮತ್ತು ಕರುಣ ಕೂಡ ಕ್ರಾಂತಿಕಾರಿ ಹೋರಾಟದ ಚೈತನ್ಯವನ್ನು ತಮ್ಮಲ್ಲಿ ಬೆಳೆಸಿಕೊಂಡು ತಾಯಿಯ ಕಣ್ಣ ಮುಂದೆಯೇ ತೀರಿಹೋದದ್ದು ಅವರಿಗೆ ಜೀವನದಲ್ಲಿ ಭಾರಿ ಪೆಟ್ಟನ್ನು ಒದಗಿಸಿತು. ಮಕ್ಕಳ ಸಾವಿನ ನಂತರ, ಮೇಟ್ರನ್ ಹುದ್ದೆಯಿಂದ ನಿವೃತ್ತರಾದ ಮೇಲೆ ಹತ್ತು ವರ್ಷಗಳ ಕಾಲ ಹೈದರಾಬಾದಿನಲ್ಲಿ ರಾಜೇಶ್ವರರಾವ್ ಅವರ ಹೆಸರಿನ ವೃದ್ಧಾಶ್ರಮದಲ್ಲಿ ಕಾಲ ಕಳೆದರು.

ಕಮ್ಯೂನಿಸ್ಟ್ ಚಳುವಳಿಗಾಗಿ ತಮ್ಮ ಸಕಲವನ್ನು ಧಾರೆಯೆರೆದ ಕೋಟೇಶ್ವರಮ್ಮ ಪಕ್ಷ ಇಬ್ಭಾಗವಾದಾಗ ಬಹಳ ನೊಂದುಕೊಂಡರು. "ನನ್ನ ದೃಷ್ಟಿಯಲ್ಲಿ ಪಾರ್ಟಿಯೆಂದರೆ ಒಂದೇ ಕಮ್ಯೂನಿಸ್ಟ್ ಪಾರ್ಟಿ. ಸಿ.ಪಿ.ಐ, ಸಿ.ಪಿ.ಎಂ ಎಂದು ಇಬ್ಭಾಗವಾದರೂ ನಾನು ಕಾಕಿನಾಡಾದಿಂದ ಎರಡು ಪಕ್ಷಗಳಿಗೂ ತಲಾ ಹತ್ತು ರೂಪಾಯಿ ಸದಸ್ಯತ್ವ ಶುಲ್ಕವನ್ನು ಕಳಿಸುತ್ತಿದ್ದೆ. ನಂತರ ಸುಂದರಯ್ಯನವರೇ ಕಳುಹಿಸಬೇಡವೆಂದರು. ನೀನು ಪಕ್ಷದವಳಾಗಿ ನಾಲ್ಕು ಜನಕ್ಕೆ ಉಪಯುಕ್ತಳಾದರೆ ಸಾಕೆಂದರು. ನನ್ನ ಬಳಿಗೆ ಇತ್ತಂಡದವರೂ ಬರುತ್ತಿದ್ದರು. ಆದರೆ ಒಂದು ಪಕ್ಷದವರ ಮನೆಗೆ ಹೋದರೆ, ಇನ್ನೊಂದು ಪಕ್ಷದವರಿಗೆ ಕೋಪ ಬರುತ್ತಿದ್ದ ಅದೆಷ್ಟೋ ಸಂದರ್ಭಗಳನ್ನು ಕಂಡೆ. ಆ ಧೋರಣೆ ನನಗಿಷ್ಟವಾಗುತ್ತಿರಲಿಲ್ಲ. ಹೀಗೆ ಮತ್ತೆ ಮತ್ತೆ ಒಡೆಯುತ್ತ ಹೆಚ್ಚೆಚ್ಚು ಪಕ್ಷಗಳಾದರೆ ನಮ್ಮ ಆಶಯಗಳೆಂದೂ ಈಡೇರವು ಅನಿಸುತ್ತಿತ್ತು." ಹೀಗೆ ಇಂದಿಗೂ ಕೂಡ ಕಮ್ಯುನಿಸ್ಟ್ ಪಕ್ಷಗಳು ಒಂದಾಗುವ ಕನಸನ್ನು ಕಾಣುತ್ತಿದ್ದಾರೆ ಆಕೆ.

"ದೇಶಕ್ಕಾಗಿ, ಕ್ರಾಂತಿಗಾಗಿ ಎರಡೂ ಬದಿಯಲ್ಲಿ ಕರಗಿದ ಮೇಣದ ಬತ್ತಿ ಕೋಟೇಶ್ವರಮ್ಮ" ಎಂದು ಕೋಟೇಶ್ವರಮ್ಮನ ಬದುಕನ್ನು ಕುರಿತಂತೆ ಪಕ್ಷದ ಸಂಗಾತಿಗಳು ಅವರನ್ನು ಕುರಿತು ಪ್ರಶಂಸಿಸಿದ್ದಾರೆ. "ಭೂತ ಭವಿಷ್ಯತ್ತುಗಳಿಗೆ ಆಧಾರವಾಗಿ ನಿಂತು ಅತ್ತ ತಾಯ್ತನಕ್ಕೆ, ಇತ್ತ ಭಾವೀ ಪೀಳಿಗೆಗೆ ಜೀವನವನ್ನು

**ಪುಟ 11 ಕ್ಕೆ**

**JANASHAKTHIKANNADAVARAPATRIKE:** Printed, Published by **G.V.SRIRAMAREDDY**, EMS Bhavana, No.37/A, 8th Cross, Mahalakshmi Layout, BANGALORE-560086 Karnataka on behalf of **COMMUNIST PARTY OF INDIA (MARXIST)** and **Printed at : Kriya Prakashana,** No. 12, 18th Cross, Sampangirama Nagar, Bangalore 560027
Editor : **G.V.SRIRAMA REDDY**